

ಹೊಂಬರ

ಗಡಿಕನ್ನಡದ ಪ್ರಾಂಡನ ಪ್ರೊದ್ಯಾ ಪುಸ್ತಕ

ಯಶವಂತ ಬಿದಕಲ್ಲು

ಯಶವಂತ ಕುಡೇಕಲ್ಲು

ಟೊಂಬರ

ಗೌಡಕನ್ನಡದ [illegible] ಪೊದ್ಯ ಪುಸ್ತಕ

ಯಶವಂತ ಕುಡೆಕಲ್ಲು


ಬಂಟಮಲೆ ಪ್ರಕಾಶನ

2003

TOMBARA -

An anthology of poems in Gowdakannada, a dialect of Sullia and around by Yashawantha Kudekallu, published by Bantamale Prakashana.

Author	:	Yashawantha Kudekallu
First Edition	:	2003
Pages	:	60+10
Cover Design & Illustration by	:	A.K. Himakara
D.T.P.	:	Soft-Tech Computers, Sullia
Printing	:	Digantha Mudrana, Mangalore
Price	:	Rs. 20.00
Publication	:	Bantamale Prakashana



ದಿ| ಪದ್ಮನಾಭ ಮಾಸ್ತರ್

ಅರ್ಪಣೆ, ನನ್ನಪ್ಪಂಗೆ

ಸುರುನ ಮಾತ್

ಗೌಡಕನ್ನಡಲಿ ಪದ್ಯ ಬರ್ರ್ಯೊದು ಯಶವಂತರಿಗೆ ನೀರು ಕುಡ್ದ ಹಾಂಗೆ. ಯಾಕೆಂತೇಳಿರೆ ಆ ಬಾಸೆ ಬಗ್ಗೆ ಅವರ ಅಭಿಮಾನ, ಅನುಭವ, ಶಬ್ದ ಬಂಡಾರ ಅಷ್ಟು ಉಟ್ಟು. ಎಲ್ಲದಕ್ಕಿಂತ ಹೆಚ್ಚ್ ಅವರ ಯೋಚನೆ ಅಷ್ಟೊ ವಿಶಾಲವಾದ್ದ್, ಇದಕ್ಕೆ ಉದಾಹರಣೆ ಆಗಿ ಇಲ್ಲೊಂದು ಅಪರೂಪದ ಪುಸ್ತಕನೇ ತಯಾರಾಗ್ತಾ ಉಟ್ಟು.

'ತೊಂಬರ' ಗೌಡ ಕನ್ನಡದ ಸುರೂನ ಪುಸ್ತಕ. ಗೌಡ ಕನ್ನಡಲಿ ಪದ್ಯ ಬರ್ದವ್ ತುಂಬಾ ಜನ ಇಲ್ಲೆ. ಗೌಡ ಸಮ್ಮೇಳನಗಳ ಸ್ಮರಣ ಸಂಚಿಕೆಗಳಲಿ ದೂರದೂರಕೆ ಕೆಲವು ಪದ್ಯಗಳ ಪ್ರಕಟ ಆದ್ ಬುಟ್ಟರೆ ಬೇರೆ ಪುಸ್ತಕಗ ಇಲ್ಲೆ. ಹೊದ್ದೆಟ್ಟಿ ಭವಾನಿಶಂಕರ ಗೌಡರದ್ದ್ ಬಹುಶಃ ಬಾರೀ ಹಳೆ ಹೆಸ್ರ್. ಅವರ ಕಲ್ಪನೆನೇ ವಿಶೇಷ. ಆ ಕಲೆ ಅವುಕ್ಕೆ ಸಿದ್ದಿಸಿಟ್ಟು. ಅವು ಬರ್ರ್ಯಕೆ ಸುರುಮಾಡಿ ಸುಮಾರ್ 30 ವರ್ಸಂದ ಮೇಲಾತ್. ಆದರೆ ಅದರಂದ ಮೇಲೆ ಆ ರೀತಿಲಿ ನೆಂಪು ಒಳ್ಯವ ರೀತಿನ ಬರವಣಿಗೆ ಮಾಡ್ದವ್ ಇದ್ದಂಗೆ ಕಾಂಬೊದುಲೆ. ಅದೇನಿದ್ದರೂ ಅವು ಅವರ ಪದ್ಯಗಳ ಅಚ್ಚ್ ಹಾಕಿ ಹಂಚದಿದ್ದಿದ್ ಬಾರಿ ನಷ್ಟದ ಸಂಗತಿ. ಆದರೆ ಯಶವಂತ ಕುಡಕಲ್ಲು ಬರ್ರ್ಯಕೆ ಸುರುಮಾಡಿ ಕೆಲವೇ ವರ್ಸಾತ್, ಇದೀಗ ಅದರ್‌ಲಿ ಕೆಲವುದರ ಒಟ್ಟು ಮಾಡಿ ಪುಸ್ತಕದ ರೂಪಲಿ ಹೊರಬರ್ತಾ ಉಟ್ಟು, ಇದ್ ಗೌಡ ಕನ್ನಡದ ಸುರುನ ಕವನ ಸಂಕಲನಾಂತ ಹೆಗ್ಗಳಿಕೆಗೆ ಕಾರಣ ಆದೆ.

ಯಶವಂತ ಇತ್ತೀಚೆಗಷ್ಟೇ ಕಾಲೇಜ್ ಮುಗ್ಸಿದ ಹೈದ. ಕಾಲೇಜಿಲಿ ಇರ್ಕನಳೇ ಅವರ ಪದ್ಯನ ಮಕ್ಕ ಹೇಳಿ ಖುಷಿ ಪಡ್ತಿದ್ದದರ ನಾ ಕಂಡೊಳೆ. ಎನ್.ಎಸ್.ಎಸ್. ಶಿಬಿರಗಳ್‌ಲಿ ಯಶವಂತರ ಪದ್ಯ ಬಾರೀ ಪ್ರಚಾರಲಿ ಉಟ್ಟು. ಲಕ್ಷ್ಮೀಕಾಂತ ಅದಕ್ಕೆ ರಾಗ ಹಾಕಿ ಹಾಡುದರ ಕೇಳಿಕೆ ಬಾರೀ ಖುಷಿ ಆದೆ. ಲಕ್ಷ್ಮೀಕಾಂತನಂತಹ ಸಾವಿರಾರ್ ಜನ ಅಭಿಮಾನಿಗಳ ಯಶವಂತ ಪಡ್ದೊಳೊ. ಹತ್ತ್ ಜನ ಸೇರ್ದಲ್ಲಿ ಅದರ ಹೇಳಿಕೆನೂ ಗಮ್ಮತ್ತಾದೆ. ತಿಳಿ ಹಾಸ್ಯ, ಜನಸಾಮಾನ್ಯರ ಸಂಗತಿಗ, ಊರು, ನೆರೆಕರೆ, ಜಗಳ, ರಗಳೆಗಳ ಪೊರ್ಲುಲಿ ಜೊಡ್ಸಿ ಇಸುವ ಕಲೆಗಾರಿಕೆ ಆ ಪದ್ಯಗಳ್‌ಲಿ ಕಂಡದೆ.

ಯಶವಂತರ ಪದ್ಯಂತೇಳಿರೆ ಅದೊಂದು ಕತೆ ರೀತಿಲಿ ಮುಂದೆ ಹೋಗ್ತಾ ಇದ್ದದೆ. ಒಂದಾದರ ಮೇಲೊಂದು ಸಂಗತಿಗ ನಡೀತಾ ಹೋದೆ. ಮುಕ್ತಾಯಕ್ಕಾಕನ ನೀವುಗೆ ಮನರಂಜನೆನೂ ಸಿಕ್ಕಿದೆ. ನೀತಿನೂ ಸಿಕ್ಕಿದೆ. ಹೊಸ ವಿಷಯದ ಅನುಭವ ಆದೆ. ಆ ಅನುಭವಗ ನಾವುಗೆ ಹೊರಗೆದ್ ಅಲ್ಲ. ಅಲ್ಲಿ ಬರುವ ಜಾಗೆ ಜನಂಗ, ಗೂಡೆಗ, ಹೈದಂಗ ಎಲ್ಲಾ ನಮ್ಮ ಸುತ್ತಳೇ ಒಳೊಂತ ಅನ್ಸಿದೆ. ಅದೇ ಅದರ ವಿಶೇಷ. ಪಾತ್ರಗ ನಮ್ಮ ಪರಿಚಿತರ್, ನಾವುಗೆ ಬೇಕಾದೊವು. ಇಲ್ಲದಿದ್ದರೆ ನಾವುಗೆ ಬೇಕಾದವರದ್ದೇ ವಿಚಾರ ಆಗಿದ್ದದೆ.

ಇನ್ನೊಂದು ಅಂಶ ಹೇಳುದಿದ್ದರೆ ಅದ್ ಯಶವಂತರ ಪದ ಪ್ರಯೋಗದ ಬಗ್ಗೆ. ನಮ್ಮ ಬಾಸೆ ಇಂದ್ ಎಷ್ಟೋ ಬ್ರಷ್ಟ ಆಗುಟು ಇಂಗ್ಲಿಸ್, ಅರ್ಧ ಸಾಲೆಕನ್ನಡ (ಸಂಸ್ಕೃತ ಬೆರ್ಸಿದ್) ಶಬ್ಧಗಳೇ ಬಂದವೆ. ಹಾಗೆಂತ ಹೇಳಿ ನಾವುಗೆ ಅದ್ ರೂಢಿ ಇಲ್ಲದ ಕಾರಣ ಕೈಗೆ ಕೂಡ್ಲೆ ಸಿಕ್ಕುದುಲೆ. ಆದರೆ ಯಶವಂತನ ಪದ್ಯಗಳ ನೋಡಿರೆ ನಮ್ಮ ಮೂಲದ ಶಬ್ಧಗಳೇ ಸಿಕ್ಕುವೆ. ನಮ್ಮ ಪೆರಾಜೆಲಿ ಒಂದು ತರದ ಬಾಸೆ, ಅದ್ಕೆ ತಾಗ್ಯಂಡ್ ಇರುವ ಆಲೆಟ್ಟಿಲಿ ಬಾರಿ ಒಳ್ಳ ಬಾಸೆ ಉಟ್ಟು. ಅದ್ ಬುಟ್ಟರೆ ಗುತ್ತಿಗಾರ್, ಯೇನೆಕಲ್ಲ್‌ಗೆ ಹೋದರೆ ಒಂದು ಚೂರು ಬದ್ಲಾದಾಂಗೆ ಕಂಡದೆ. ಯಶವಂತ ಇದರ ನೊಡುಲಿ ನಮ್ಮ ಬಾಸೆನ ಒಳ ಪದರದೊಳಗೆಂದ ಅಪರೂಪದ ಪದಗಳ ಹುಡ್ಕಿ ತಂದದೆ. ನೋಡ್ತಾ ಇದ್ದಾಂಗೆ ಐವತ್ತ್ ವರ್ಷ ಹಿಂದೆ ಹೋದಾಂಗೆ ಅನ್ಸಿದೆ. ನಮ್ಮ ಹಳೆಕಾಲದ ಹಿರಿಯರ ಎದ್‌ರ್ ಕುದ್ದ್ ಮಾತಾಡ್ದಾಂಗೆ ಆದೆ. ಯಶವಂತ ಹಳೆತಲೆಮಾರ್‌ನವು ಅಲ್ಲ. ಈಗನ ಇಂದ್‌ನ ವ್ಯಕ್ತಿ. ಆದರೆ ನಮ್ಮ ಮೂಲದ ಸಾಂಸ್ಕೃತಿಕ ಸತ್ವಗ ಅವರೊಳಗೆ ಇರುದು ಸ್ಪಷ್ಟವಾಗಿ ಕಂಡದೆ. ಮತ್ತೆ ಕಂಡ್ ಅನುಭವಿಸಿದರ ಸ್ಪಷ್ಟವಾಗಿ, ಸರಳವಾಗಿ, ಸುಲಭಲಿ ಹೇಳುವ ಕಲೆಗಾರಿಕೆ ಉಟ್ಟು. ಇದೇ ಅವರ ಹೆಗ್ಗಳಿಕೆ. ವಸ್ತು ಆಯ್ಕೆ ಕೂಡಾ ಅಷ್ಟೇ. ಮಾನವೀಯತೆ ಎದ್ದ್ ಕಂಡದೆ. ಊರು ಬಗ್ಗೆ, ಜನರ ಬಗ್ಗೆ , ಬಾಸೆ ಬಗ್ಗೆ ಬಾರಿ ಕೊಂಡಾಟ ಇರ್ದು ಎದ್ದ್ ಕಂಡದೆ. ಅದೇ ಅವರ ಒಳಗಿನ ಶಕ್ತಿ. ಹೆಸರ್‌ನ ಆಯ್ಕೆ ನೋಡಿ `ಕುಜಿಲ್ ಸೇಸ ', `ಬಾರ್ಬಾರ್ ಕೇಪಣ್ಣ' ಇವೆಲ್ಲಾ ಜನಸಾಮಾನ್ಯರ, ವಸ್ತು ಬರೇ ಗೌಡ ಜನರ್ದಲ್ಲ. ಅಜ್ಜಿ ಸಾಂಕಿದ ಪುಳ್ಳಿ ಪ್ರೀತಿಸಿದ್ದ ಬ್ಯಾರ್ತಿ ಗೂಡೆನ ಮದುವೆ ಆಗಿ ಮನೆಗೆ ತರ್ದರ್ಲಿ ಕ್ರಾಂತಿಕಾರಿ ನಿಲುವು ಕಂಡದೆ. ಜಾತೀಯತೆನ ಮೀರಿ ಮಾನವತಾವಾದ ಉಟ್ಟು. ಅಜ್ಜಿ ಅವರ ಸ್ವೀಕಾರ ಮಾಡುವ ಸಂಗತಿ ಸಣ್ಣ ವಿಷಯ ಅಲ್ಲ.

ಗೌಡರ ಸಂಸ್ಕೃತಿ ಎದ್ದ್ ಕಾಂಬೊದರ ಆಟಿ ಅಮಾಸೆಲಿ ಅಂದ್ ಪದ್ಯಲಿ ನೋಡಿ, ನಾಯಿ ಕರ್ಕಂಡ್, ಕತ್ತಿ, ಬೆಡಿ ಹಿಡ್ದ್ ಬೇಟೆ ಮಾಡುದು ಊರು ಜನ ಸೇರ್ದ ಸಡಗರ. ಬೇಟೆ ಇಂದ್ ಕಾಂಬಕೆ ಸಿಕ್ಕುದುಲೆ ಆದ್ರೆ ಪದ್ಯ ಒಳ್ಳದೆ. ಕುಜಿಲ್ ಸೇಸ ಗೌಡರ ಸಾಹಸದ ಪ್ರತೀಕ. ಅವಂಗೆ ಗೊತ್ತಿಲ್ಲದ ಕೆಲ್ಸ ಇಲ್ಲೆ. ಒಂದು ರೀತಿಲಿ ಸರ್ವಜ್ಞ, ಅದರೊಟ್ಟಿಗೆ ಅಂವ ಕುಡ್ಕಂತೇಳ್ದು ನಮ್ಮವರ ಒಂದು ಲಕ್ಷಣನೂ ಹೌದು. ಅದರ ಸರಿಯೋ.. ತಪ್ಪೋ.. ಅಂತ ಹೇಳುವ ತೀರ್ಮಾನಕ್ಕೆ ಎಲ್ಲ್ಯಾ ಇಳ್ಯೊದುಲೆ.

'ಗೂಡೆ' ಯಶವಂತರ ಪದ್ಯಲಿ ಶೃಂಗಾರದ ರಸ ತರುವಂತಹದ್ದ್. ಗೂಡೆನ ಕಲ್ಪನೆ ಬಾರೀ ಗಮ್ಮತ್ತ್‌ದ್. ಅದ್ ಅಮ್ಮುಣ್ಣಿ, ಇರ್ದು, ಅತ್ತಿಗೆನ ತಂಗೆ ಇರ್ದು, ಮೀಸೆ ಬಾಕನಲಿ ಕಾಂಬ ಗೂಡೆಗ, ಪೇಟೆನ ಸೊಸೆ, ಕೊಡ್ಗುನ ಬೆಡ್ಗಿ, ಗೂಡೆಗ, ಹೀಂಗೋ ತುಂಬಾ ಕಡೆಲಿ ಬಂದದೆ. ಆದರೆ ಎಲ್ಲ್ಯಾ ಒಂದೇ ರೀತಿದ್ದ್ ಇಲ್ಲೆ. ಒಂದೊಂದರ್‌ಲೂ ಹೊಸತನ ಹೊಸ ಚಿತ್ರಣ ಉಟ್ಟು. ಪ್ರಾಯಕ್ಕೆ ಬಂದ ಗೂಡೆನೊಳಗೆನ ಯೋಚನೆ, ಗುಣ ಸ್ವಭಾವಗಳ ಕಲ್ಪಿಸುವಂತ ವಿಶೇಷ ಹುಡ್ಗಾಟ ಮೆಚ್ಚುವಂತದ್ದ್. ಕೊಡ್ಗುನ ಬೆಡ್ಗಿ ನಮ್ಮ ಬೇರೆನೇ ಲೋಕಕ್ಕೆ ಕರ್ಸಿದೆ. ಉಂಬ ಹಂತಿಲಿ ಗೂಡೆಗೆ ಆನಿಸಿ ಕುದ್ದ್ ಸಂಗ್ತಿ ಸೆಕ್ಸ್‌ನ ಬಾರೀ ಆರೋಗ್ಯಕರವಾಗಿ ಹೊರತಂದದೆ. ಜಾನಪದ ಶೈಲಿನ ಚಿತ್ರಣ ಕಂಡದೆ. ಎಲ್ಲಿಯೂ ಕೊಳ್ಕ್ ಅಂತ ಕಾಂಬೊದುಲೆ.

ಅಣ್ಣಂಗೆ ಮೊದುವೆ ಆತ್‌ಲೆ, ಕೂದೊಲು ಉದ್‌ರಿಟ್ಟು, ತಲೆ ಚಾಣೆ ಆಗುಟು, ಎಲ್ಲಾ ತ್ಯಾಗ ಮಾಡಿಟ್ಟು . ಕವಿನ ನಿಜವಾದ ಮಾನವೀಯ ಮೌಲ್ಯ ಕಂಡ್ ಬಂದದೆ. ಉರ್ಕೊಳ್ಳಿ ಹೈದ ನಮ್ಮೆಲ್ಲಾ ಹುಡ್ಗಾಟದ ಪ್ರತೀಕ. ಎಲ್ಲರ ಜೀವನಲಿನೂ ಈ ಹಂತ ಒಮ್ಮೆ ಬಂದದೆ. ಅದರ ಹಿಡ್ದ್ ಇಸುವ ಕೆಲ್ಸ ಇಲ್ಲಿಟ್ಟು.

ಅದೇನಿದ್ದರೂ 'ತೊಂಬರ'ಕ್ಕೆ ಬಾರೀ ಒಳ್ಳ ಅರ್ಥ ಇರ್ದು. ಕುಟುಂಬದವು ಮನೆವು, ಸಮಾಜದವು ಒಟ್ಟು ಸೇರಿ ಉಂಬ ವಿಚಾರಕ್ಕೆ ಬಡ್ಡಡ್ಕದ ನಮ್ಮ ಹಿರಿಯೊವು ಶ್ರೀಮತಿ ಸಾವಿತ್ರಿ ರವೀಂದ್ರನಾಥ ಅವು ವಿವರ್ಸಿ ಹೇಳ್ದೊ. ನಾವು ಕಳ್ಕಂತಿರುವ ಇಂತಹ ಒಂದು ಶಬ್ಧಕ್ಕೆ ಸಾವಿರ ರೂಪಕೊಟ್ಟ ಯಶವಂತರಿಗೆ ನಮ್ಮ ಅಭಿನಂದನೆ. ಸಾಹಿತ್ಯನ ಹತ್ತ್ ಜನ ಕೂಡಿ ಉಣೊಕು, ಹತ್ತ್ ತಾಯಿ ಮಕ್ಕಳ ಬಾಸೆ ನಮ್ಮ ಒಂದು ಮಾಡೊಕೂಂತ ನಮ್ಮ ಹಾರೈಕೆ. ಯಶವಂತರ ಎರಡನೇ ಪುಸ್ತಕ ಬೇಗ ಬರ್ಲಿ, ನಿಮ್ಮ ಹಾರೈಕೆನೂ ಅದರೊಟ್ಟಿಗೆ ಇರ್ಲಿಂತ ನಮ್ಮ ಹಾರೈಕೆ.

ಎ.ಕೆ. ಹಿಮಕರ

ಎರ್ಡ್‌ನೇ ಮುದ್ರಣಕ್ಕೆ ಸುರೂನ ಮಾತ್

ಆಲೆಟ್ಟಿಲಿ ನಡ್ದ ಸಮ್ಮೇಳನಲಿ ಯುಶವಂತ ಕುಡಕಲ್ಲು ಒಂದು ಪದ್ಯ ಓದಿದೊ. ಅದರ್ಲಿ ಅವರ ಪರಿಸರ ಪ್ರೇಮ, ಪರಂಪರೆನ ಪ್ರೀತಿ, ಮತ್ತೆ ಹಾಸ್ಯ ಪ್ರಜ್ಞೆ ನನ್ನ ಬೆರ್ಗ್ ಮಾಡ್ತ್. ನಂಗೆ ಅವರೊಟ್ಟಿಗೊಮ್ಮೆ ಮಾತಾಡೋಕುಂತಾತ್. ಆದರೆ ಪುರ್ಸೊತ್ತಿಲ್ಲೆ. ಹಾಂಗೆ ಹೊರ್ಟ್ ಬಾಕನ ಅವು ಓಡಿ ಬಂದ್ ಅವರ ಪದ್ಯ ಪುಸ್ತಕ **ತೊಂಬರ**ನ ಕೈಗೆ ಕೊಟ್ಟ್ ನೆಗಾಡ್ದೊ. ನಾನು ದರ್ಮಕೆ ಸಿಕ್ಕಿದ ಪುಸ್ತಕನ ಕುಸೀಲಿ ತಕಂಡ್ ಮನೆಗೆ ಬಂದೆ. ಓದಿಕೆ ಸುರು ಮಾಡ್ದೆ. ನೆಗಾಡ್ದೆ, ಮತ್ತೆ ಮತ್ತೆ ಓದಿದೆ. 'ಉರ್ಕೊಳ್ಳಿ ಹೈದನ ಕಿತಾಪತಿ' ಮಕ್ಕಳಿಗೂ ಓದಿ ಹೇಳೊಕುಂತೇಳಿ ಕರ್ದ್ ಕುದ್ದುರ್ಸಿ ಓದಿಕೆ ಸುರು ಮಾಡ್ದೆ. ಹಜ್ಞಾ ಓದಿಕಾಕನೆ ನೆಗೆ ತಡ್ತ್‌ಲೆ. ಮತ್ತೆ ಓದಿಕೆ ಸುರು ಮಾಡಿಕೆ ಮುಂದೆ ನೆಗೆ ತಡಿಯಾಕಾತ್‌ಲೆ. 'ಎಂತದಪ್ಪ ನೀವು' ಮುಂದೆ ಓದಿ ಹೇಳಿ. ಮತ್ತೆ ಎಲ್ಲೊವು ನೆಗಡೋಮುಂತ ಮಕ್ಕ ಜೋರು ಮಾಡ್ದೊ. ನನ್ನಂದ ಬೊತ್ತಮ್ಮ, ನೀನೇ ಓದಿಕೆ'ಂತೇಳಿ ಪುಸ್ತಕನ ಮಗಳ ಕೈಗೆ ಕೊಟ್ಟೆ, ನಾ ನೆನ್ಸಿ ನೆನ್ಸಿ ನೆಗಾಡಿಕೊಂಡ್ ಕುದ್ದೆ.

ಯಶವಂತಣ್ಣನ ಹಾಸ್ಯ ಪ್ರಜ್ಞೆ ಅವರ ಕವನಗಳ್ಲೆಲ್ಲ ಮಿಂಚಿದೆ. ಕುಜಿಲ್ ಸೇಸನ ವ್ಯಕ್ತಿ ಚಿತ್ರಣಲಿ, ಕೊಟ್ಟೆ ಕಮ್ಮನಾಂಗಿದ್ದ ಕೂಸಣ್ಣ, ಕೂಸಿಗೆ ಹೊಡ್ದ ಮಾಸ್ಟ್ರೀಗೆ ಕಡ್ಪೊತ್ತಿ ತೋರ್ಸಿದವನ ವಿಚಾರಲಿ, ಹೀಂಗೆ ಎಲ್ಲ ಕಡೆಲೂ ಹಾಸ್ಯ ಮಿಂಚಿದೆ. ಎದೆ ತುಂಬ ಬೊಳ್ಪು ಮಾಡ್ದೆ. ಮತ್ತೆ ಕೆಲವು ಕಡೆ ಮನ್ಸ್ ಕರ್ಗುವ ಹಾಂಗೆ ಕೂಡ ಬರ್ದವೆ. ಬೊಂಬ್ಯಾ ಚಡ್ಡಿನ ಕತೆ ಅಂತ್ಯ ಎದೆ ಹಿಂಡಿದೆ. ದೊಡ್ಡ ಮನೆ ಚಾಂಪನ ಸಾವು ಇಂತ ಇನ್ನೊಂದು ಪದ್ಯ. ಚಲನಚಿತ್ರ ಬಿಚ್ಚಿದಾಂಗೆ ಇಲ್ಲಿನ ವಿವರಗ ಬಂದವೆ. ಕ್ಯಾಮರಾ ಕಣ್ಣ್‌ನಾಂಗೆ ಒಂದೂ ಬುಡದೆ ಎಲ್ಲ ವಿವರಗಳ ಕೊಟ್ಟೊಲೋ. ಇದರ್ಲೀ ನಮ್ಮ ಸಂಪ್ರದಾಯನೂ ಪೊರ್ಲುಲಿ ರಿಕಾರ್ಡ್ ಆಗುಟು. ಪರಕಾಯ ಪ್ರವೇಶ ಮಾಡ್ದಾಂಗೆ ಇನ್ನೊಬ್ಬರ ಮನ್ಸ್‌ನ ತೆರ್ದ್ ತೋರ್ಸುವ ಗುಣ ಇವರ ಪದ್ಯಗಳ್ಲಿ ಕನ್ನೆಟಿನ ಎದ್‌ರ್ ನಿತ್ತಾಂಗೆ ಕಂಡದೆ. ನೆಂಟ್ರ್ ಇನ್ನು ಬಾತ್ಲೆಯಾ ಇದಿಕ್ಕೊಂದು ಉದಾಹರ್ಣೆ. ಅಮ್ಮಣಿನ ನೆರ್ದ ಮೊದುವೆಲೂ ಇದ್ ಸ್ಪಷ್ಟ ಆದೆ. 'ಪುರ್ಷಣ್ಣನ ಗೂಡೆ ಹುಡ್ಕಟ' ಮೊನ್‌ಸರ ಸುಬಾವುಗಳ ಬಾರಿ ಪೊರ್ಲುಲಿ ಪ್ರಕಟ ಮಾಡ್‌ದೆ. 'ಮೀಸೆ ಬಾಕನ' ಚಿಗುರು ಮೀಸೆವು ಉಗುರು ಕೆಚ್ಚುವ ಸಂದರ್ಭ, ಜಾತ್ರೆನ ಸಂಭ್ರಮ, ಯಾದರ ಹೆರ್ಕಿ ತಕಂಡರೂ ಯಶವಂತಣ್ಣನ ಕಣ್ಣ್‌ನ ಹೊಳ್ಪು ಅದರ್ಲಿ ಮಿಂಚಿದೆ. ಒಂದೊಂದು ಪದ್ಯನೂ ಎತ್ತಿ ಕಂಡರೆ, ಎಷ್ಟೋ ಬರಿಯಕ್. ಆದರೆ ತಲೆಂದ ದೊಡ್ಡ ಮುಂಡಾಸ್, ಮೂಕುಂದ ದೊಡ್ಡ ಮೂಕ್‌ತಿ ಲಾಯ್ಕಾಕಿಲೆ. ಈ ಪುಸ್ತಕಕ್ಕೆ ಎ.ಕೆ ಹಿಮಕರಣ್ಣ, ಮತ್ತೆ ನನ್ನ ಶಿಷ್ಯ ಸಂಜೀವ ಕುದ್ಪಾಜೆ ಎಲ್ಲ ಬರ್ದೊಲೊ. ಅದರ ನಾ ಪೂರ ಒಪ್ಪಿನೆ.

ಗೌಡ ಬಾಸೆನ ಸರಸ್ವತಿ ನಮ್ಮ ಚಿಗ್‌ರ್ ಮೀಸೆನ ಯಶವಂತಣ್ಣಂಗೆ ಒಲ್ದುಟು. ಅವು ಹೇಳ್ದಾಂಗೆ ಕೋಣಿಯಕೆ ಅದ್ ತಯಾರಾಗುಟ್ಟು. ಹಳೇ ಕಾಲದ ನಮ್ಮ ಮಾತ್‌ನ ಸ್ವಾರಸ್ಯಕ್ಕೆ ಇಲ್ಲಿ ಹೊಸಜೀವ ಬಂದುಟು. ನಮ್ಮ ಮಾತ್‌ನ ನುಡಿಗಟ್ಟ್ ಉದಾಃ 'ಹೊಟ್ಟೆ ಒಡೆವಂಗೆ ಎರ್ಡ್ ಉಂಡ್ ಬಂದೆ 'ಹೊಟ್ಟೆ ಬಿರಿವಾಂಗೆ ಉಂಡರೂ, ಮಾತ್‌ಲಿ ಹೇಳುದು 'ಎರ್ಡ್ ಉಂಡೇ'ಂತ ಇಂತ ಮಾತ್‌ಗ ಅಲ್ಯಲ್ಲಿ ಕಂಡವೆ.

'ಭಾವದ ಬಿಗು, ಜೀವನ ಪ್ರೀತಿ, ಪ್ರಕೃತಿ ಪರಿಸರದ ಆಸಕ್ತಿ, ಕ್ರಾಂತ ದೃಷ್ಟಿ, ಎಲ್ಲ, ಯಶವಂತಣ್ಣನ ಕವನಗಳ್ಲಿ ಕಂಡವೆ. ಈ ಪುಸ್ತಕದ ಎರ್ಡ್‌ನೇ ಮುದ್ರಣ ತಂದವೇಂತ ಕೇಳಿ ತುಂಬ ಸಂತೋಷಾತ್. ಎರ್ಡ್ ಮಾತ್ರ ಅಲ್ಲ ಇದ್ ಎಷ್ಟೋ ಮುದ್ರಣ ಕಾಣಲಿ. ನನ್ನ ಶಿಷ್ಯ ಸಂಜೀವ ಕುದ್ಪಾಜೆ ತನಿಗೆ ಗುರುಂತೇಳಿ ಯಶವಂತಣ್ಣ ಒಪ್ಪಿಕಂಡೊಳೊ. ಹಾಂಗಿರ್ಕನ ಅವರ ಗುರುಗೆ ಗುರುವಾದ ನಾ ಯಶವಂತಂಗೆ ಅಜ್ಜ ಅದಾಂಗಾತ್. ಆದರ್‌ಂದ ಯಶವಂತಂಗೆ ನನ್ನ ಹಾರೈಕೆ - ಆರ್ಶಿವಾದ ಇಷ್ಟೆ. ಅವಂಗೆ ಅವನ ಅಯ್ಯಪ್ಪ ಒಳ್ಳೆ ಹೆಸರ್ ಹಾಕ್ಯೊಳೊ. ಹಾಂಗೆ ಅಂವ ಜೀವನರಂಗಲಿ ಎಲ್ಲದಲ್ಲೂ ಯಶವಂತನಾಗಲಿ, ಕೀರ್ತಿಶಾಲಿಯಾಗಲಿ. ದೇವ್ರು ಅವಂಗೆ ಎಲ್ಲ ಒಳ್ಳೆದ್ ಮಾಡಲಿ.

ಸುಳ್ಯ
18.03.2003.

ಪ್ರೊ. ಕೆ. ಕುಶಾಲಪ್ಪ ಗೌಡ

ಸಂಗತಿ ಹೀಂಗೆ

ಇಲ್ಲಿ ಬಾವ ಎಲ್ಲ ಪದ್ಯಗಳ ಬಹುತೇಕ ನಾ ಕಾಲೇಜು ಮುಕ್ಸದರ ಒಳಗೆ ಬರ್ದಾಗಿತ್ತ್ ಕೆಲವಂತು ಕಾಲೇಜುನ ಸಂಚಿಕೆಗಳಲಿ ಮತ್ತೆ ಪೇಪರ್ಲಿ ಪ್ರಕಟಗೊಂಡಿತ್ತ್. ಸಂಗತಿ ಏನು ತೇಲ್ರೆ ಇಲ್ಲಿ ಬಾವ ಎಲ್ಲ ಪದ್ಯಗಳ ಆದಷ್ಟು ಸುದ್ದ ಗೌಡ ಕನ್ನಡಲಿ ಬರೆಕೆ ನೋಡ್ಯಳೆ ಇಲ್ಲಿ ಬಾವ ವಿಶಯಂಗ ನಮ್ಮೆಲ್ಲರ ಸುತ್ತ ನಡಿವ ವಿದ್ಯಾಮಾನಗಳ ಬಗ್ಗೆ ಎಲ್ಲಕ್ಕಿಂತಲೂ ನಮ್ಮ ಗ್ರಾಮೀಣ ಹಳ್ಳಿ ಪ್ರದೇಶಗಳಲಿ ನಡಿವ ಮೊದುವೆ, ಬೊಜ್ಜ, ದೆವ್ವನಂತ ಸಾಂಸ್ಕೃತಿಕ ಸಮಾರಂಭಗಳ ಬಗ್ಗೆ, ಪ್ರಾಯಕ್ಕೆ ಬಾಕನ ಚಿಗುರ್ ಮೀಸೆನ ಹೈದಂಗಳ ತಲೆನೇ ಹಾಳ್ ಮಾಡುವ ಮಾಮೂಲು ವಿಶಯ ಉಟ್ಟಲೆ, ಅದರ ಬಗ್ಗೆ ಅಲ್ಲದೆ ಜಾತ್ರೆ ಮೊದುವೆ ನಂತ ವಿಷಯ ಪಂಡ್ ಬಾಳಿ ಬೊದ್ಕಿದವರ ಜೀವನ ಕ್ರಮ, ಬೇಟೆನಂತ ಜಾನಪದ ಮನರಂಜನೆ ಬಗ್ಗೆ ಕವನಗಳ ರೂಪಲಿ ವಿವರಣೆ ಕೊಡಿಕೆ ಮಾಡ್ದ ಒಂದು ಸಣ್ಣ ಪ್ರಯತ್ನ ಅಷ್ಟೆ.

ನಾ ಹುಟ್ಟಿದ ಊರುನ ಪರಿಸರನೇ ಕುವೆಂಪುನವು ಬರ್ದ ಕಾನೂರು ಹೆಗ್ಗಡಿತಿ ಕಾದಂಬರಿಲಿ ಚಿತ್ರಿತವಾಗಿರುವಾಂಗೆ ಹಸುರುನ ಕಾಡು, ಸುತ್ತ ಬತ್ತದ ಗದ್ದೆಗ, ಅಡಿಕೆ ತೋಟಂಗ, ಹರ್ದ್ ಸುಮುದ್ರ ರಾಜನ ಬಾಚಿ ತಬ್ಬಿಕೆ ಓಡುವ ಹಳ್ಳಂಗ ಚೋಡಿಗ ಅದರ್ಲಿರುವ ಮೀನುಗ, ಹಕ್ಕಿಗಳ ಮರ್ದಾಟ, ಹೊಟ್ಟ, ಗುಳ್ಳಗಮೆ, ಹಂದಿ ಕೆಂಪ ಬೊರಿಂಕ ಗಳಿಂದ ಕೂಡಿತ್ತ್ ಅಲ್ಲದೆ ನಮ್ಮ ಸಂಸ್ಕೃತೀನ ಕೇಂದ್ರ ಎನಿಸಿಕಂಬ ನಮ್ಮ ಐನ್‌ಮನೆ ಇಲ್ಲಿ ವರ್ಷಂಪ್ರತಿ ಸುಗ್ಗಿ ಹತ್ತಕೆ ಮನೆವು ಊರುನವು ಎಲ್ಲವೂ ಸೇರಿ ನಡಿವ ಕಳಿಯಾಟದ ಉತ್ಸವ ಹೊಸ್ತ್, ಕಾರ್ತಿಂಗಳಹರ್ಕೆ ಹಬ್ಬದಂದ್ ಬಲೇಂದ್ರ ಸಾಮಿನ ಕಳ್ಕುದು ಸತ್ತವರ ಗುರುಕಾರ್ನೂರರೊಟ್ಟಿಗೆ ಹದ್ನಾರರ ಕೊಲೆಗೆ ಸೇರ್ಸ್ದು, ಅಗಲು ಹಾಕುದು, ರಾತ್ರೆ ಸೂಟೆ ಬೊಳ್ಪುಲೇ ಹೋಗಿ ತೋಟಕರೆಲಿ ಮನೆ ಎಲ್ಲವೂ ಸೇರಿ ಗುಳಿಜಂಗೆ ಅಗಲು ಹಾಕಿ ಪ್ರಾರ್ಥನೆ ಮಾಡಿ ತೋಟಲೆ ಎಲ್ಲವು ಕಮ್ಮುನ ಬುಡಲೆ ಗೇಸ್‌ಲೈಟ್ ಬೊಳ್ಪುಲಿ ಕೋಳಿ ಸಾರ್ ಹುಗ್ಗೆ ಉಂಬ ಗುಳಿಂಜನ ಕೋಲ ಆಗಲಿ ವರ್ಷಪ್ರತಿ ನಡಿವ

ಊರುನವು ಎಲ್ಲವೂ ಸೇರಿ ನಡಿವ ಕಳಿಯಾಟದ ಉತ್ಸವ ಹೊಸ್ತ್, ಕಾರ್ತಿಂಗಳಹರ್ಕೆ ಹಬ್ಬದಂಡ್ ಬಲೇಂದ್ರ ಸಾಮಿನ ಕಳ್ಕುದು ಸತ್ತವರ ಗುರುಕಾರ್ನೂರರರೊಟ್ಟಿಗೆ ಹದ್ನಾರರ ಕೊಲೆಗೆ ಸೇರ್ಸ್ನುದು, ಅಗಲು ಹಾಕುದು, ರಾತ್ರೆ ಸೂಟೆ ಬೊಳ್ಪುಲೇ ಹೋಗಿ ತೋಟಕರೆಲಿ ಮನೆ ಎಲ್ಲವೂ ಸೇರಿ ಗುಳಿಜಂಗೆ ಅಗಲು ಹಾಕಿ ಪ್ರಾರ್ಥನೆ ಮಾಡಿ ತೋಟಲೆ ಎಲ್ಲವು ಕಮ್ಮ್ಮನ ಬುಡಲೆ ಗೇಸ್‌ಲೈಟ್ ಬೊಳ್ಪುಲಿ ಕೋಳಿ ಸಾರ್ ಹುಗ್ಗ್ ಉಂಬ ಗುಳಿಂಜನ ಕೋಲ ಆಗಲಿ ವರ್ಷಪ್ರತಿ ನಡಿವ ಕಳಿಯಾಟದಂದು ಕುಟುಂಬದವು ಮನೆವು ನೆಂಟ್ರ್ಯಗ ಎಲ್ಲವೂ ಸೇರಿ ತೊಂಬರ ಮಜೆಲುಲಿ ಸೇರಿ ತೊಂಬರದಡಿಲಿ ಉಂಬ ತೊಂಬರ ಊಟನಾಗಲಿ ಇಂತಹ ಒಂದು ಎಲ್ಲವೂ ಸೇರುವ ಬಾವನಾತ್ಮಕ ಸನ್ನಿವೇಶಗ ಇದಲ್ಲದೆ ಹುಲಿಬೇಟೆಲಿ ದಂತಕತೆಯಾಗಿ ಮೆರ್ದ್ ಬ್ರಿಟಿಷ್ ಸರ್ಕಾರದ ಗೌರವಕೆ ಪಾತ್ರರಾದ ಪಂಡ್‌ನ ಆ ಕಾಲಲಿ ಏನು ಸೌಲಭ್ಯ ಇಲ್ಲದ ಕಾಡುಗುಡ್ಡೆನಂತ ನಮ್ಮೂರ್‌ಲಿ ವಿದ್ಯೆನೇ ಶ್ರೇಷ್ಠಂತ ಆಲೋಚಿಸಿ ನಾಲ್ಕು ಜನಕ್ಕೆ ಒಳ್ಳೆದಾವಾಂಗೆ ಏನೆಲ್ಲ ಕಷ್ಟ ಬಂದ್ ಸಿಕ್ಕಿದ ಮೆಡ್ಲ್ ಮರ್ಯಾದೆಗಳೆಲ್ಲ ಅದ್ಕೆ ಉಪಯೋಗಿಸಿ ಸುರೂಗೆ ಶಾಲೆ ಕಟ್ಟಿಸಿ ಕುಟುಂಬದ ಕೀರ್ತಿ ಬೆಳಗಿದಂತ ಕುಟುಂಬನನೇ ಗುರ್ತಿಸುವಾಂಗೆ ಮಾಡ್ದ ದಿ|| ಶ್ರೀ ಕುಡಕಲ್ಲು ಅಪ್ಪಯ್ಯ ಉಗ್ಗಪನಂತವರ ನೆನ್ಪಿಕಂಬಕೆ ಇಂದು ನಂಗೆ ಹೆಮ್ಮೆ ಅನ್ಸಿದೆ.

ಒಂದೆಡೆ ಅದ್ಭುತ ಪ್ರಗತಿಂದಾಗಿ ಇಂದ್ ಬದ್ಕ್ ಸಂಕೀರ್ಣ ಆಗುತ್ತಾಹೋದೆ. ಯಾರಿಗೂ ಯಾರೊಟ್ಟಿಗೂ ಮಾತಾಡಿಕೆ ಪುರ್ಸೋತಿಲ್ಲೆ ನೆಂಟ್ರ ಮನೆಲಿ ದಿನಗಟ್ಟಲೆ ನಿಲ್ಲುವ ಕ್ರಮಂಗಳೇ ಇಲ್ಲೆ, ಮಾನವೀಯ ಮೌಲ್ಯ ಪ್ರೀತಿನಂತಭಾವನಾತ್ಮಕ ಸಂಬಂಧಗ ದೂರ ಆಕಂಡ್ ಇಂದ್ ಮೊನ್ಸರು ಒಂದೊಂದೇ ದ್ವೀಪ ಆಗುತ್ತಾ ಒಳ. ಎಲ್ಲಿ ನೋಡಿರು ಆಧುನೀಕತೆ ಸೋಗುಗಳೇ. ಈ ಎಲ್ಲದರೊಟ್ಟಿಗೆ ಹೊಂದಿಕೊಂಬಕಾಗದೆ ನಮ್ಮ ಹಳ್ಳಿನ ನಮ್ಮ ಬದ್ಕ್ ಆರಕ್ಕೆ ಏರಿಕಾಗದೆ ಮೂರ ಕ್ಕೆ ಇಳಿಕಾಗದೆ ಅಸಾಯಕತೆಲಿತೊಳಲಾಡಕಾದ ಇಂತ ಪರಿಸ್ಥಿತಿನೂ ಒಂದುಕಡೆ, ಹಳ್ಳಿ ಜೀವನ ನಂಗೆ ಮಾನವೀಯತೆ ಕಲ್ಸಿಟು ಪ್ರೀತಿ ಸಹಬಾಳ್ವೆನ ತೋರ್ಸಿಟು ಇಲ್ಲಿ ಯಾರು ಮೇಲು ಕೀಳುಂತೇಳಿ ಇಲ್ಲೆ ಎಲ್ಲವ್ಕೆ ಎಲ್ಲವೂ ಬೇಕಾದೆ.

ಗದ್ದೆ ಗೋರಿ ಬೇಸಾಯ, ಹಲಗೆ ಮೆಟ್ಟುದು ನೇಜಿ, ಪುಂಡಿ ಬಿತ್ತ್ ಹಾಕುದು ನೇಜಿನೆಡ್ಕನ ಓಬೇಲೆ, ಮಂಜೆಟಿಗೋಣ, ದೂಜಿಗಮ್ಮೆರನ ಪದ್ಯಹೇಳುವ ಪಾತೆ ಕೊರ್ಗ್ ಬೊಗ್ಗಿ, ಕುಞೀತು, ಕುರ್ಧಿಮೀಸುವ,. ಬಿಸುಲಿ ಬರೆ ಹಾಕುವ ಕುಂಜಿರನಂತವರ ಮಜ್ಕೆಲಿ ಸುತ್ತ ಲೇಲೇಲೇ ಹಾಕುವರ ನಡುಲಿ ಕೋಣಿವ ಹಲ್ಮನಾಗಲಿ, ಗಾಳ ಹಾಕಿ ಮೀನು ಹಿಡಿಕೆ ಕಲ್ಸಿದ ಗುರುವ, ಮಲ್ಲ, ಮುದ್ದ, ಜೋಗಿ ನಂತವರ, ನೇಜಿಗದ್ದೆಲಿ ಕೋಳಿ ಪಾರ ಅಲ್ಲದೆ ಮಾಡ್ಕೋಲ್‌ಲಿ ಕುದ್ದು ಗೀಣ, ಜಾಲುಪುದ, ಚೋರೆ ಹಕ್ಕಿಗೆ ಪಾರಕುದ್ಯದು ಸಿಡಿ, ಹಾಕಿ ಕುಂಡಕೋಳಿ ಚಕ್ಕಟೆ ಹಿಡಿದು ಅಡ್ಡಿಲು ಹಾಕಿ ಮೊಂಟೆಳು ಹಿಡಿದು ತಟ್ಟೆ ಬಿಲ್ಲುಲಿ ಹಕ್ಕಿ ಹೊಡೆಕೆ ಕಲ್ಸಿದ ಚೋಮಣ್ಣ ದೊಡಪ ನಾಗಲಿ ಮುಂದೆ ಕಾಡುನ ಬಗ್ಗೆ ಅದ್ಭುತ ಅನುಭವ ನೀಡ್ದ ಬೆಡಿಚೀಲ ಕೋಸಿಕೊಂಡು ಹಿಂದೆನೇ ಹೋಗಿ ಒಟ್ಟಿಗೆ ಕರ್ಕಂಡು ಬಂಟಮಲೆನ, ಕೊಟ್ಟಾನ ಕೊಡಿಗೆ ಕರ್ಕಂಡೋದ, ರಾತ್ರಿ ಶಿಕಾರಿನ ಅದ್ಭುತ ಅನುಭವ ಪರಿಚಯ

ಮಾಡಿಕೊಟ್ಟ ಕಡ್ಪಳ ಸೋಮಣ್ಣಮಾವನಾಗಲೀ, ದಾರಿಕರೆ ಪಾರೆಕಲ್ಲ್‌ಲಿ ಕುದ್ದುರ್ರ್ಸಿ ಅಪ್ಪಯ್ಯ ಗೌಡ್ರ ಸಾಹಸ ಕತೆಗಳ ಹೇಳ್ತಿದ್ದ ಮಾಮೂಲು ಖಾಖಿ ಅಂಗಿನ ರಂಗತ್ತಮಲೆ ಹೇಂರಾಮಣ್ಣಂತ ಪ್ರಚಲಿತ ವಾಗಿದ್ದ ದಿ|| ರಂಗತ್ತಮಲೆ ರಾಮಣ್ಣ ನ್ಯಾಕರ, ಕೂಳಿ ಕೂಂಜೊಳು ಬೆಂಡುಕುಕ್ಕೆ ಕುಂಟೆಗೆ ಮೆಡಕೆ, ಕೊಲ್ಲ ಕೆಲ್ಸನ ಎಲ್ಲಾ ಕಲ್ಸಿದ ಸಾಲೆಜ್ಜ (ಕುಡೆಕಲ್ಲು ಕೃಷ್ಣಪ್ಪಗೌಡ) ಉಂಡಳನೆ ತಿಂದಳಾನೆ, ಕೋಳಿಗೈಪು ಉಟ್ಟು ಎರ್ಗ್ ಉಂಡುಕ್ಯಾತೇಳಿದ್ದ ಸಣ್ಣಯ್ಯೆ (ಸಣ್ಣಜ್ಜಿ)ನ, ಅಪ್ಪೆ, (ಕಡೇ ಸಣ್ಣಜ್ಜಿ) ನಾಗಲಿ ಸಣ್ಣದರ್ಲಿ ಒಟ್ಟಿಗೆ ಕುದ್ದುರ್ಸಿ ಕಂಡ್ ಕತೆ ಹೇಳ್ತಿದ್ದ, ಅಂಗ್ಡಿಂದ ಬಾಕನ ಮಿಠಾಯಿ ಚಕ್ಕುಲಿ ಬೋಡಿನ ಜೇಬುಲಿ ತುಂಬಿಸಿಕಂಡು ಬಂದು ಕೊಡ್ತಿದ್ದ. ಅಂದು ಅಷ್ಟು ಕಲ್ತರೂ ಅವು, ನಂಗೆ ಈಗ ಅನ್ಸಿದೆ ಅವುನೊಬ್ಬ ಬೆರೀ ಪೊಡುಂಬು ಮಾತಾಡದೆ ವಿಚಾರವಾದಿನಾಂಗೆ ಕಾಂಬ ನನ್ನಜ್ಜ ದಿವಂಗತ (ರಾಮಪ್ಪ ಗೌಡ) ಸಣ್ಣದರ್ಲಿ ಅಲ್ಲಿ ಹತ್ತ್‌ಬಡ ಇಲ್ಲಿ ಹೋಬಡ, ತೋ ನಿನ್ನ ನೆಲಕ್ಕೆ ಹೊಡೆಂವ ತೇಳಿ ಪರಂಚಿಡಿಕಂಡರೂ ನನ್ನ ಮೇಲೆ ಪ್ರೀತಿ ಇಸಿ ನನ್ನ ಒಳ್ಳೆದರ ಬಯಸುತ್ತಿದ್ದ, ನನ್ನಜ್ಜಿ (ದಿ|| ಮುದ್ದಮ್ಮ) ನನ್ನ ಚಟುವಟಿಕೆಗಳ ಗುರ್ತಿಸಿಕಂಡ್ ನಾ ತಪ್ಪಿಕಾಕನ ನಾಗರ ಬೆತ್ತಲಿ ನನ್ನ ಕುಂಡೆಲಿ ಪುಣರ್ ಬರ್ಸತಿದ್ದ, ನಾಟಕ, ಸಾಹಿತ್ಯದ ಬಗ್ಗೆ ಸಂಗೀತದ ಬಗ್ಗೆ ಆಸಕ್ತಿ ಮೂಡಿಸಿದ ನನ್ನಪ್ಪ (ದಿ|| ಪದ್ಮನಾಭ ಮಾಸ್ತರ್) ನನ್ನ ಸಾಹಿತಿಕ, ಸಂಗೀತ ಉಮೇದುನ ಗುರ್ತಿಸಿ ಮಾಗದರ್ಶನ ಕೊಟ್ಟು ಪ್ರೋತ್ಸಾಹಿಸುತ್ತಿದ್ದ ಕಲ್ಲೆಂಬಿ ಸಣ್ಣು (ಜನಾರ್ಧನ ಗೌಡ ಕಲ್ಲೆಂಬಿ), ಉತ್ತಮ ಸಾಹಿತಿಕ ಅನುಭವವಿದ್ದು ಹಿಂದೆನೇ ಎಷ್ಟೋ ಪದ್ಯ ಬರ್ದು ತೆರೆ ಮರೆನ ಕಾಯಿನಾಂಗಿರುವ ಸಣ್ಣುನಾಗಲಿ ಈ ಪುಸ್ತಕ ಹೊರತಾಕೆ ಕಾರಣರಾದ ನನ್ನ ಸಾಲೆಪ್ಪ (ವಾಸುದೇವ ಕುಡಕಲ್ಲು), ನನ್ನ ಹೆತ್ತು ಹೊತ್ತು ಸಾಂಕಿದ ನನ್ನಮ್ಮ (ಶೇಷಮ್ಮ) ನಾಗಲಿಬಹುತೇಕ ನನ್ನ ಅಭಿರುಚಿಗೆ ಪ್ರೋತ್ಸಾಹಕೊಟ್ಟುಕಂಡು ಸರಳ ನಿರಾಡಂಬರದ, ನಂಗೆ ತಿಳಿ ಹೇಳ್ತಿದ್ದ ಹಿತೈಸಿ, ನನ್ನಣ್ಣ ಕೋಮಲಂಗೆ,ಇಂದು ಈ ಕವನ ಹೊರಗೆ ಬರಕಾರ್ರೆ ಅಂದುಂದಲೇ ಪ್ರೋತ್ಸಾಹಿಸಿಕಂಡ್ ಇಂದು ಮುನ್ನುಡಿಂದ ಹಿಡ್ದ್ ಚಿತ್ರ, ಮುಖಪುಟ ಪ್ರಕಾಶಕರ ಮಾತ್ ಎಲ್ಲ ಬರ್ದ್ ಕೊಟ್ಟ ಶ್ರೀ ಹಿಮಕರ ಎ.ಕೆ. ಗುರುಗಳಾದ ಸಂಜೀವ ಕುತ್ಪಾಜೆ ಈ ಪುಸ್ತಕಕ್ಕೆ ಒಳ್ಳೆ ಹೆಸರು ಕೊಟ್ಟ ಸಣಪ್ಪ ಕೆ.ಆರ್. ತೇಜ್ ಕುಮಾರ್ ಬಡ್ಡಡ್ಕ, ಈ ಪದ್ಯಗಳ ಬಹುತೇಕ ಎಲ್ಲಾ ಸಮಾರಂಬಲಿ ಹಾಡ್‌ತಿದ್ದ ನನ್ನ ಪ್ರೀತಿಯ ಮಿತ್ರ ಲಕ್ಷೀಕಾಂತನ, ನಾ ಇಂತ ಪ್ರಯತ್ನಕ್ಕೆ ಕೈ ಹಾಕಿಕೆ ನನ್ನ ಮೇಲೆ ಪ್ರಭಾವ ಬೀರ್ದ ನನ್ನ ಕುಟುಂಬದ ಹಿರಿಯವು, ಅಜ್ಜ ಅಜ್ಜಿಕ್ಕಳ ಸಣಪಂದರ ವಿಶೇಷವಾಗಿ ಕುಞಣ್ಣನ (ರತ್ನಾಕರ ಕುಡಕಲ್ಲು) ಮತ್ತೇ ನನ್ನ ಪ್ರೀತಿನ ತಮ್ಮಂದರ ಕುಟುಂಬದ ಎಲ್ಲರ ನೆನ್ಸಿಕಣೆ.

ಯಶವಂತ ಕುಡಕಲ್ಲು

ಬೊಳ್ಪು ತೋರ್ಸುವರ ಮಾತ್

"ಮೇಗಡೆ ಮನೆ ಮೋಟಿ ಗೂಡೆಗೆ"!... ಹೊದ್ದೆಟ್ಟಿ ಭವಾನಿಶಂಕರರ ಪದ್ಯಕೇಳ್ದ ಮೇಲೆ ಮೀನಗದ್ದೆ ಸುಂದರನವರ "ಯಾಕನೆ ಯಾಕನೆ ಬೇಜಾರಕೆ ......" ಪದ್ಯ ಕೇಳ್ದ ನೆನ್ಪ್‌ಲಿ ಇದ್ದ ಪಂಗೆ ಕಾಲೇಜ್‌ಲಿ"ಗೂಡೆಗಳೆಯಾ ..... ತಮ್ಮ ಗೂಡೆಗಳೆಯಾ....." ಪದ್ಯ ಮೈಕ್‌ಲಿ ಕೇಳ್‌ಕನ ಹೇಳ್ದ ಹೈದ ಬರ್‍ದ ಹೈದ ಒಬ್ಬನೇ ಅವನೇ ಯಶವಂತ. ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಲಿ, ಕ್ರೀಡಾ ಚಟುವಟಿಕೆಲಿ, ಎನ್.ಎಸ್.ಎಸ್.ನ ಮುಕ್ರಿ ಆಗಿ ಕೆಲ್ಸ ಮಾಡ್ದವ. ಎನ್.ಎಸ್.ಎಸ್.ಶಿಬಿರಲಿ ಹಳ್ಳಿ ಹಳ್ಳಿಲಿ ಪದ್ಯ ಹೇಳಿ ಬಾರಿ ಹೆಸರ್ ಗಳಿಸಿಟ್ಟು. ಗೌಡ ಬಾಸೆನ ಸರಿಯಾದ ಪದಗಳ ಯಶವಂತನಲ್ಲೆ ನೋಡೊಕು. ಬೇರೆ ಬೇರೆ ಬಾಸೆ ಕವಿಗೋಷ್ಠಿಲಿ ಅವನ ಪದ್ಯಕೆ ಬಿದ್ದ ಚಪ್ಪಾಳೆ ನೋಡಿರೆ ಗೊತ್ತಾದೆ. ಹಳ್ಳಿ ಹೈದನ ಎಲ್ಲಾ ವಿದ್ಯೆಗ ಎಲ್ಲಾ ಅವರಿಗೆ ಗೊತ್ತುಟು. ಗಾಳ ಹಾಕುದು, ಬೇಟೆಗೆ ಹೋದು ಎಲ್ಲಾ, ಲಾಯ್ಕಿಲಿ ಕೊಳಲ್, ವಾದ್ಯ, ಉರ್ಗಿದೆ, ಮಿಮಿಕ್ರಿ ಮಾಡ್ದ್, ಅವಂಗೆ ಗೊತ್ತಿಲ್ಲದ ಕೊಲ್ಲ ಕೆಲ್ಸ ಇಲ್ಲೆಂತಲೆ ಹೇಳಕ್. ಎನ್.ಎಸ್.ಎಸ್. ಕ್ಯಾಂಪ್‌ಲಿ ಇಳಿಯಕೆ ಬೊತ್ತದ ಬಾಮಿಗೆ ಬಿದ್ದ ಕೊಡ್ಪಣ ಅಂವ ಎತ್ತಿಟು. ಬಹಳಷ್ಟ್ ಪದ್ಯದ ರಾಶಿನೆ ಬರ್‍ಪಟು ಯಶವಂತ. ಆದರೆ ಒಂದೆರಡ್ ಪದ್ಯಗ ಬೊಳ್ಪು ಕಂಡದರ ಬೊಟ್ಟರೆ ಬಾಕಿ ಎಲ್ಲಾ ಹಾಂಗೆ ಉಳ್ದುಟು. ಈಗ ನಮ್ಮ ಬಂಟಮಲೆ ಪ್ರಕಾಶನ ಯಶವಂತರ ಪದ್ಯನ 'ತೊಂಬರ' ಎನ್ನುವ ಹೆಸ್ರಲಿ ಹೊರಗೆ ತರ್‍ತಾ ಉಟ್ಟು.

ಒಬ್ಬ ಗುರು ಆಗಿ ಶಿಷ್ಯನ ಪುಸ್ತಕ ಒಂದು ಬಾಸೆನ ಸುರುನ ಪುಸ್ತಕ ಆಗಿ ಕೀರ್ತಿ ಗಳ್ಸಿಸಿದೆ ಅಂತ ಹೇಳ್ಕನ ನಂಗೆ ಬಾರಿ ಕುಶಿ ಆದೆ. ಇಲ್ಲಿನ ಪದ್ಯಗ ಅಳ್ದ್ ಹೋವ ಸಾಂಸ್ಕೃತಿಕ ವಿಷಯದ

ಒಂದು ಅಮೂಲ್ಯವಾದ ಸಂಗ್ರಹನೇ ಅಂತ ಹೇಳಕ್. ನನ್ನ ಗುರುಗಳಾದ ಕೋಡಿಯವರಟ್ಟಿಗೆ ಮಾತಾಡ್‌ಕನ ಅವು ಒಂದ್ ಮಾತ್ ಹೇಳುವೆ "ಯಾಕೆ ಬರಿದು ಓದೊವು ಇತ್ಲರೆ" ಅಂತ. ಪುಸ್ತಕ ಪ್ರಿಂಟ್ ಮಾಡುವ ಕೆಲ್ಸ ಬಾರಿ ಕಷ್ಟ. ಹಾಕಿದ ಪೈಸೆ ಬಾದುಲೆ. ನಮ್ಮ ಪ್ರಕಾಶನ ಸಂಸ್ಥೆಗೆ ಹತ್ತ್ ವರುಷ್ ಆತ್. ಹತ್ತ್ ವರುಷ್‌ಲಿ ಹನ್ನೊಂದು ಪುಸ್ತಕ ತರ್‍ತಾ ಒಳೊ.

ಮಹಿಂದ್ರ ಕಂಪೆನಿಯವೂ ಸುಳ್ಯಲಿ ಜೀಪು ತರ್‍ಸದರ ನೋಡಿ ಸುಳ್ಯಕೆ ಒಮ್ಮೆ ಬಂದ್ ಹೊಗ್ಯಳಗಡ. ಸುಳ್ಯಲಿ ಎಂತ್‌ದ್ ಒಟ್ಟೊಂತ್! ಅಡಿಕೆಗೆ ರೇಟಿದ್ದರೂ, ಇತ್ಲರೂ ಪುಸ್ತಕ ಯಾರಿಗೂ ಬೇಡ. ಎಲ್ಲರ ಮನೆಲಿ ಮದ್ದುನ ಕಪಾಟು ಉಟ್ಟು, ಪುಸ್ತಕದ ಕಪಾಟ್ ಇಲ್ಲೆ. ಪ್ರತಿ ಮನೆಲಿ ಎಲ್ಲವೂ ಓದಿಕೆ ಸುರುಮಾಡಿರೆ ಮುಂದೆ ಮದ್ದುನ ಕಪಾಟ್ ಸಣ್ಣದಾಗಿ ಪುಸ್ತಕ ಕಪಾಟ್ ದೊಡ್ಡದಾದು. ನಮ್ಮ ಬಾಸೆಲಿ ಮಾತಾಡಕೂ, ನಮ್ಮ ಬಾಸೇಲಿ ಬರ್‍ದ ಪುಸ್ತಕನ ತಕಂಡ್ ಓದೊಕೊ, ಓದುವ್ ಇತ್ಲರೆ ಬರಿದು ಯಾಕೆ. ? ಬರ್‍ತ್ಲರೆ ಪ್ರಿಂಟ್ ಮಾಡುದು ಹೆಂಗೆ. ?

ಈ ಪುಸ್ತಕಕ್ಕೆ ಬಾರಿ ಲಾಯಿಕ್‌ನ ಸುರುನ ಮಾತ್ ಬರ್‍ದ ಕೊಟ್ಟದಲ್ಲದೆ, ಪ್ರತಿ ಪದ್ಯಕೂ ಪೊರ್ಲುನ ಚಿತ್ರ ಬುಡ್ಸಿದ ಎ.ಕೆ. ಹಿಮಕರ್ ಅವುಕೆ ಕೃತಜ್ಞತೆಗ. ಯಶವಂತನ ಪದ್ಯನ ಹಳ್ಳಿ ಹಳ್ಳಿಲಿ ಹಾಡ್ದ ಲಕ್ಷ್ಮಿಕಾಂತ್‌ಗೆ, ಡಿ.ಟಿ.ಪಿ. ಮಾಡ್ದ ಸಾಪ್ಟೆಕ್ ಕಂಪ್ಯೂಟರ್‌ನವ್ಕೆ ಮತ್ತೆ ಫಾರೂಕ್‌ಗೆ ಪ್ರಿಂಟ್ ಮಾಡ್ದ ದಿಗಂತ ಪ್ರೆಸ್‌ನವುಕೆ ಕೃತಜ್ಞತೆಗ. ಪುಸ್ತಕಕ್ಕೆ "ತೊಂಬರ"ಂತೇಳಿ ಸೋಕುನ ಹೆಸರ್ ಹೇಳ್ದ ಕೆ.ಆರ್. ತೇಜ್‌ಕುಮಾರ್ ಬಡ್ಡಡ್ಕ ಅವುಕೆ ನಮ್ಮ ಪ್ರಕಾಶನ ಸಂಸ್ಥೆಗೆ ಕೈತಾಂಗ್‌ನಾಂಗೆ ನಾವುಗೊಂದ್ ಸಪೋರ್ಟ್ ಮಾಡ್ದ ಎಲ್ಲವುಕೂ ಕೃತಜ್ಞತೆ. ಈ ಪುಸ್ತಕನ ನಮ್ಮ ಸಂಸ್ಥೆಲಿ ಬಿಡುಗಡೆ ಮಾಡಿಕೆ ಒಪ್ಪಿಗೆ ಕೊಟ್ಟ ಯಶವಂತ ಕುಡೆಕಲ್ಲು ಅವುಕೆ ಕೃತಜ್ಞತೆಗ.

ತಾ. ೨೮.೧.೨೦೦೩


ಸಂಜೀವ ಕುದ್ಪಾಜೆ


ಕುಜಿಲು ಶೇಸ



ಕುಡಿಯೊದ್ ಬುಟ್ಟರೆ ಕುಜಿಲ್ ಸೇಸ ಅಂವ
ಬಾರಿ ಒಳ್ಳಂವಯಾ
ಕುಡೆಕೆ ಕುದ್ದರೆ ಗಂಟೆ ಒಳಗೆನೆ
ಕುಜಿಲೇ ಮುಕ್ಸ್‌ದ್‌ಯಾ
ನಡ್ದ್ ಹೋಕೆನು ಎದೆನ.ಮೇಲೆಅಂವ
ದಾರಿ ಕೊಡುವವಯಾ
ದನನ ಹಾಂಗೆ ಅಂವ ದಿನನೂ ದುಡಿದು ತೋಟಗದ್ದೆಲಿಯಾ
ಅಡ್ಕೆ ತೆಗೆಕೆನು ಮೊದ್ದ್ ಬುಡ್ದ್‌ನು ಅವನೇ ಊರ್‌ಲಿಯಾ
ಮಾರು ದೂರಕೆ ಗಬ್ಬು ವಾಸನೆ ಮೂಕ್ ಕಟ್ಟ್‌ದುಯಾ
ಇಂದು ವರೆಗೆನು ನೀರು ಕಾಣದ ಅವನ ಅಂಗ್ಯದ್‌ಯಾ
ಇರ್‌ಲ್ಯಾಗೊಳು ಬೆಡಿನು ಹೆಗಲುಲಿ ಕಾಡ್‌ಗೋದವಯಾ
ಲೈಟ್ ಹಾಕದೆ ತಿಂಗಳ್‌ಲಿನೇ ಹಂದಿ ಹೊಡ್ದವಯಾ
ಕುಮೇರಿ ಪಾರಲಿ ಮಾಡಂಗೋಲ್‌ಲಿ ಏನು ಪದ್ಯಂಗಯಾ
ಕೊಡಲಿ ಹಿಡ್ದರೆ ನಮ್ಮ ಸೇಸ ಪರ್ಸುರಾಮನೆಯಾ
ತಬ್ಬಿಕಾಗದ ಮರನ ಹತ್ತಿದ್ ಕೊಚ್ಚಿ ಹಾಕುದ್‌ಯಾ
ಯಾರೂ ಇಳಿಯದ ಪಾತಾಳ ಬಾಮಿಂದ ಮುಳ್‌ಗಿ ತೆಗಿದವಯಾ
ಯಾರೋ ಹಾಕಿದ ಬೊಳ್ಳಿ ಕೊಡ್ಪಣ ಮತ್ತೆ ಚೋಳ್‌ನಯಾ
ಹಳ್ಳಕ್ಕೋದರೆ ಮೀನು ಹಿಡಕೆನು ಬಾರಿ ಸೂರ ಅಂವಯಾ
ಕೇಪುಗೆ ಒರ್ಚ ಬತ್ತಿನ ಕೀಸಿದ್ ತೋಟೆ ಹಾಕುದುಯಾ
ಕಣ್ಣುಗೆ ಆಂಜಿದ ಮಡಿಂಜಿ, ಕೂರ್ಫ್, ಎಲ್ಲಾ ಬಾಚ್‌ದುಯಾ
ಕೂಳಿ ಕೂಂಜೊಳ್ ಮೆಡ್ದ್ ಗದ್ದೆನ ಗಡಿಲಿ ಇಸುದವಯಾ
ಕೊಲ್ಲ ಚೆರ್ಗ್‌ನ ಬೆರ್ಕೆ ಸಾರ್‌ಲಿ ಸೇರ್ ಉಂಬಂವಯಾ
ಕೆದಲ್ ಹಾಕಿಕೆ ಮಾಡ್ ಹತ್ತಿದ್ ಕುಬೊಳು ಏರುದ್‌ಯಾ

ತುಂಪ್ ಪೈರಾಸ್‌ನೊಳಗೆ ಕಾಂಬೋದು ಕೆಂಪು ಕೋಮಣಯಾ
ಅಡಿಲಿ ಇದ್ದ ಮಕ್ಕ ಅವಂಗೆ ಡೋಂಗಿ ಮಾಡುವಯಾ
ಹಗಲು ಯಾಗೊಳ್ ಬೆಗರು ಅರ್‍ಸಿ ಬಾರಿ ದುಡಿದಂವಯಾ
ಹೆಗಲು ಕೊಟ್ಟರೆ ಕಿಂಟಾಲ್‌ನನೂ ದೂರ ಹೊರ್‍ತ್ವಅಂವಯಾ
ಹಿಡ್ದ್ ನೇಗಿಲು ಎತ್ತಿ ಬೀಲನ ಕೊಟ್ರೆ ದೆನಿ ಅಂವಯಾ
ಕಾಳ ಬೊಳ್ಳನು ನಡೆವ ಜಲ್ಜಿಲಿ ದೆನಿನ ಪೊರ್ಲುಗೆಯಾ
ಹಿಡ್ದ ಮುಟ್ಟಿದ ಕೆಲ್ಸಕೆಲ್ಲ ಸೇಸನೇ ಬೇಕಾದೆಯಾ
ಅವಂಗೆ ಆಗದ ಕೆಲ್ಸ ತೇಳ್ದ್ ಇಲ್ಲೆತೇಳಕ್‌ಯಾ
ಉಂಬ ಹೊತ್ತ್‌ನು ಮರ್ತ್ ಕೂಡ ಕೆಲ್ಸ ಮಾಡುದುಯಾ
ಕೆಲ್ಸದೆಡೆಲಿ ಬಟ್ರ ಎಮ್ಮೆನ ಹೊಂಡಕಾಕುದುಯಾ
ಏನೇ ಆದರು ಹಿಂಬೊತ್ತಾಕನ ಅಂವ ಸರಾಯ ಗುತ್ತಿಗೆಲೆಯಾ
ಮತ್ತೆ ನೋಡು ಬಾಯಿಂದ ಹೊರ್‍ಡುದು ಇಂಗುಲೀಸುನೆಯಾ
ದೇವ್ರಾಣೆ ಹಾಕಿಟು ಕುಡಿದರ ಬುಟ್ಟ್ನೆತ ಎಷ್ಟೋ ಸರ್ತಿ ಅಂವಯಾ
ಇತ್ತೀಚೆಗೊಮ್ಮೆ ಮಾಲೆನ ಹಾಕಿ ಮಲೆಗೆನು ಹೋತಂವಯಾ
ದೇವ್ರ ತಲೆಲೆ ಒಮ್ಮಿಮ್ಮಾರು ಹೂವಾರು ತಪ್ಪುದುಯಾ
ಹಿಂಬೊತ್ತಾಕನ ಸೇಸನ ತಲೆಲಿ ಸರಾಯ ತಪ್ಪಿಕಿಲೆಯಾ





ನನ್ನ ಗೂಡೆ

ಕ್ಲಾಸ್ ಬುಟ್ಟು ಮನೆಗೋವ ನನ್ನ ಗೂಡೆಯಾ
ಅದೇಕೋ ನಂಗೆ ನಿನ್ನ ಯಾಗೊಳು ನೆಂಪು ಆದೆಯಾ
ಹಗಲುಲೆಲ್ಲ ನಿನ್ನದೇನೆ ಕನ್ಸ್ ಕಾಂಬೊದುಯಾ
ಇರ್ಲ್ ಬೇರೆ ನಾನೇ ನೀನೇ ರಾಜರಾಣಿಗಯಾ
ಓದಿಕೆಂತ ಪುಸ್ತಕನ ಬುಡ್ಸಿ ಕುದ್ದರೆಯಾ
ಅಲ್ಲಿ ಕೂಡ ಮುಗುಳು ನಗೇಲಿ ನೀನೇ ಬಂದ್ಯಯಾ

ಹೋದಲ್ಲೀನು ಬಂದಲ್ಲೀನು ನಿಂದೇ ನೆಂಪುಯಾ
ಕುದ್ದಲ್ಲೀನೂ ನಿತ್ತಲ್ಲೀನು ನೀನೇ ಇರುವಯಾ
ಬಟ್ಲ್‌ಲಿ ಹಾಕಿದ ಗಂಜಿನು ಚೆಣ್ತು ಉಂಬಕೆ ಮರ್ತ್ದುಯಾ
ಅದೇಕೋ ಗೊತ್ಲೆ ನಂಗೂ ನಿಂಗೂ ಅದೆಂತೋ ನಂಟ್‌ಯಾ

ಅಪ್ಪಂಗೀಗ ನನ್ನ ಮೇಲೆ ಬಾರಿ ಡೌಟ್‌ಯಾ
ಇದ್ದಿದ್ದಾಂಗೆ ಪುಸ್ತಕನೆಲ್ಲ ಅರಂಟಿ ನೋಡ್ವೆಯಾ
ಅಮ್ಮಂದೊಂದು ಪರಂಚೆಲಂತ್ ತಡೆಕೆ ಬೊತ್ತ್‌ಯಾ
ಮನೆಬುಟ್ಟು ನಿನ್ನಕ್ಕಲೆ ಬರಕ್ಕೂಂತಾದೆಯಾ

ಕಾಲೇಜ್‌ಲಿ ನಿನ್ನ ಕ್ಲಾಸ್ ಮೇಲೆ ಮಾಳಿಗೆಲಿ
ಕೆಳಗೆ ಇದ್ದರು ನಿಂದೆ ಕನ್ಸ್ ನನ್ನ ಜೋಳಿಗೆಲಿ
ಮಾಸ್ಟ್ರ ಮಾಡ್ವ ಪಾಠ ಎಲ್ಲ ತಲೆಗೆ ಹೋದ್ಲೆಯಾ
ಅದೇಕೋ ಪೂರಾ ನನ್ನ ನಿಂಗೆ ಮಾರಿಕಂಡಳೆಯಾ

ನೆಂಟ್ರ್ ಇನ್ನೂ ಬಾತ್ಲೆಯಾ


ಎಂತದ್ದೋ ಒಂದು ಕೆಣಿ ನಡ್ದುಟು
ಮೊನ್ನೆ ಬರಕಾದ ನೆಂಟ್ರ್ ಇನ್ನೂ ಬಾತ್ಲೆಯಾ
ಯಾರೋ ಏನೋ ಕೆಬಿ ಉರ್ಗಿರೊಕು
ಮನ್ಸ್ ಒಪ್ಪಿದ ಹೈದ ಮಾತ್ ತಪ್ಪಿರೋಕು.
ಚಿಗುರು ಮೀಸೆನ ಅವ ಬಾರಿ ಪೊರ್ಲಿತ್ತ್
ಪ್ಯಾಂಟ್ ಸೂಟ್‌ಲಿ ಅವ ತುಂಬಾ ಮಿಂಚ್‌ತಿತ್ತ್
ಕೊಡಿ ಬೆರ್ಲುಲಿ ಷರಭತ್ತ್ ಗ್ಲಾಸ್ ಹಿಡ್ದಿತ್ತ್
ಕಡೆಗಣ್ಣ್‌ಲಿ ಓರೆನೋಟ ಬೀರಿತ್ತ್
ಯಾವ ಮಾಯಗಾರ್ತಿ ಅವನ ಮನ್ಸ್ ಎಳ್ದಿರ್ದೋ
ಬರುವ ಬಸ್ಸೇ ಎಲ್ಲೋ ಉರುಳಿ ಬಿದ್ದೋತೋ
ಇಷ್ಟು ಹೊತ್ತಾದರೂ ಕೂಡ, ಒಂದೂ ಸುದ್ದಿಲ್ಲೆ
ಅಪ್ಪ ಮಂಜ ಅಯ್ಯೆ ಎಲ್ಲ ಮೆಚ್ಚಿದ್ದ
ಮೆಚ್ಚಿ ಹೊಗಳಿ ಕಾಗದನು ಬರ್ದಿದ್ದ
ಎಡವಿ ಎಲ್ಯಾರ್ ನನ್ನ ಮಾತ್ ತಪ್ಪಿದ್ರೋ
ಬಡವಿ ಆಕೆ ತೇಳಿ ಸಂಬಂಧ ಬುಟ್ಟಿದ್ರೋ
ಅಜ್ಜಿ, ಅವ್ವನ, ಸರನ ಎಲ್ಲಾ ತೊಟ್ಟಿದ್ದೆ
ರೇಶಿಮೆ ಹೊಸ ಸೀರೆನ ಅಂದು ಉಟ್ಟಿದ್ದೆ
ಎಂತದ್ದೋ ಒಂದು ಕೆಣಿ ನಡ್ದುಟು.......

ಹೊಸ ನೆಂಟ್ರ್

ಅಕ್ಕಮ್ಮಕ್ಕನ ಅಕ್ಕನ ಮಗಳಿಗೆ ನೆಂಟ್ರ್ ಬಂದಿದ್ದ
ಯಾರೇನಲ್ಲಾ ಹಳೆ ಸಮ್ಮಂದನೇ ಸೋದರ ಬಾವ ಗಡ
ಏಳೆಂಟು ಜನ ಇದ್ದ ಕಾರ್‌ಲೇ ಬಂದಿದ್ದ
ಹೈದ ನೊಟ್ಟಿಗೆ ಅಯ್ಯೆ ಅಪ್ಪನೂ ಇದ್ದ
ಸೂರಡಿನ ಜಾಲುಗೆ ಸೆಗಣಿ ಕೆರ್ದಿದ್ದ
ಜಾಲಿಡೀ ಗುದ್ದಿ ಚಪ್ಪರನ ಹಾಕಿದ್ದ
ನೆರೆಕರೆ ಕೋಂಬರೆನ ಗೂಡೆಗ ಬಂದ್. ಅಡ್ಗೆನ ಮಾಡಿದ್ದ
ಮಾಡ್‌ಲೆ ಕುದ್ರ್‌ವ ಲಾಖಿಗಳೆರ್ಡರ ನಾಳಿನೆ ಚಿರಿಂಬಿದ್ದ
ಆಕರೆ ಈಕರೆ ಎಲ್ಲವು ಅಂದು ಬಂದ್‌ದು ಸೇರಿದ್ದ
ಚೈ ಚೈ ತೇಳುವ ಬೊಗ್ಗ ಬೊಗ್ಗಿಗೆ ಸಂಕಲೆ ಬಿಗ್ದಿದ್ದ
ಬಾರಿ ಸಣ್ಣರ್ಲಿ ಗೂಡೆನು ಹೈದನು ಒಟ್ಟಿಗೆ ಬೆಳ್ದವವು
ಕಣ್ಣಾ ಮುಚ್ಚೆ ಗಾಡೆ ಗೂಡೆ ಎಲ್ಲಾ ಆಡ್ದವವು
ಕಲ್ತ್‌ದ್ ಕಲ್ತ್‌ದ್ ಹೈದವ ದೂರದ ಪೇಟೆನ ಸೇರಿತ್ತ್
ದೊಡ್ಡವ ಆಗಿದ್ ಅಪ್ಪನ ಅಯ್ಯೆನ ಒಟ್ಟಿಗೆ ಬಂದಿತ್ತ್
ಹಸುರ್‌ನ ಸೀರೆಲಿ ಗೂಡೆದ್ ಅಂದು ಬಾರಿ ಮಿಂಚುತ್ತಿತ್
ಸುಪಲನ ಹಾಕಿದ ಮೈಸೂರ್ ಬಾಳೆನ ಹಾಂಗೆದು ಬೆಳ್ದಿತ್ತ್
ಗೂಡೆ ಬಾರಿ ಪೊರ್ಲಿತ್ತ್

ನಾಚಿಕೆ ಮೋರೆಲಿ ಗೂಡೆ ಹೈದಂಗೆ ಸರ್ಬತ್ ಕೊಟ್ಟಿತ್ತ್
ಓಡಿದ್ ಒಳಗೋಗಿ ಕಿಡ್ಕೆನ ಸೆರೆಲಿ ಬೊಗ್ಯಂಡ್ ನೋಡ್ತಿತ್ತ್
ಗೂಡೆನ ಪೊರ್ಲ್‌ಗೆ ಹೈದಂವ ಎಂದೋ ಮನಸೋತಾಗಿತ್ತ್
ಹೈದನ ಅಪ್ಪನು ಅವ್ವನು ಕೂಡ ಗೂಡೆನ ಮೆಚ್ಚಿದ್ದ

ಹಿರಿಯವು ಎಲ್ಲಾ ಮೊದುವೆದು ಶಾಸ್ತ್ರನ ಚರ್ಚೆನ ಮಾಡ್ತಿದ್ದ
ಸುಗ್ಗಿ ಅಕೆರಿಗೆ ಮೊದುವೆನ ಮಾಡ್ದ್‌ತ ತಿರ್ಮಾನನೂ ಮಾಡ್ದ
ಪಕ್ಕದ ಕೋಂಬರೆ ನನ್ನನು ಕೂಡ ಉಂಬಕೆ ಕರ್ದಿದ್ದ
ಹೊಟ್ಟೆನೆ ಒಡೆವಾಂಗೆ ಪೊರ್ಲ್‌ಲಿ ಏರ್ಡ್ ಉಂಡುದ್ ಬಂದಿದ್ದೆ.



ಪುರ್ಷಣ್ಣನ ಗೂಡೆ ಹುಡ್ಕಾಟ

ಬಾರಿ ಸಮಯಂದ ನಮ್ಮ ಪುರ್ಷ ಗೂಡೇ ಹುಡ್ಕಿತ್ತ್
ಇಂದೂವರೆಗೆ ಎಲ್ಲೀ ಕೂಡ ಒಂದು ಸಮ ಆತ್ಲೇ
ದಿನಂಗ ಉರುಳುವೆ ಕುದಲು ಉದುರಿದೆ
ಎಡೆಲಿ ಗಡ್ಡನೂ ಹಣ್ಣಾದೆ
ಯಾಕೆ ಗೊತ್ತಿಲೆ ಒಂದು ಕೂಡ ಅವನ ಕಣ್ಣಿಗೆ ಹಿಡ್ತ್‌ಲೆ
        ರಟ್ಟೆಡೆಲಿ ಬ್ಯಾಗೊಂದು ಕುಂಕುಮದ ಬೊಟ್ಟೊಂದ್
        ಮೊಣ್ಕಾಲ್ ವರೆಗೆ ಮೊಡ್ಚಿದ ಪೇಂಟ್ ಒಂದ್
        ಹೋತಿತ್ತ್ ಹಳ್ಳನ ದಾಟಿ ಯಾವ ಕಡೆಗೆ ಗೊತ್ಲೆ
                ರಂಪಿಗೆನ ನಾಲಿಗೆ ಅದು ಹೇಂಗೆಲ್ಲ ಮೊಗ್ಚಿರು
                ತೊಳ್ಸಿ ಕೊಡಿ , ಸಂಪಿಗೆ ಕೆಬಿ ಸೇರಲಿ ಇರ್ದ್
                ಕ್ರಮ ಎಲ್ಲಾ ನೋಡ್ರೆ ಅಂವ ಥೇಟ್ ಅರೆಬಟ್ಟನೇ
ಎಲ್ಲವ್ಕೆ ಇರ್ದಣ್ಣ ಮಳ್ಗಾಲ ಚೆಳಿಗಾಲ
ಅವಂಗೆ ತಪ್ಪಿಕಿಲೆ ರಾಹು ಗುಳಿಂಜನಾ ಕಾಲ
ಒಂದು ಬೊಳ್ಪುಗೆ ಎದ್ದ್ ಹೊರ್ಟ್ ಹೋದರೆ

ಹಿಂಬೊತ್ತಾಕನ ಅವ ಸೂಟೆ ಬೊಳ್ಪುಲೇ ಬಾದ್
ಹತ್ತೆಂಟ್ ಮನೆ ಸುತ್ತಿ ನೂರೆಂಟು ನಾಯಿ ಬೊಗುಳ್ಸಿ
ಚಾಯ ಸರ್ಬತ್ ಹೀರಂವ
ಇದರೆಡೆಲಿ ಕಾಗಡೆ ಮಾಸ್ಟ್ರ ಹೇಳ್ದ ಸಂಮಂಧ
ಅರ್ಥಲೆ ಬುಟ್ಟುತ್‌ಗಡ ಬಾರಿ ಪೊರ್ಲುನ ಗೂಡೆಗಡ
ಭುಜದೋಷನಾರು ಒಪ್ಪಿತ್ತ್ ಪುರ್ಷಣ್ಣ
ಕುಜದೋಷತೇಳಿ ಅವ ಚಾಂಬಿತ್ತ್‌ಯಾ
ಹಗಲು ಹುಟ್ಟಿದ್ ಆತ್ಲೆ
ಇರ್ಲ್ಲು ಹುಟ್ಟಿದ್ ಆತ್ಲೆ
ಸೋದರರದ್ ಜಾತಕನೇ ಸೇರಿ ಕೂಡಿ ಬಾತ್ಲೆ
ಅಂವ ಬಾರಿ ದುಡ್ಡುನಂವ
ಮುಡಿಗಟ್ಲೆ ಗದ್ದೆನಂವ
ಆದರು ಕಲ್ತಿತ್ಲೆ ಹೊಟ್ಟು ಬರನ
ಹಿತ್ತಳೆನ ಕೆಬಿಯಾಗಿ
ಅವು ಇವು ಉರ್ಗಿದರ ಕೇಳ್ವಾಗಿ
ದೆವ್ವಂದ ಜೋತಿಷನೇ ದೇವ್ರಾಗಿ
ತಿರ್ಗಿತ್ತ್ ಪುರ್ಷಣ್ಣ ಮನೆ ಹತ್ತಿಪ್ಪತ್ತ್
ಅದು ತಂದದೇ ಅವಂಗೆ ಅಪತ್ತು.
ಚಿಗುರಿದ್ದ ಆಸೆಗ ಒಂದೊಂದೆ ಕಾಣೆ ಆತ್
ಉದುರಿ ಒಂದೊಂದಾಗಿ ತಲೆನೂ ಚಾಣೆ ಆತ್
ಹುಟ್ಟಿದಲ್ಲಿಗೊಂದು ಮೊದುವೆ ಆದರೆ ಸಾಕೂಂತಾತ್
ಇತ್ತೀಚೆಗೆಲ್ಲ ಅಂವ ಬಾರಿ ಬದಲಾತ್
ಗೂಡೆ ಒಂದು ಆಗಿದ್ದರೆ ಸಾಕ್‌ತೇಳ್ತಿತ್ತ್
ಇದರೆಡೆಲಿ ಮೊನ್ನೆವಂಗೆ ಮೊದುವೆನೂ ಕಳ್ತ್
ಜೀವನಲಿ ಒಳದಣ್ಣ ಒಂದಿಷ್ಟು ಸಾರ
ಗಂಭೀರ ಗ್ರೇಸ್ಪಡ ಅದು ಆದೆ ಬಾರ
ಯಾದ್ಯಾದು ಯಾಗಾಕೋ ಅಂದಂದೇ ಆಕು
ಮೊದುವೆ ಅಂತು ಚಿಗುರು ಮೀಸೆಲೇ ಆಕು
ಹೇಳ್ತಿತ್ತ್ ಪುರ್ಷಣ್ಣ ಕೂಸುನ ಅಪ್ಪಾಗಿ
ಕಳ್ದ ದಿನಗಳಲಿ ಬೆಪ್ಪನಾಂಗಾಗಿ.

ದೊಡ್ಡಮನೆ ಚಾಂಪನ ಸಾವು

ಉಂಬೊಳಗಿದ್ದ ಗಂಟೆ ಹನ್ನೆರಡು ಹೊಡೆತಿತ್ತ್
ಕಾಗಡೆ ಕಾಳಮ್ಮ ಚಿಕ್ಕವ ಸಣ್ಣಕೂಸು ಮೋನನ ಹೆತ್ತಿದ್ದಂದ್
ಮನೆಬಾಗ್ಲ್‌ಲಿದ್ದ ಕೊಟ್ಟೆ, ಚಾಳೆಲಿ ಮರಕೊಡ್ಪ ಹಕ್ಕಿ
ಕೆರೇಂ ಕಿರಿ ಕಿರಿ, ತಲೆಮೆಟ್ಟುವಾಂಗೆ ಮರ್ದ್ತಿತ್ತ್
ಛಿ ಸೆನಿ ನಿನ್ನ ನಾಲಿಕೆಗೆ ದನ ಮೆಟ್ಟ,
ಬಸಲೆ ಚಪ್ಪರದಡಿಲಿ ಅಳೆಗೆ ತೊಳೆತ್ತಿದ್ದ ಉಗ್ಗಪ್ಪ
ಬ್ಯೊದಂದ್ ಕೆಂಪಿನೂ ಕರು ಹಾಕಿತ್ತ್
ಕಾಗಡೆ ಬೈಲ್‌ಂದ ಈಡ್ ಕೇಳ್ದ ಅರ್ದ ಗಂಟೆಲಿ
ಅಪ್ಪುಣಿ ಹೈದ ಓಡಿ ಬಂದ್ ದೊಡ್ಡ ಮನೆ ಚಾಂಪ
ತೀರಿಹೋದ ತೇಳ್ದಂದೇ ನಾ ಬಾರಿ ಸಣ್ಣಂವ
ಚಡ್ಡಿಲೇ ಇದ್ದೆ

ಅದೇ ಕಟುಮಸ್ತಾದ ಜೀವ ವಿಶಾಲ ಎದೆ
ಕೆಬಿಲಿ ನೇಲ್ತಿದ್ದ ಚಿನ್ನದ ಒಂಟಿಗ
ಹುಟ್ಟಿದ್ದೇ ಅವು ಕೆಂಡಲೇ ಬೆಳ್ದದೇ ರಣ ಬಿಸ್ಲ್‌ಲಿ
ಅಪ್ಪ ಮಾಡಿಕೊಟ್ಟ, ಬೆದ್ರ್ ಏಣಿಲೆ ಆಕಾಸ ಏರಿಕೆ ನೋಡ್ತವು ಗಡ
ಆಳಾಗಿ ದುಡ್ದ ಜೀವ ಅರ್ರಾಗಿ ಮೆರ್ದಿತ್ತ್
ನಟ್ಟ ರಣ ಬಿಸ್ಲ್‌ಲಿ, ಜಡಿಮಳೆಗೆ ಕುಮೇರಿ ಪರ್ಡಿ
ರಾಗಿ ಚಾಮೆ ಬೆಳ್ಸಿದವು ಗಡ
ತಿಂಬಕಿಲ್ಲದೆ ನೋಕಟೆಕಾಯಿ ಬೇಸಿ ತಿಂದವು ಗಡ
ನರೆ ಈಯೆರ್ ಗೆಂಡೆ ಕಣಲೆಪ್ಯಾಸಲೇ ದಿನ ದೂಡ್ತವು ಗಡ
ಘಟ್ಟಕ್ಕೋಗಿ ಎರ್ದಾಣೆಗೆ ಏಳೆಂಟ್ ಬೂಸ್ಲ್ ಕಾಪಿ ಕ್ಯೊದವು ಗಡ
ಕಾದ್ರೆ ಮಾಪ್ಳೆಸಲ್ಲಿಗೆ ಬಿಳ್ಗ್‌ಲ್ ಮಾರಿ ಅಂಬೆಲಿ ಕುಡ್ತವು ಗಡ
ಚಾಳಿ ಬೆಲ್ಲ ಬೀಜ ಬೆಂಡ್ ಹೊತ್ತ್ ಮಾರಿ ಬೊದ್ಕು ಮಾಡ್ತವು ಗಡ
ಆಡ್ವೇ, ಮಾತ್ ಕಡ್ದ್ ತುಂಡು ಮಾಡ್ದಂಗೆ
ಅಡ್ಕ್ಯೊಳು ಬಾಯ್ಗಾಕಿ ಎಲೆಗೆ ಸುಣ್ಣ ಹಾಕಿ

ಹೊಸ್ಸೈಪು ತಿರುಂಟುದರೊಳಗೆ
ಎಂತಾ ಪಂಚಾತಿಗೆನೂ ತೀರ್ಸಿದವು ಗಡ
ಅಪ್ಪ ಸತ್ತೋಗಿ ತಬ್ಬೆರಿಯಾದ ದ್ಯಾಪುನ ಮಕ್ಕಳ
ಮೀಸಿ ಊಡ್ಸಿ ಕುಂಡೆ ತೊಳ್ಸಿ ತನ್ನ ಮಕ್ಕಳಿಗಿಂತ
ಕೊಂಡಾಟಲಿ ನೋಡ್ದವು ಗಡ
ನೇಜಿ ಗದ್ದೇಲಿ ಮಾಡ್ಕೋಲ್‌ಲಿ ಕುದ್ದು ಜೋಡು ಮೊಲ
ಹೊಡ್ದವು ಗಡ
ಯಾರಿಗೂ ಹೊಡೆಕೆ ಬೊತ್ತದ ರಣ ಹಿಡ್ದ ಸಾರೆಂಜನ
ಒಂಟಿ ಗುಂಡುಲೇ ಮಲ್ಗಿಸಿದವುಗಡ
ಕಾಡ್‌ಸುತ್ತಿ ಮೊದ್ದು ಹುಡ್ಕಿ ಎಣ್ಣೆ ಕಾಸಿ
ಎಲ್ಯಣ್ಣನ ಕಾಲ್ ಗುಣಮಾಡ್ದವು ಗಡ
ಬಡುವನ ಹೆಣ್ಣಿಗೆ ಹಿಡೆತ್ತಿದ್ದ ಕೊಲೆನ
ಪಿಸಿ ಪಿಸಿ ಮಂತ್ರ ಮಾಡಿ ಬುಡ್ಸಿದವುಗಡ
ಸೋಬಾನೆ ಹೇಳಿ ಹೆಣ್ಣಿಳ್ಸಿ ಕೊಟ್ಟರೆ ಎಲ್ಲ ಹೆಣ್ಮಕ್ಕಳು
ಮರ್ರುವಾಂಗೆ ಹೇಳ್ತಿದ್ದ ಗಡ .
ಮೊನ್ನೆ ಮೊನ್ನೆ ಇದರೆಡೆಲಿ ಮಲ್ಗಿದಲ್ಯಾದ
ವಾರ್ಯಕ್ಕ ಹಾಲು ತಕಂಡೋದ ಕಮಲಕ್ಕ ಹಾರ್ಲಿಕ್ಸ್ ತಕಂಡೋದ
ಕೇಪಣ್ಣ ಕೆಂದಾಳೇ ಬೆಂಡ ಕಿಲೇನೆ ಕೆತ್ತಿ ತಕಂಡೋಗಿತ್ತ್
ದೊಡ್ಡಮನೆ ಎದುರು ಚಿಣೆಲಿ ಮಲ್ಗಿಸಿದ್ದ ಚಾಂಪನ
ಕಣ್ಣು ಅರೆಮುಚ್ಚಿತ್ತ್ ಮೋರೆಲಿ ಅದೆಂತೋ ಮುಗ್ದತೆ.
ಹಾಂಗೇನೆ ಎದ್ದು ಕಾಣ್ತಿತ್ತು
ಬೆಳ್ದ್ ಅರುವೆ ಹೋಸಿ ರೂಪಾಯಿ ಪಾವ್‌ಲಿ ಹಣೆಗೆ ಹಿಡ್ಸಿ
ತೊಳ್ಸಿ ಕೊಡಿಲಿ ಕಂಚಿನ ಬಟ್ಳ್‌ಂದ ನೀರ್ ತೆಗ್ದು ಬಾಯಿಗೆ
ಬುಟ್ಟಾಕನ ದುಃಖ ಉಮ್ಮಳ್ಸಿ ಬಾತ್ ಚಾಂಪ ಸೊರ್ಗಕ್ಕೆ
ಹೋಗೀಂತ ಅಳ್ಗೆಲ್ ಬಾತ್
ಕುಟುಂಬದವು ನೆಂಟ್ರು ಕಲ್ಲೆಂಬಿ ಮಾವನು ಇದ್ದ
ಕೆಲವು ಅಂಗಿ ಬಿಚ್ಚಿ ಹೊರಗಿದ್ದ
ಕಾಯಿ ಚೆಪ್ಪು ಹೊಗೆನೊಟ್ಟಿಗೆ ದೂಪ ಗಂಧನೂ ಸೇರಿತ್ತು
ಅಯ್ಯೋ ಅದೆಂತ ಅಳ್ಗೆಲ್ ಅಣ್ಣಾ ... ಅಪ್ಪಾ......
ಸಣಪ್ಪಾ..... ಬುಟ್ಟ್ ಹೋದರ್ಲೇ......

ಕೊಟ್ಟ ಹೆಣ್ಮಕ್ಕ ಮಗಕ್ಕ ಮಕ್ಕಾ ಎಲ್ಲವೂ ಮರ್ಡವೇ
ತೋಟದಾಚೆಕರೆ ಗುಡ್ಡೆಲಿ ಚಾಂಪ ಒಳಿಕುದ್ರುತಿದ್ದ
ಸತ್ತ ಚಿರುವೆ ಮರನ ಕೆಂಚ ಮುದರ ಚೋಮ ಕೊಯ್ದು ಒಡ್ಡ
ನಾಲ್ಕು ಜನ ಸೇರಿ ಬೆದ್ರು ತಂದು ಸಿಗ್ದ್ ಕಟ್ಟಿ ಚೆಟ್ಟ ತಯಾರ್ ಆತು
ಒಂಟಿ ಬಾಳೆಕ್ಕೆ ಅದರ ಮೇಲೆ ಹಾಕಿದ
ಬೆಂಗ್ಳೂರುಲಿರುವ ಸಣ್ಣ ಮುಂಜ ಕಾರು ಮಾಡಿಕಂಡೇ ಬಾತ್
ಹಲವು ಚಪ್ಪೆ ಮೋರೆ ಹಾಕಿರೆ ಕೆಲವು ಕೊಟೆಗೆ ಹಿಂದೆ
ಹೋಗಿ ಬೀಡಿ ಎಳ್ದವೆ ಮರ್ಡ್ವ ಅವ್ವನ
ಮಾವ ಸಮಾಧಾನ ಮಾಡ್ವೆ
ಹುಡ್ಗರು ಕ್ರಿಕೇಟ್ ಸುದ್ದಿ, ಕಾರ್ಗಿಲ್ ಯುದ್ಧಲಿರುತ್ತಿದ್ದ
ಹಲವು ಮರ್ಡ್ವವೆ ಕೆಲವು ಸಮಾಧಾನ ಮಾಡ್ವೆ
ಹೈದೊಬ್ಬ ಉಣದೆ ಜರಲೇ ಮಲ್ಗಿಟು
ಮಾಡ್ದ ಗಂಜಿ ಇಳ್ಗಿಸಿ ಒಲೆ ಚಿಂಟೇಲೇ ಇತ್ತು
ಹೇಂಟೆ ಪಿಳ್ಳೆಗ ಗೂಡ್‌ಲೆ ಪಿಂಯ್ಯಾಂತೇಳ್ವೆ
ಪೊಡಿ ತೆಗಿಯದೆ ದನಂಗ ಹಟ್ಟಿಲೇ ಇದ್ದ
ಕಟ್ಟಿ ಹಾಕಿದ ದಾಸು ಬೊಳ್ಳು ಹುಚ್ಚುಕಟ್ಟಿ ಬೊಗುಳ್ವೆ
ಪಿರಿ ಪಿರಿ ಮಳೆನೂ ಹಣ್ಯುಕತ್ತಿತ್ತ್
ಮೊಲೆ ಉಂಡಾಗಿ ಅಯ್ಯನ ಸೊಂಟಲಿದ್ದ ಅಪ್ಪಿಕೂಸು ಸಾಯ್ದುತೇಳ್ರೆ ಎಂತಮ್ಮ ಹೇಳಿ
ಛಲ ಮಾಡ್ತಿತ್ತ್
ಹಂಞ ಹೊತ್ತ್‌ಲಿ ಚಾಂಪನ ಮೀಸಿ ತಂದು
ಅಂಗಿ ಪಂಚೆ ಉಡ್ಸಿದ ಮುಂಡಾಸ್ ಬಿಗ್ದ
ಆಂ, ಇನ್ನು ತಡ ಮಾಡ್ವೇಕೆ ಹೊರ್ಡ್ಸಮ್ಮ ಎಲ್ಲಾ ರೆಡಿ ಆತಲೇಂತ
ಹಿರಿಯವು ಹೇಳ್ದ
ನಾಲ್ಕು ಮೂಲೆಲಿದ್ದ ತಮ್ಮಂದರ ಹೆಗಲು ಮೇಲೆಲಿದ್ದ
ಚಟ್ಟಲಿ ಸುದ್ಕುಳಿಗೆ ಮೆರವಣಿಗೆಲಿ ಸಾಗಿತ್ತ್
ಚಾಂಪನ ಅಂತಿಮ ಸವಾರಿ
ಕಾಟಕ್ಕೆ ಸುತ್ತ ಬಂದ್ ಕೆಳಗಿಳ್ಸಿದ
ಎದೆಯಾಳೆತ್ತರದ ಕಾಟದ ಮೇಲೆ ಮಲ್ಗಿಸಿದ
ಚೆಟ್ಟನ ಅತ್ತಕೆ ಮುರ್ದ್ ಹೆರ್ಕಿಟ್ಟ
ಕೈಕಾಲು ಬಿಚ್ಚಿದ, ಅವ್ವನ ತಮ್ಮ ಗಡ ಅವು ಬಳೆ ಒಡ್ಡ

ತಾಳಿ ಬಿಚ್ಚಿದ ಚಿನ್ನನ ನಾಲಿಗೆಡಿಲಿಸಿದ
ಕುಂಕುಮ ಉಜ್ಜಿದ ಗಂಜಿ ತೆಳಿ ಕುಡ್ಸಿದ
ತೊಳ್ಸಿ ನೀರು ಕೊಟ್ಟ ಅಕ್ಕಿ ಭತ್ತ ಸೇರ್ಸಿದ.
ಎಲ್ಲವೂ ಕುಂಟೆಗಳ ಚಾಂಪನ ಮೇಲೆ ಐಪಿದ
ಹೆಣದ ಮೇಲಿಂದ ತೆಗ್ದ ಅರುವೆ ಕಿಂತೊಂದರ
ಹರ್‍ದ್ ಮಂಜ ಹೆಗಲ್‌ಗೆ ಹಾಕಣ್ತ್
ಚಾಂಪನ ಬಗ್ಗೆ ಎರ್‍ಡ್ ಒಳ್ಳ ಮಾತ್ ಹೇಳ್ದ
ಅಗಸನ ಕಲ್ಲಾಬಡ ಗಾಣಿಗಜನ ಎತ್ತಾಬಡ
ಬಾಳೇ ಪಾಲಲಿ ನೂಲು ಕೈತಾಂಗಲಿ ಸ್ವರ್ಗಕ್ಕೇ ಹೋಗಿಂತ ನೆಂಟ್ರೊಬ್ಬ ಹೇಳ್ದ
ಅಪ್ಪಿಕೂಸು ಮತ್ತೆ ಬಾಳೆ ಪಾಲಲಿ ಹೇಂಗೆ ಹೋದುಂತ ಕೇಳ್ತಿತ್
ಕತ್ರಿ ಕೊಳ್ಳಿ ಕೂಡ್ದ ಕತ್ತಿ ಮೊಚ್ಚಿ ದಾಡ್ಸಿದ
ಕಾಲು ಕಡೆಂದ ಮನೆವು ತಲೆ ಕಡೆಂದ ಊರವು
ಕಿಚ್ಚಿ ಕೊಟ್ಟ, ಕಾಟ ದಗದಗಂತ ರಣನಾಂಗೆ ಹೊತ್ತತ್ತಿತ್ತ್
ಚಾಮ್ಯವ್ವ ಎದೆ ಹೊಡ್ಕಂಡು ಮರ್‍ಟ್
ಸೊಯೇನೆ ಇಲ್ಲದಾಂಗಾತ್
ಗಂಧ, ದೂಪ, ಕಾಯೆಣ್ಣೆ, ಊದುಬತ್ತಿ ಮಿಸ್ರಾದ
ಹೊಗೆ ಕೊಟ್ಟೆ ಚಾಳೆನಪ್ಪೆತ್ತರಕ್ಕೆ ಹೋತಿತ್ತ್
ಮಂಗ್ಯಾರ ಕಡುವಾರಂತೇಳಿ ಕೋಳಿ ಪಿಳ್ಳೇನ
ತಂದೊಬ್ಬ ಹಾಕಿತ್
ಪಿಂಯ್ಯಾ ಪಿಂಯ್ಯಾಂತ ರೆಂಕೆ ಮುಲ್ಲೆ ಕರಿಂಚಿ
ಹೊತ್ತಿತ್ತ್ ಅದು ಕರಿಂಚಿ ಕರ್‍ಂಟಾಗಿ
ಮಾಣ್ದಿನ ಚಾಂಪ ಬೂದಿಯಾಗಿದ್ದ
ದಿನಂಗ ಕಳ್ದ ಮೂರ್ನೆ ಸುದ್ದಾತ್
ಹನ್ನೊಂದರ್ಲಿ ಬೊಜ್ಜಾತ್ ಮಗಕ್ಕ ತಿಂಡಿ ಮಾಡ್ದ
ಮನೆವು ಹಂದಿ ಬೊಡ್ದ ಹದ್ನಾರಕೆ ಕೂಡ್ಸಿದ
ಅವ್ವು ಹಾಕಿದ ವರ್ಷ ಕಳ್ತು
ಹಲವರ ಮನ್ಸ್‌ಲಿ ಹಲವು ದಿನ ಇದ್ದರೆ
ಚಾಂಪ ಕೆಲವರ ಮನ್ಸ್‌ಲಿ ಇನ್ನೂ ಇದ್ದ.

ಅಮ್ಮಣ್ಣೆನ ನೆದ್ದ ನೊಪ್ಪ್

ಬೊಳ್ಪೊಳ್ಪನಾ ಒಂದು ಬೆಳ್ಜಾರ್‌ಲಿ ಒಮ್ಮೆ
ಬೆಳ್ಳಿ ಲಾಕಿ ಅದು ಬೇಗ ಕೂಂಗಿತ್ತ್
ದನಂಗ ಅಂಬಾ ತೇಳ್ದ ಕರುಗ ಅಯ್ಯೆನ ಕರ್ದ
ಹಕ್ಕಿಗವು ಗೂಡುಲೇ ಸಂಗೀತ ಹಾಡ್ದ

ಸಣ್ಣಕ್ಕೆ ಮಳೆ ಬಾತ್ ಹಲ್ಲಗಿವ ಚೆಳಿ ಇತ್ತ್
ಕೊಳ್ಯೊಂದು ಮಿಣಿ ಮಿಣಿಂತ ಹೊತ್ಯುರಿತಿತ್ತ್
ಮಾಡೊಂದು ಸೋರ್ತಿತ್ತ್ ಗೋಡೆ ಅದು ಜರ್ದಿತ್ತ್
ಜೋರಾಗಿ ಮಳೆ ಗಾಳಿ ಬೀಸ್ತ್ತಿತ್ತ್


ಬಿಚ್ಚಿ ಮೀಯುವಂತ ಬಚ್ಚಲದ್ ಆಗಿತ್ತ್
ಉಚ್ಚೆ ಹೊಯಕೆನು ಜಾಗೆ ಅದುವೆ ಆಗಿತ್ತ್
ಹಚ್ಚ ಹಸಿ ಭಾವನೆಗ ಅಲ್ಲಿ ಹಾಡಾತಿತ್ತ್

ಬಿಚ್ಚಿಸಿದ ಲಂಗ ಅದು ಮೂಲೆಲೇ ಬಿದ್ದಿತ್ತ್
ಅಮ್ಮಣ್ಣಿ ಗೂಡೆ ಅಂದು ದೊಡ್ಡದಾಗಿತ್ತ್

ಪುಂಡಿ ಒಲೆಲೇ ಇತ್ತ್ ಗ್ಯಪಿಸ್ನು ಆಕಿತ್ತ್
ಹುಳಿ ಮೆಣ್ಸ್ ಕಡ್ಪರ್ದ ಕಲ್‌ಲೇ ಇತ್ತ್
ಅಳೆಗೆ ತೊಳ್ಸಾಗಿತ್ತ್ ಮೊಸಿನು ಮೋರೆಲೆ ಇತ್ತ್
ಬೊಳ್ಪಾಕನ ಗೂಡೆ ಮನೆಲಿ ಎಲ್ಲಿತ್ತ್

ಎದೆವರೆಗೆ ಬೆಗರಿತ್ತ್ ಮದ ಹೊಟ್ಟೆ ಬೇನಾತ್
ದೀಪ ಹೊತ್ತಿಸಿ ಗೂಡೆ ಕೊಟೆಗೆಗೋಡಿತ್ತ್
ಸಂಗತಿ ಹಾಂಗಿತ್ತು ಗೂಡೆ ಮೈ ನೆರ್ದಿತ್ತ್
ತಲೆನ ಕೆಳಗನೆ ಹಾಕಿ ಮೂಲೆಲೇ ಇತ್ತ್
ಮೈಮನದ ನಂಟಿಗದು ಅಂಟು ಬೆಸೆದಿತ್ತ್
ಅಜ್ಜಿ ಮಾಡ್ತಿದ್ದ ಡೋಂಗಿ ಅನುಭವಲಿ ತಾನುಂಡು
ಅಡಿಂಗಿ ಬಾತಿತ್ತ್ ನಗೆ ಮನ್ಸ್‌ಲ್ಯಂದ್

ನಿನ್ನೆ ಮೊನ್ನೆನವರೆಗೆ ಉರ್ಬುಳಿಲೇ ಓಡ್ತಿತ್ತ್
ಮೊಮ್ಮ ಕೊಡು ಅಮ್ಮಾಂತ ಸೆರ್ಗ್ಗೆಳೆಯುತ್ತಿತ್ತು
ಕುಮೇರಿ ಪಾರಕ್ಕೆ ಹೋತಿತ್ತ್ ಈ ಪೋರಿ
ಸಾಗಿಕದು ತಯರಾತ್ ಬಾಳ ಬಂಡಿನ ಏರಿ
ದುಃಖ ಆದಂಗಾತ್ ಅಕ್ಕ ಬೇಕೂಂತಾತ್
ನಾಚಿ ತಲೆ ಬಾಚಿಕೆನು ಮರ್ತ್ತ ಹೋಗಿತ್ತ್
ಮನ್ಸ್ಸ ಪುಳಕಿತ ಆತ್ ಬಟ್ಟೆ ಕೊಳ್ಕ್ನು ಆತ್
ಹಳೆ ಅಂಗಿ ಮೈಗೆಲ್ಲ ಸಣ್ಣದಾತಿತ್ತ್
ಮನ್ಸೆಲ್ಲ ಚಿತ್ತಾರ ಕನ್ಸ್‌ಗಳ ಸಾಗರಲಿ
ಹೊರಿಕೆ ತಯರಾದೆ ಭೂಮಿ ಬಾರ
ಹೆತ್ತ್ ಹೊತ್ತ ಕೈಗ ಮಗಳ ತಬ್ಬಿತ್ತ್
ಒಳಮನ್ಸ್ಸನೊಳಗೊಂದು ಹೊಸ ಚಿಗುರು ಇತ್ತ್
ದುಃಖ ದುಮ್ಮಾನಗಳ ತೋಳ ತಬ್ಬುಗೆಲಿ ಮರ್ತ್ತ
ಅವ್ವನಾ ಸ್ಪರ್ಶಲಿ ಏನೋ ಹೊಸ ಖುಷಿನಾ ಪಡ್ತ್
ತುಡಿತ್ತಿದ್ದ ಕಸಿ ವಿಸಿನು ದೂರ ಆಗಿತ್ತ್
ಮನೆವು ಎಲ್ಲವೂ ಸೇರ್ದ್ದ ನೆರೆಕರೆವರನು ಕರ್ದ್ದ
ಮರದಡಿಲಿ ಕುದ್ದುರ್ಸ್ಸಿ ನೀರು ಹ್ಯೊದ
ಎಂತದರ ನಾ ಹೇಳ್ದು ಅಂದು ಆ ಗಮ್ಮತ್ತ್
ಏಕೋ ಅದು ನಂಗೀಗ ಸಣ್ಣ ನೆಂಪಾತ್
ಹಸ್ಯಕ್ಕಿ ಹಂಚಿದ್ದ ಪ್ಯಾಸನು ಮಾಡಿದ್ದ
ನಾನು ಅಮ್ಮನು ಹೋಗಿ ಉಂಡು ಬಂದಿದ್ದ
ಬಳೆ ಇಸಿದ್ ಸೀರೆ ಉಟ್ಟು ಹಣೆಗೆ ಬೊಟ್ಟ್ನು ಹಾಕಿ
ಎದುರು ಬಾಗ್ಲಲಿ ಬಾತ್ ಗೂಡೆ ಮನೆನ ಒಳಗೆ
ಬೆಳ್ದ್ ಸೀರೆ ಉಟ್ಟು ಬಾತಿತ್ತ್ ಆ ಗೂಡೆ
ಅಪ್ಸರೆಗಳು ಕೂಡ ನಾಚುವಾಂಗಿತ್ತ್
ಮಳೆ ಎಲ್ಲಾ ಬುಟ್ಟಿತ್ತ್ ಹೂ ಬಿಸ್ಲ್ ಬಂದಿತ್ತ್
ಮೂಡಲಿ ಹೊತ್ತಂತ್ ಕೆಂಪಾಗುತಿತ್ತ್
ಹೆತ್ತಯ್ಯ ನೆದೆಲ್ಯೊಂದು ಹೊಸ ಕಂಪು ಇತ್ತ್
ಇರುಳ ಇಬ್ಬನಿಯೊಂದು ಬೆಳ್ಯಾಗಿ ಮಿಂಚಿತ್ತ್
ಬಿಂಗಾರ ಒಡ್ದ್ ಸಿಂಗಾರ ಸೂಸಿತ್ತ್



ಉಕೊಳ್ಳಿ ಹೈದನ ಕತಾಪತಿ

ಪಂಡೊಂದು ಹಿಂಬೊತ್ತ್ ಗಮ್ಮತ್ತ್ ನಡ್ದಿತ್ತ್
ಗಮ್ಮತ್ತ್‌ನೊಳಗೊಂದು ಗಮ್ಮತ್ತ್ ನಡ್ದಿತ್ತ್
ಸಿಕ್ಕಿ ಬಿದ್ದ್ ಅಂದವನ ಬೆನ್ನು ಹೊಡಿಯಾಗಿತ್ತ್

ಆ ಹೈದನಾ ಕಥೆ ನೆರೆಕರೆವ್ಕೆ ಗೊತ್ತಿತ್ತ್
ಸಾಲೆಗೋಂವ ಅವ ಅರ್ಧಲೇ ಬಾತಿತ್ತ್
ಅಡ್ಚಿಲ್ ಸಿಡಿ ಹಾಕಿ ಹಕ್ಕಿನವ ಹಿಡೆತ್ತಿತ್ತ್
ಹೊಟ್ಟೆ ಗುಳ್ಳುಮೆಗಳಿಗೆ ಮಳೆಕ್ಕೊಲ್ ಹಾಕ್ತಿತ್ತ್
ಕವಣೆ ಬಿಲ್ಲಂತು ಅವನ ಜೋಬುಲೇ ಇರುತ್ತಿತ್ತ್

ಮಾಯ್ಣ ಮರಗಳಿಗೆಲ್ಲ ಕಲ್ಲ್ ಹೊಡೆತ್ತಿತ್ತ್
ಕಾಗಡೆವರ ಮನೆ ಹಂಚು ಪೊಡಿ ಮಾಡ್ತಿತ್ತು

ಜನರ ಬಾಯಿಂದ ಅಂವ ಮುರಿಯ ಕೇಳ್ತಿತ್
ಉರ್ಕೊಳ್ಳಿ ಹೈಂದವಂತ ಹೆಸರವಂಗೆ ಇತ್
ಉಷಾಕ್ಕನಾ ಮೊದುವೆ ಮೊನ್ನೆ ಕಳ್ದಿತ್
ತುಪ್ಪ ತಾವ ಕ್ರಮ ಇಂದು ನಡೆಕಿತ್
ದೊಡ್ಡಮನೆ ಜಾಲ್‌ಲಿ ಚಪ್ಪರನ ಹಾಕಿತ್
ಮನೆವು ನೆಂಟ್ರ್‌ಗ ತೇಳಿ ಹಂಞ ಜನ ಇತ್
ಅಡ್ಡೆ ಗಿಡ್ಡೆಗಲ್ಲ ಬೊಳ್ಪುಗೆನೇ ಅಗಿದ್ದ
ಮೊದು ಮಕ್ಕಳನೇ ಜನ ಕಾಯುತ್ತಿದ್ದ
ದಾರಿನಾ ಕರೆಲೊಂದು ಕೂಡೋಳು ಗೂಡಿತ್
ಏನೋ ಅದು ಅಂದವನ ಕಣ್ಣುಗೆ ಬೀತ್
ಸೆನಿ ಸೆನಿ ತೇಳಿ ಅವ ಕಲ್ಲದ್ಕೆ ಹೊಡ್ದಿತ್
ಜುಂಯ್ ತೇಳಿ ನೆಳಂಗೆಲ್ಲ ಹೊರಗೆ ಹಾರ್ತಿತ್
ಹಂದಿಮೊರಿ ದನಂಗೆಲ್ಲ ಬೆರೇಂತ ಮರ್ಕ್ಟ್‌ಕಂಡ್
ಬೀಲ ಕುತ್ತ ಮಾಡಿ ಓಡುತ್ತಿದ್ದ
ಕಿಣಿಯ ಅಂವ ಅಲ್ಲಿಂದ ಜಾಗೆ ಕಾಲಿ ಮಾಡ್ತ್
ಬಲ್ಲೆ ಸೆರೆಲಿ ಅಡಿಂಗಿ ಬೊಗ್ಗಿ ನೋಡ್ತಿತ್
ಹನೀಸ್ ಹೊತ್ತ್‌ಲಿ ದಿಬ್ಬಣದೆದಾರ್‍ಯಾಗಿ ಬಾತಲೆ
ತಕ ನೋಡು ಎಲ್ಲವ್ಕೆ ಕುಟ್ಟಿಕೆ ಸುರು ಮಾಡ್ತಲೆ
ಹತ್ತೆಂಟು ಜನಂಗವು ಹಿಂಡಾಗಿ ಬಾತಿದ್ದ
ಅಜ್ಜಿಕ್ಕ ಮಕ್ಕಳ ಹೊತ್ತ್‌ಕಂಡೇ ಓಡ್ದ
ಅರ್ದ ಜನ ಒಳ ದಾರಿ ಹಿಡ್ದ್ ಮನೆ ಸೇರ್ದ
ಊಟದಾ ಹಂತ್ಲ್‌ಲ್ಯವು ಎದುರೆದುರು ಕುದ್ದಿದ್ದ
ಒಬ್ಬಂದೊಬ್ಬ ಅವು ನೋಡಿ ನೆಗಾಡ್ತಿದ್ದ
ಗಂಡು ಹೆಣ್ಣಿನ ಕೆಬಿ ಮೂಕ್ ಬಾತಿತ್
ಕೆಲವರ ಮುಸುಂಡಂತ್ ನೋಡಿಕೆ ಬೊತ್
ಅಂತಿಂತ್ ಹ್ಯಾಂಗಾರ್ ಜಂಬರನು ಕಳ್ತ್
ಕಲ್ಲು ಹೊಡ್ದದು ಅವ ತೇಳಿ ಮುಂದೇನೆ ಗೊತ್ತಾತ್
ಕಣ್ಣಿಗೆ ಮೆಣ್ಸಾಕಿ ಮೈಗೆ ಚವುಳಿನ ಕೊಡ್ಕಿ
ಅವನಪ್ಪನ ಕೈಂದವನ ಬೆನ್ನು ಹೊಡಿಯಾತ್



ಚೊಂಬ್ಯಾ ಚೆಟ್ಟಿನ ಕಥೆ

ಅಮ್ಮಣಿ ಗೂಡೆನ ವಿಳ್ಳೆ ಶಾಸ್ತ್ರದಂದು
ಎಲ್ಲಾವು ಮನೆಲಿದ್ದ
ಕುಡ್ದೊ ಕುಡ್ದೊ ತೆಂಕದ ಬಿಸ್ಲ್ ಬೊಡ್ದ್
ಕೊಟ್ಟೆ ಕಮ್ಮುನಾಂಗಿದ್ದ ಕೂಸಣ್ಣ
ಮೊದ್ವೆ ಕಾಲಲಿ ತಮ್ಮ ತಂದುಕೊಟ್ಟ
ಪೇಸನ್‌ನ ಕುಡ್ತಾ ಇಸ್ತ್ರೀ ಹಾಕದೆ
ಪೊಡಿ ಪೊಡಿಯಾಗಿ ಅರ್ಧ ಕೈ ಮೊಡ್ಸಿ
ಹಾಕಿದ್ದ್ ಬೆರ್ಚ್ಚಪ್ಪನಾಂಗೆ ಕಾಣ್ತಿತ್ತ್
ದವ್‌ಡೆ ಗಾಣಲಿ ಎಲಡ್ಕೆ ಸಣ್ಣಾತಿತ್ತ್
ಮುಳ್ಳಂದಿನಾಂಗಿದ್ದ ಗಡ್ಡ ತೆಗೆಯದೆ ಎಷ್ಟೋ
ದಿನ ಕಳ್ದಿತ್ತ್
        ಬೊಳ್ಪ್‌ಗೆದ್ದ್ ಮೊಸಿ ಅಗ್ದ್ ಕಾಯ್ಚೆಪ್ಪ
        ಕುಟ್ಟೆಲಿ ಹಲ್ಲುಜ್ಜಿ ಉಪ್ಪಣ ಕಿಚ್ಚಾಕಿ ತಣ್ಣೈಣ ಉಂಡು

ಒಣ್ಗ್ಕೆ ಹಾಕಿದ ಕೆಂಪುನ ತೆಳ್ಳಂಗೆನ ಗಾಳಿ ಹೊಡೆವ
ಕೋಮಣನ ಕುಂಡೆ ಅಂಡ್‌ನ ಸೆರೆಸ್ಯಾಕಿ
ತಂದು ಪಟ್ಟೆನೂಲೆಡೆಗೆ ಸೆಕ್ಕ್‌ಸಿ ಮೇಲೆ
ತುಂಡು ಬೈರಾಸ್ ಸುತ್ತಿ ಅದರ ಮೇಲೊಂದು
ಚೊಡಂಕ್ ಅದರ್‌ಲ್ಯೊಂದು ಹರಿಕತ್ತಿ
ತಲೆಮ್ಯಾಲೊಂದು ಮುಂಡಾಸ್ ಮೊಟ್ಟೆಲಿ ಎಲಾಡ್ಕೆ
ಒಂದು ಹನಿ ಕೋಳಿ ಗೂಡ್ಲಿ ಅಡಿಂಗಿಸಿದ
ಕುಪ್ಪಿನ ಬಾಯಿಗೆ ಹಿಡ್ದ್ ದನಮೇಪುಗೆ
ಹೋದರೆ ಕತ್ತಾಲಾಕನ ಬಾವ ಅಮ್ಮುಣಿನಪ್ಪನೂ ಇದ್ದ
ಕೆದಲುನ ಮನೆ ಎದುರು ಸೆಗ್‌ಣಿ ಗುಡ್ಸಿ ಚಪ್ಪರ ಹಾಕಿತ್ತ್
ಬೊಂಬ್ಯಾ`ಲಿರುವ ಮಕ್ಕ ಇಬ್ಬರೂ ನಿನ್ನೆ ಬಂದಿದ್ದ
ನೆಂಟ್ರು ಜೀಪು ಮಾಡಿ ಬಂದಿದ್ದ ಮೊದುಮಂಜನ ಅಯ್ಯೆನು ಅಪ್ಪನು ಬಂದಿದ್ದ
ಹಿಂದೆ ಬಂದ ಸಂಬಂಧನ ನೆರೆಕರೆವು ಕೆಬಿ ಉರ್ಗಿ ತಪ್ಪಿಸಿದ್ದ
ಈ ಸರ್ತಿ ಬೊಂಬ್ಯಾ ಮಂಜನ ದೋಸ್ತಿ ಗಡ
ಒಳ್ಳ ಪಾರ್ಟಿ ಗಡ ಬೇಕಸ್ಟ್ ಇದ್ದವು ಗಡ
ಊರು ಗೌಡ ಮರಿಯಣ್ಣನೂ ಇದ್ದ ಕಲ್ಲೆಂಬಿ ನೆಂಟ್ರು ಇದ್ದ
ಮನೆವು ನೆಂಟ್ರುಗ ಊರವು ಎಲ್ಲಾ ಸೇರಿದ್ದ
ಮಗ್ಗಿ ಬಾರದಲ್ಲಿಗೆ ನಾಗರ ಬೆತ್ತನ
ಕೂಸನ ಬೆನ್ನುಲೇ ಹೊಡಿ ಮಾಡಿದ್ದ
ಮಾಸ್ಟ್ರಿಗೆ ಕಡ್ಪತ್ತಿ ತೋರ್ಸಿದ ಹುಚ್ಚಪ್ಪ ಅಂವ
ತಾಮಸ ಆವೇಶದಂವ ಚೆಣ್ಡಾ ಮೇಲೆ ಕೂಸುನಂಗೆ ಅಂವ
ಸಾಲೆ ನಾಕರ್ಲೆ ಬುಟ್ಟು ನೇಗ್ಲ್ ಹಿಡ್ದಂವ
ಪಲ್ಲಕ್ಕಿಗೆ ಒಂದು ಬ್ಲಾಗದ ಹೆಗಲು ಅವಂದೇ
ಕುಡ್ದದು ಜಾಸ್ತಿಯಾದರೆ ಕೇಳ್ದೇ ಬೇಡ ಅವನ
ಕಥೆ ಅಪ್ಪಂಗು ಬೊಯ್ಗಳು ಹೆಣ್ಣುನ ಬೆನ್ನು ಪೊಡಿ
ಎಲ್ಲವೂ ಕೂಸನ ಚಿಂತೆ ಅವನ ಕೋಲಕ್ಕೆ
ನೆಂಟ್ರು ಏನೆಲ್ಲ ತಿಳ್ಕಂಡವೆ ಏನೋಂತ
ಕಡ್ಕೆಲಿ ಬತ್ತದೊಳಗೆ ಅಡಿಂಗಿಸಿದ ಕುಪ್ಪಿಂದ
ಆಗಾಗ ಸಬೆಂದೆದ್ದ್ ಹೋಗಿ ಕುಪ್ಪಿ ಬಾಯಿಗೆ ಹಿಡ್ದ್ ಬಾತಿತ್ತ್

ಅಪ್ಪಿಕೂಸು ಸಬೆ ನೋಡುಲಿ ಚುಮ್ಮಿ ಬುಟ್ಟುಕ್ಕೊಂಡು ಅತ್ತಿತ್ತಾ ಓಡ್ಯಾಡ್‌ತ್ತಿತ್
ಯಾರೋ ಹೇಳ್ದ ಹೈದಗೊಂದು ಚಡ್ಡಿ ಹಾಕಕಾಯ್ತಲೆಂತ
ಅಪ್ಪಿ ಕೂಸುಗೆ ಬೊಂಬ್ಯಾನ ಹೊಸ ಚೆಡ್ಡಿಯೇ ಆಕು
ಬೊಂಬ್ಯಾ ಚೆಡ್ಡಿ ಎಲ್ಲೋ ಕೂಸು ಇಟ್ಟಿತ್
ಎಲ್ಲವೂ ಹುಡ್ಕುವೆ ಚೆಡ್ಡಿನ ಅಟ್ಟಲಿ ಅಡಿಲಿ ನೇಕೆಲಿ
ಸಿಟ್ಟು ಏರ್ದ ಕೂಸ ಬೈತ್ ಬೇವರ್ಸಿ ಚೆಡ್ಡಿ ಹುಡ್ಡಿಕೆ ಬೊತ್ತಾಂತ
ಕೆಪ್ಪೆಗೂ ಬೊಡ್ತು ಹೆಣ್ಣಿಗೆ
ಮನೆ ತುಂಬಾ ಗುಲ್ಲೇ ಗುಲ್ಲು ಸೇರ್ದರೆಡೆಲಿ ಕೂಸಿನ ಬೊಬ್ಬೆ
ಚೆಡ್ಡಿನ ವಿಷಯಲಿ ಜಗಳ ಜೋರಾತ್
ಅಪ್ಪಂಗೂ ಮಂಜಗೂ ಮಾತಾತ್ ತಮ್ಮಂದಿರೂ ಸೇರಿ
ಒಗ್ಗರಣೆ ಹಾಕಿದಂತಾಗಿ ಚೆಡ್ಡಿನ ಜಗಳ ಪಾಲುಗೂ ಮುಟ್ಟಿತು
ಸಿಂಗಾರ ಮಾಡ್ದ ಅಮ್ಮಣಿ ಗೂಡೆ ಮರ್ದಿಕೆ ಸುರು ಮಾಡ್ತು
ಅಂತೂ ಕೂಸುಗೆ ಯಾರೋ ಒಂದು ಚಡ್ಡಿ ಹಾಕಿದ
ನೆಂಟ್ರು ಕಡಸ ಅಜ್ಜಿ ಎಂಟಾಣೆ ಕೊಟ್ಟು ಅಪ್ಪಿ ಕೂಸುನ
ನೇಚಿಕೊಂಡ್ ಸುಂಠಿ ಮಿಠಾಯಿ ತಿಂಬಕೆ ಹೇಳ್ತು
ಹೈದ ಅಂಡಡಿ ಹಕ್ಕಲೆ ಓಡಿತ್
ಸೇರ್ದವು ಎಲ್ಲ ಪಿಸಿ ಪಸಿ ಮಾತಾಡಿವೆ
ಕೇಂವು ಮನೆವರ ಸಮಧಾನ ಮಾಡಿವೆ
ಕೆಲವು ಕೂಸನ ಎಳ್ಕಂಡೋದವೆ
ಮೂಲೆಲಿ ಕೆಲವು ಗುಂಪಾಗಿ ಮಾತಾಡ್ನೆ
ಯಾರೋ ಆಚೆ ಕಡೆಂದ ಓಡಿ ಬಂದ್ ಹೇಳ್ದ
ಎಲ್ಲವು ಅಂಗಡಿಕ್ಕಲೆ ಓಡ್ದ
ಅಪ್ಪಿಕೂಸು ರೋಡ್ ಮದ್ಯಲೆ ಮಲ್ಗಿತ್
ನೆತ್ತರು ಸುತ್ತ ಹರಿದಿತ್ ಸುಂಠಿ ಮಿಠಾಯಿ
ಕೈಲೆ ಇತ್ ಬುಟ್ಟ ಕಣ್ಣು ಹಂಗೇ ಇತ್
ಮೋರೆಲಿ ಮುಗ್ದತೆ ಹಂಗೆ ಇತ್
ಜೀಪೊಂದು ಆಚೆ ತಲೆ ಕೆಳಗಾಗಿ ಬಿದ್ದಿತ್
ಅತ್ತ ಮನೇಲಿ ಕೂಸ್‌ನ ಅಯ್ಯೆ ಎಲ್ಲಿತ್
ಎಂಡ್ರೆಕ್ಸ್ ಡಬ್ಬಿ ಕಾಲಿ ಬಿದ್ದಿತ್.

ಅತ್ತಿಗೆನ ತಂಗೆ

ಅಣ್ಣಾನ ಮೊದುವೆಗೆ ಬಂದಿತ್ ಗೂಡೆ
ಮೊದೊಳಿಗೆ ನಾಂಗಿತ್ತ್ಯಾ
ಅಣ್ಣಾನಾಮೊದಳಿಗೆ ಇತ್ತಲ್ಲಿ ಮಂಟಪಲಿ
ಇದು ಯಾರು ಹೊಸ ಗೂಡೆಯಾ
ಚಪ್ಪಾರದಡಿಲಿ ನೆರ್ಕೆನ ಸೆರೆಲಿ
ನಾ ಬೊಗ್ಗಿ ನೋಡ್ತಿದ್ದೆಯಾ
ಹಿಂದೆಂದ ಬಂದ್ ನನ್ನಮ್ಮ ತಲೆಗೆ
ಹೆಟ್ಟಿದ್ದೇ ಗೊತ್ತಾತ್ಲೆಯಾ
ನಿಶ್ಚಯಾದಂದ್ ಹೋಗಿದ್ದೆ ನಾಯ
ಅದು ಅಲ್ಲಿ ಎಲ್ಲಿತ್ತ್ಯಾ
ಎಷ್ಟೆಷ್ಟೋ ಗೂಡೆಗ ಬಂದಿದ್ದ ಅಂದ್
ಇದರಾಂಗೆ ಒಂದಿತ್ಲೆಯಾ
ಚಿನ್ನ ಬೆಳ್ಳೈಲ್ಲಾ ತೆಗಿವಂದು ಕೂಡ
ಅದು ಅಂದು ಬಂದಿತ್ಲೆಯಾ
ಅದರಯ್ಯೆ ಅಪ್ಪ ಮತ್ತೆ ಚಿಕ್ಕಪ್ಪ
ಅವು ಮಾತ್ರ ಬಂದಿದ್ದಯಾ
ಊಟದ ಹಂತ್‌ಲಿ ನನ್ನೆದುರೇ ಕುದ್ದಿತ್
ಕುಡಿನೋಟ ಬೀರ್ತಿತ್ತ್ಯಾ
ಓರೆ ಕಣ್ಣಾಲಿ ಅದು ಮುಗುಳು ನಗುದರ ಕಂಡು
ನಾ ಅಲ್ಲೆ ಮೈಮರ್ತೆಯಾ
ಅಂತಿಂತ್ ಕಡೆಗೆ ಕರೆಕರೆಗೆ ಬಾತ್
ಕೇಳ್ದೆ ನಾ ಯಾವುರೂಂತ
ಮೊದುಳೀಗೆಗೊಂದು ತಂಗೆ ಉಟ್ಟುಂತ
ನಾ ಎಂದೋ ಮರ್ತಿದ್ದೆಯಾ
ಮೊದುಮಂಜನ ತಮ್ಮ ನಾಂತೇಳಿ ಹೇಳ್ಕೆ
ಸಂಬಂಧ ಎಲ್ಲ ಸಮ ಆತುಂತ
ಅಕ್ಕನಾ ಮೊದುವೆ ಪೊರ್ಲುಂಲಿ ಕಳೆಲಿ ಮತ್ತೆ ನೋಡಮ ತೇಳ್ತ್ಯಾ.




ಮಾಟ

ಕಾನ ಕೋಡಿ ಕುಮೇರಿ ಕಡೆಕನ
ಕಾಳಮನೆ ಕಾಳಪ್ಪಜ್ಜಂಗೆ
ಕಾಲುಗೊಂದು ಮುಳ್ಳು ಹೆಟ್ಟಿತ್ತ್
        ಕಾಲು ಬೇನೆ ಜೋರಾಗಿತ್ತು
        ಕೀಲುಪರೆಗೆ ಬಾತೋಗಿತ್ತು
        ಕಾಡ್ದೇ ತಂದು ಅರ್ದು ಹಾಕಿರು ಗುಣನೂ ಎಲ್ಯಾತ್
ಅಞಾಣ ಗಿಞಣ ಎಲ್ಲಾ ನೋಡ್ದ
ಕೇರಳ ನಾಯರ ಪಂಚಾಗ ಕೇಳ್ದ
ಅಯ್ಯಣ ಬಾವನ ದೇವ್ರಿನು ಹೇಳ್ತು
ಮಾಟನ ಮಾಡ[illegible]ಡ
ಅಜ್ಜನ ತ[illegible] ಹಾಳಾಗೋತು

ನೆರೆಕರೆ ಮನೆವರ ಡೌಟ್‌ಲಿ ನೋಡ್ತ್
ಹಿಡ್ಡದ್ ಮುಟ್ಟಿದಕ್ಕೆಲ್ಲಾ ಮಾಟದ ನೆವನಲಿ ಜಗಳನ ಮಾಡ್ತ್
ಚೊಟ್ಟನ ಹಾಕಿದು ಒಂದ್ವರೆ ಕಾಲುಲಿ
ನೂಲುಗೆ ಭಸ್ಮಕ್ಕೆ ತಿರ್ಗುದೆ ಆತು
ಕೇರೆನ ಬಾಯಿಂದ ತಪ್ಪಸಿ ಬಂದ
ಉಡುವೊಂದು ಓಡಿ ಮನೆಗೇನೆ ಬಾತು
ಹೇಂಟೆ ಲಾಕಿ ತಲೆ ಕಡ್ಪ ಹಾರಿ ಕುಬಳಲಿ ಕುದ್ದತ್ತ್
ದಿನ ಮುಂದೆ ಕಾಪುಲಿ ನೆಲ್ಲಿ ಮೊಟ್ಟೆ ಹಾಕಿತ್ತ್
ಕರಿವ ದನ ಕಾಣೆ ಆತು
ಮೊರಿವ ನಾಯಿನ ಹುಲಿ ಹಿಡ್ತ್
ಕೊತ್ತಿ ಎಲಿನ ಮರ್ತಿತ್ತ್
ಕತ್ತಿ ಮೊಣ್ಣು ಹಿಡೆತ್ತಿತ್ತ್
ಮಳೆಯ ಬಾತ್ ಹೊಳೆನೇ ಹರ್ತ್
ಕೊಳೆರೋಗ ಬಾತ್ ಅಡ್ಕೆಲ್ಲ ಉದುರ್ತ್
ಮಾಮೂಲು ವೊದ್ದು ಬುಡ್ಡರ ಮರ್ತ್
ಕಪಾಟುಲಿ ಕಟ್ಟಿಸಿದ ದುಡ್ಡದು ಎಲ್ಲ
ಮಾಟಕೆ ವೊಂತ್ರಕೆ ಸಾಂತಿಗೆ ಆತು
ಎಲ್ಲಾ ಕಡೆ ತಡೆ ಆತು ಹೊಡೆ ಹೋಗದ
ಗದ್ದೆಗೂ ತಡೆ ಆತು
ಎದುರುನ ಬಿಟ್ಟಲಿ ಕಾಗದ ಕಟ್ಟುಗ
ತಾಮ್ರದ ತಗಡುಗ ಮಂತ್ರದ
ಕಾಯಿಗಳ ಜೊಂಗೆನೇ ಆತು
ಬಾವುಲಿನಾಂಗೆ ನೇತಾಡ್ತಿತ್ತ್
ಕಣಿಯೊಬ್ಬ ಬಾತು ಕಿಣಿಯೆಂತೋ ಮಾಡ್ತ್
ಮಾರಪು ಗಂಟ್‌ಲಿ ಹೊರ್ಟ್ತ್‌ಯಾ
ಅಜಲನು ಬಾತ್ ಮಲಿಯನು ಬಾತ್
ಭಾರಿ ಮಂತ್ರದ ಕುಡಿಯನು ಬಾತ್
ಮಂತ್ರಿಗಳ ಬೊದ್ಧಿಕಸಿದ ತಂತ್ರಿಗವು ಬಂದ
ಎಲ್ಲವು ಬಂದ ಮಂತ್ರನ ಮಾಡ್ಡ
ಕೂಡ್ಸಿದ್ ಕಳ್ದ್‌ದ್ ಒಡಿಗೆನ್ ಕಡ್ಡ

ಸೊಂಟಕೆ ಗಂಟ್ಲ್‌ಗೆರಟ್ಟೆಗೆ ಎಲ್ಲ
ಬಗೆ ಬಗೆ ಮಂತ್ರದ ನೂಲುನು ಕೊಟ್ಟ
ಏನೇನು ಹೆದ್ರ್‌ಬಡಿ ಗೌಡ್ರೇಂತೇಳಿ
ಬಾಯಿಗೆ ಬಂದಾಗೆ ರೈಲುನು ಬುಟ್ರೋ
ಏನೇ ಆದರೂ ಕರ್ಣಕುತ್ತ ಮೊಗ್ದರೂ
ಕಾಲದು ದಿನ ದಿನ ಬಾತೋತ್ತಿತ್ತ್
ಈ ಸರ್ತಿ ಅಜ್ಜಂಗೆ ಏನು ಬೊತ್ತ್
ಬೇನೆಲಿ ನಡೆಕೆ ಬೊತ್ತದಾಂಗಾತು
ನೆಂಟ್ರ್‌ಗೆ ಮಗಕ್ಕಳಿಗೆ ಸುದ್ದಿನು ಹೊತು
ಕಾಗದ ಸಿಕ್ಕಿದು ಮಂಜನು ಬಾತು
ಇಷ್ಟೆಲ್ಲ ಆದರು ಅಜ್ಜಂಗೆ ಚೂರಾರ್ ಡಾಕ್ಟ್ರ ನೆಂಪಂತು ಎಲ್ಯಾದ್‌ಇತ್ತ್
ಮುಳ್ಳದು ತಾಂಗುದು ಸುರು ಏನಲ್ಲ
ಸಾಮಾನ್ಯ ಮೊದ್ದವ್ಕೆ ಗೊತ್ತಿತ್ತ್ ಎಲ್ಲ
ಜರಕ್ಕೆ ಎಲ್ಲ ಬೀಟಿನ ಕೆತ್ತೆ
ಗುದ್ದಿದು ಕುಡಿಯೋಕು ಹೊಲುವೆದು ಮತ್ತೆ
ಹೇಳಿದ್ದ ಅವರ ಸೋದರ ಅತ್ತೆ
ಸಕ್ಕರೆ, ಬೆಲ್ಲದ ಹೊಸ ಹೊಸ ರೋಗಗ
ಗೊತ್ತಿತ್ತ್ ಅವ್ಕೆ ಎಲ್ಯದ್ ಪಾಪ
ಮಾಯ ಮಂತ್ರಂತ ಸಿಕ್ಕಿದಕೆಲ್ಲ ಉರೂರು ತಿರ್ಗಿದ್ದ
ನೂಲು ಭಸ್ಮ ಕಿರಿಯಕೆ ತೇಳಿ ದುಡ್ಡುನ ಕಳ್ದಿದ್ದ
ಸೂಜಿಲಿ ಆವ ಕೆಲ್ಸಕೆ ಕಡೆಗೆ ಬೊಡ್ಡಿನೇ ಬೇಕಾತು
ಸಕ್ಕರೆ ಕಾಯ್ಲೆಂದ ಗಂಟ್‌ಂದ ಕೆಳಗೆ ಕಾಲೇ ತೆಗೆಕ್ಯಾತ್
ಕಾಲುನ ಡಾಕ್ಟ್ರ್‌ಗೆ ತೋರ್ಸದೆ ಗಂಟ್‌ದ ಕಾಲೇ ಕಳ್ಕಂಡ
ಮಾಯಕೆ ಮಂತ್ರಕೆ ತೇಳಿದ್ ದುಡ್ಡನು ಕಳ್ಕಂಡ
ನೆರೆಕರೆ ಮನೆಯವರ ಒಟ್ಟಿಗೆ ವಿಶ್ವಾಸನು ಕಳ್ಕಂಡ
ಸಂಕಲ್ಪನೇ ಸಂಕಪಾಷಣ ಆದೆಯ ದುಡುಕಿರೆ ಎಲ್ಲವ್ಕೆಯಾ.

ಮಿಲಿಸೆ ಬಾಕನ




ನಿದ್ದೆನೆಬಾದುಲೆಯ ಹೈದಂಗೆ ನಿದ್ದನೆ ಬಾದುಲೆಯಾ
ಮಗ್ಗ್‌ಲ್ ಬದಲ್ಸಿ ಹೊಣ್ಕಿದು ಮಲ್ಗಿರು
ನಿದ್ದೇನೆ ಬಾದುಲೆಯಾ
ಮಿನಿ ಮಿಡಿ ಚೂಡಿಲಿ ಮಿರಿ ಮಿರಿ ಮಿಂಚುವಳದ್ದೆ
ಯೋಚನೆಯಾ
ಗೂಡೆದ್ದೇ ಯೋಚನೆಯ ನಿದ್ದೆ ಬಾದುಲೆಯಾ.

ಹೋದಲ್ಲಿ ಬಂದಲ್ಲಿ ನಿತ್ತಲ್ಲಿ ಕುದ್ದಲ್ಲಿ ಅದುವೆ ಕಾಂಬೋದುಯಾ
ಮೊರ್ಲದು ಏನೋ ನಂಗ್ಯವ್ ಗೊತ್ತ್ಲೆ ಪೊರ್ಲದು ಕಂಡದೆಯಾ
ಕಂಬಳಿ ಮೇಲ್ಯೊಂದು ಕಂಬಳಿ ಹೊದ್ದರೆ ಅಲ್ಲಿಗೂ ಬಂದದೆಯಾ
ನೆನ್ಸದೆ ಮಲ್ಗಿರು ಇರ್ಲಲಿ ಕೂಡಾ ಕನ್ಸ್‌ಲಿ ಬಂದದೆಯಾ

ಓದಿಕೆ ಕುದ್ದರೆ ಪುಸ್ತಕ ತುಂಬ ಅದರದೆ ಚಿತ್ರಂಗಯಾ
ಅದರ ದಿನಚರಿ ಯಾಗೊಳು ನೆನ್ಸಿರೆ ಮುಗಿಯದ ಪರ್ಸಂಗಯಾ

ಎದೆನಾ ಒಳಗೆ ರಾಣಿನ ಹಾಂಗೆ ಅದುವೆ ಆಳಿದೆಯಾ
ಆಟಲಿ ತೋಟಲಿ ಕೊಡ್ದಂತ ಕೂಟಲೂ ನೆಂಪೆ ಅದರ್ದೆಯಾ
ಅಪ್ಪನ ಕೆಬಿಗೆ ಬಿದ್ದರೆ ಪೊರ್ಲುಲಿ ಚೆಲ್ಲಣ ಸಿಕ್ಕುದುಯಾ
ಅಮ್ಮನ ಪರಂಚೆಲು ತಡೆಕೆ ಬೊತ್ತದೆ ಮನೆಬುಟ್ಟು ಓಡಕಾದ್ಯಾ.



ಪಂಡ್

ಪಂಡೊಂದು ಕಾಲ ಇತ್ತ್
ಮನೆ ತುಂಬಾ ಜನಂಗ ಇತ್ತ್
ಮಕ್ಕ ಮೊರಿಗಾಂತೇಳಿ ತುಂಬಿ ತುಳುಕಾಡ್ತಿತ್ತ್
        ಆಳಾಗಿ ದುಡೀತ್ತಿದ್ದ
        ಅರ್ಸಾಗಿ ಉಣುತ್ತಿದ್ದ
        ಯಾರ ಹಂಗುನು ಇಲ್ಲದೆ ಅವು ಬಾಳುತ್ತಿದ್ದ
ಅಡ್ಕೆ ಬತ್ತಾಂತೇಳಿ ಕಡ್ಕೆಲ್ಲ ತುಂಬಿತ್ತ್
ಧನ ಧಾನ್ಯ ಲಕ್ಷ್ಮಿನು ಒಟ್ಟಿಗೆ ನೆಲ್ಸಿತ್ತ್
ಉಪ್ಪರಿಗೆ ಮನೆ ಎದುರು ಚಪ್ಪರ ಇರುತ್ತಿತ್ತ್
ಕೊಪ್ಪಾರಿಗೆಲಿ ಬೇಸಿ ಅಜ್ಜಿ ಇಕ್ಕ್‌ತ್ತಿತ್

ಅತ್ತೆ ಸೊಸೆಕಳ ನಡುವೆ ಮಾತೇನು ಬೆಳ್ದರು
ಮತ್ತೆ ಮಾತಾಡಿ ಎಲ್ಲ ನೆಗಾಡಿ ಮರ್‍ೆತಿದ್ದ
ವಾರ ವಾರಕೆ ನೆಂಟ್ರ ಹಾಜರಿ ಇರುತ್ತಿತ್ತ್
ಗೂಡ್ಲಿದ ಕೊಳಿಗಳಿಗೆ ಸರದಿ ಬಲಿ ಇತ್ತು
ಮನೆದೊಂದು ಹಟ್ಟಿ ಇತ್ತು
ಹಟ್ಟಿ ತುಂಬಾ ದನಂಗ ಇತ್ತು
ಎಮ್ಮೆ ದನಂಗ ತೇಳಿ ಹಾಲ್ಗೇನ್ ಕಮ್ಮಿತ್ತ್
ಅರ್ಥದ್ದ ಕಲ್ತಿದ್ದ ಡಾಕ್ಟ್ರೆಲ್ಲ ಎಲ್ಲಿದ್ದ
ಸೊಪ್ಪು ಬೇರ್‌ನ ಎಲ್ಲಾ ಗುದ್ಧಿಕೊಡುತ್ತಿದ್ದ
ಜಾತ್ರೆ ಮೊದುವೆಗೆಲ್ಲ ಒಟ್ಟಾಗಿ ಹೋತ್ತಿದ್ದ
ದೆವ್ವ ದೇವ್ರ್‌ಂತೇಳಿ ಕಟ್ಟು ನಿಟ್ಟಾಗಿದ್ದ
ಒಂದಾಗಿ ದುಡಿತ್ತಿದ್ದ ಒಟ್ಟಾಗಿ ಉಣೊತ್ತಿದ್ದ
ಎಲ್ಲದರೆಲ್ಲವು ಹಂಚಿ ಉಂಬೋತಿದ್ದ
ಹೆತ್ತು ಹೊತ್ತ ಹತ್ತು ಕೈಗೆಲ್ಲ ಸೇರಿ
ಹೊತ್ತೇರಿಕೆ ಮುಂದೆ ಒನ್ಕೆ ಹಿಡಿತಿದ್ದ
ಮನ್ಸ್ ಬಾಯಿನು ಸೇರಿ ಪದ್ಯ ಹೇಳ್ತಿದ್ದ
ಬೆಳ್ಳಿ ಮೂಡಿಕೆ ಮುಂದೆ ಬೆಳ್ಯೆತ್ತುನಾಕಟ್ಟಿ
ಸಾಲೊಂದು ಮಾಡ್ತಿದ್ದ ಆ ಸುಗ್ಗಿ ಪಗ್ಗುಲಿ
ತಿರ್‍ಗಿ ಬಾತಿದ್ದ ನಮ್ಮಜ್ಜಯಾಗೋಳು
ಹಗಲಿಡಿ ಮಾಮೂಲು ದನ ಮೇಪು ಮಾಡಿ
ನೆರೆಕರೆ ಮನೆಗಳ ಕಿರಿಕಿರಿ ಎಲ್ಲಿತ್ತ್
ಮನೆತನಗಳಿಗಂದು ಬಾರಿ ಬೆಲೆ ಇತ್ತ್
ಕಾಲನು ಉರುಳಿತ್ ಜನಂಗಳು ಬದಲಾತು
ಮನೆಗಳು ಒಂದೆರಡುಮೂರಾಗಿ ಹೋತು
ಅಂದುನ ದಿನಂಗೆಲ್ಲ ಬರಿ ನೆಂಪಾಗಿ ಒಳ್ತು.



ಅಮರ ಸುಳ್ಯದ ಗೌಡರು

ಎಲ್ಲಿ ಜಡಿಮಳೆ ಬಿಸ್ಲ್ ತೇಳದೆ
ಮುಡಿವ ಜನಗಳ ಕಂಡರ್ಯೋ
ಅಲ್ಲೆ ಗಿರಿಗೌವರಗಳೆಡೆಗಳಲಿ
ಹೂಡ್ವದೆನಿನ ಕೇಳ್ದರಿಯೋ
    ಹಣ್ಣ್ ಆಚೆಗೆ ನೋಡಿಯಾ
    ಅದುವೆ ಗೌಡರ ಗೂಡುಯಾ
    ಅದುವೆ ಸುಳ್ಯದ ಸೀಮೆಯಾ

ಹರಿವ ಹಾವುನ ಹಿಡ್ದ್ ಮುಂಡಾಸಾಗಿ
ತಲೆಗೆನೆ ಬಿಗ್ದಯಾ
ಹುಲಿನ ಮೋಟೆಗೆ ಹುಕ್ಕು ಬೀಲಲಿ
ಎಳ್ದ್ ಹೊರೆಗೆ ಇಟ್ಟಯಾ
ಅವ್ವೇ ಸುಳ್ಯದ ಗೌಡ್ರುಗಾ
ಅವ್ವೆ ಮಲೆಗಳ ಮಕ್ಕಯಾ
ಹಲವು ಶತ ಶತ ಮಾನವರೆಗೆನು
ದಾಸ್ಯ ನೊಜಕೆ ಬೊಗ್ಗಿದವ್
ಬೇದ ಬಾವನ ಎಲ್ಲ ಮರ್ತ್‌ದ್
ಸಾಮರಸ್ಯಕೆ ಒಗ್ಗಿದವ್
ಪರಂಗಿ ದೊರೆಗಳ ದಬರದಸ್ತಿಗೆ
ಬೆಡಿಲಿ ಉತ್ತರ ಕೊಟ್ಟವವ್
ದೇಹ ಪ್ರಾಣನ ಹಂಗ್ ತೊರ್ದ್
ಎದೆನ ಉಬ್ಬಿಸಿ ನಿತ್ತವವ್
ಹಬ್ಬ ಹರಿದಿನ ಗದ್ದೆ ಗೋರಿನ
ಸುಗ್ಗಿ ಎಲ್ಲದರ ನಡುವೆಲಿ
ಹಿಗ್ಗಿ ಕೋಣೆವ ಸಿದ್ದವೇಷನು
ಮತ್ತೇ ಸುಗ್ಗಿ ಪಾಡ್ದನ
ದೆವ್ವ ಕಂಬಳ ತಾಳ ಮದ್ದಳೆ
ಕೋಳಿ ಕಟ್ಟದ ಕಲೆಗಯಾ
ಮೊದುವೆ ಬೊಜ್ಜ ಆಟಿ ಇರಣ
ಖೆಡ್ಡಾಸ ಮತ್ತೆ ಹೊಸ್ತ್‌ಲಿ
ಹಳ್ತು ಆದರೂ ಮತ್ತೆ ಚಿಗುರಿದ್
ಎಲ್ಲ ಕುಡಿಗಳ ಸಂಗಮ
ಕೂಟ ಕೂಡಿದ್ ಕೊಂಬರೆಲ್ಲರ್
ಮಾಸ ದೂಟದ ಗಮಗಮ
ಅವ್ವೆ ಸುಳ್ಯದ ಗೌಡ್ರುಯಾ
ಅವ್ವೇ ಸುಳ್ಯದ ಕಲಿಗಯಾ.

ಪೋಟೆನ ಪೊಸೆ ಬಂದಾಂದ್

ದಾಲ್ನಾಳಿ ಸೀನ ಅಂವ ಸುಳ್ಳೇಳಿ
ನೂರೆಂಟ್ ಸಂಬಂಧ ಹೇಳಿತ್ತ್
ಅವ ಸಂಬಂಧ ಮಾಡಿತ್ತ್
ಪೇಟೆನ ಗೂಡೆನ ಪೊರ್ಲುನ ಕಥೆ ಕೇಳಿ
ಹೈದಂವ ಅವ ಮೋರ್ಲುನು ಆಗಿತ್ತ್
ಚಿನ್ನನು ಜಾಗೆನು ದುಡ್ಡುನು ಕೊಟ್ಟವೆ
ಮತ್ತೊಂದು ಕಾರು ಗಡ
ಕೊಂಬು ವಾಲಗಲೆ ತಂದುದು ಕೊಟ್ಟವೆ
ಹೈದನ ಮನೆಗೆ ಗಡ
ಗೂಡೆನ ಕೋಲಕೆ ಉಬ್ಬಿದ ಹೈದ ಮಾತ್‌ನ ಮೀರಿತ್ತ್
ಬೇಡ ತೇಳ್ದ ಅಯ್ಯಪ್ಪನ ಮಾತು ಎಲ್ಲಿಯದು ಅಂವ ಕೇಳ್ತ್
ಅರೆ ಬರೆ ಕಲ್ತುದು ಅಪ್ಪನ ಮಾತೆಲ್ಲ ಮರ್ಲ್‌ತ ಅವಂಗಾತ್.

ಬಳುಕುವ ಬಳ್ಳಿ ಕಣ್ಣ್ ಮಿಂಚುಳ್ಳಿ ಅದು ಕಾಡ್‌ನ ಪಚ್ಚೆ ಗಿಳಿ
ಟೊಮೇಟ ಹಣ್ಣ್‌ನ ಹಾಂಗೆ ಹೊಳ್ಪವೆ ಕೆನ್ನೆಗ ನೋಡಿಕೆ ಬಲು ಕೆಂಪು
ಹಾಕುವ ಜೋಡು ಎತ್ತರ ಮುಡುದು ತೆಗ್ದರೆ ಹಣ್ಣ್ ಕುಳ್ಳಿ
ಅದು ಗೂಡುನ ಪಚ್ಚೆ ಗಿಳಿ ಬರಿ ಸೋಕ್‌ನ ಅರಗಿಳಿಯಾ
ಹಾಕುದು ಚೂಡಿ ಮತ್ತೆ ಅದು ನೈಟಿ
ತಿರ್‌ಗಿಕೆ ಬೇಕೂ ಏನಾರ್ ಗಾಡಿ
ಟಿವಿ ಫ್ರಿಜ್‌ನ ನಡುಲಿ ಠೀವಿಲಿ ಬೆಳ್ದಿತ್ತ್
ಅಡಿಲಿ ಡಾಬರ್ ಮಲ್ಗಿತ್ತ್
ತಿಂಬಕೆಯಾಗೊಳು ತಂಪುದೆ ಇತ್ತ್
ಸೊಂಪುಲೇ ಬೆಳ್ದಿತ್ತ್
ಗೊತ್ತುಟು ಎಲ್ಲಿಯದ್ಕೆ ಬಾಮಿಂದ ನೀರೆಳ್ದ್
ಇತ್ತದರ ಮನೇಲಿ ಪಂಪು
ಸೊಸೆಯಾಗಿ ಬಂದದು ಉಷೆಯಾಗಿ
ಇರ್ದ್‌ತ ಅಯ್ಯಪ್ಪ ಗ್ರೇಸಿರೆಯಾ

ದಿನ ಕಳ್ದಾಂಗೆ ಅದರ ಕಾರ್ಬಾರ ನೋಡಿ ಬಾಯಿನೆ ಬುಟ್ಟತ್ಲೇಯಾ
ಇದ್ದೊಬ್ಬ ಮಂಜನ ಮೇಲಿನ ಪ್ರೀತಿ ಗೆ
ಬಾಯಿ ಮುಚ್ಚಿದೇ ಇರಕಾತ್ ಅವನೇ ಹೆಣ್ಣಾತ್
ಹೊಡ್ವಲ್ಲಿ ಹೋತ್ಲರೆ ಹೋದಲ್ಲಿ ಹೊಡಿವಾಂಗೆ
ಅಪ್ಪನೂ ಬದಲಾದ.

ಮನೆ ಎದ್ರ್ಯ ತೂಗಿದ್ದ ನೊಜ ನೇಗ್ಲ್‌ಗ ಅಟ್ಟನ ಸೇರಿತ್ತ್
ಸುಣ್ಣ ಬಣ್ಣ ಆತ್ ಮನೆಗೆ ಸಾರ್ಣೆ ಆತ್
ಚಿಣೆ ಎಲ್ಲ ಹೂ ದ್ಯೆನ ಚಟ್ಟಿಗಳೆ ಆತ್
ಮೊಜ್ಜಿಗೆ ಕಡೆಕೆ ಸ್ಟೀಲ್‌ನ ಗುತ್ಯಾತ್
ಬೊಗ್ಗಿ ಒಲೆ ಉರ್ಗುದೇಕೆ ಗ್ಯಾಸ್‌ನೂ ಬಾತ್
ಕುಡ್ಪು ಮರ್ಕ್ಚಟೆ ಚಿಬುಳು ಅಟ್ಟ ಸೇರ್ತ್
ಗ್ರ್ಯೆಂಡರಂದ ಕಡ್ಕಲ್ಲಿಗೆ ಕಡೇ ಕಾಲ ಆತ್
ಕಾಲ ಬದಲಾದಂಗೆ ಕೋಲಗಳು ಬದಲಾದೆ
ಹೊಂದಿಕಣ್ಕೆ ಆತ್ಲರು ಹಿರಿಯವು ಹೊಂದಿನಡೆಕ್ಕಾದೆ
ಇಲ್ಲರೆ ಎಲ್ಲಿ ಸಮ ಹೋದೆ
ಯಾಗೋಳು ಜಗಳನೇ ಆದೆ
ಕಲ್ತವರೆಡೆಲಿ ಹಿರಿಯರ ಮಾತು
ನಗೆ ಪಾಠಲೂ ಆದೆ
ಬೊದ್ಕುದು ಕೂಡ ದಿನ ದಿನನು
ಸಂಕೀರ್ಣನು ಆಗ್ಯೋದೆ
ನಮ್ಮ ಸಂಸ್ಕ್ರತಿನೂ ಹೋದೆ.



ದುಡ್ಡು

ದುಡ್ಡೇ ದೂರಾ ಮಾಡಿದೆಯಾ
ಸಂಬಂಧಗಳ ದುಡ್ಡೇ ಏನೆಲ್ಲ ಮಾಡುದುಯಾ
ಅಪ್ಪ ಮಕ್ಕಳ ಬೇರೆನ ಮಾಡ್ದ್
ಅಣ್ಣ ತಮ್ಮನ ಬೇರೆ ಮಾಡ್ದೆ
ಮೊನ್ನೆ ಮೊನ್ನೆ ಮೊದುವ್ಯಾದ ಮೊದುಮಕ್ಕಳನೆ
ಬೇರೆ ಅದು ಮಾಡ್ದ್

ನೆರೆ ಕರೆ ನೆಮ್ಮದಿ ಹಾಳ್‌ನು ಮಾಡ್ದೆ
ಸಂಬಂಧಗಳ ಕರೆ ಕರೆ ಮಾಡ್ದೆ
ಮೊದುವೆ ಮುಂಜಿಗೆ ಸಾಲನ ಮಾಡ್ಸಿದೆ
ಮೂಲಕೆನೆ ಮರು ಸಾಲನು ಆದೆ
ಸಾಲನು ಬೆಳ್ದ್ ಶೂಲನೇ ಆಗಿ
ಕೆಲವ್ಕೆ ಗತಿ ಕೆರೆ ಬಾಮಿನೆ ಮಾಡ್ದೆ
ದುಡ್ಡೇ ಏನೆಲ್ಲ ಮಾಡುದುಯಾ


ವರದಕ್ಷಿಣೆನ ಕೊಡದೇ ಇದ್ದರೆ
ಕೊಡುವ ಗೂಡೆಗೆ ನೆಮ್ಮದಿ ಇಲ್ಲೆ
ಕಾಣಿಕೆ ಬಟ್ರಿಗೂ ಬೀಳದೇ ಇದ್ದರೆ
ಹೂವುನು, ತೀರ್ಥನು, ಗಂಧ ಅದ್ ಇಲ್ಲೆ

ಜೋಬುಲಿ ಯಾಗೊಳು ಜಣಜಣ ಇದ್ದರೆ
ದೂರದ ಬಂಟ ನೆಂಟನೂ ಆದೆ
ಕಾಲಿದ್ದರು ಅಂವ ಕುಂಟನೂ ಆದೆ
ಹೋಕೆ ಬಾಕೆ ತಿರ್ಗಿಕೆ ಎಲ್ಲ
ಕಾರೋ ಬೈಕೋ ಬೇಕುಂತಾದೆ

ಕಣಕಣಲಿನು ನೀನೇ ಇರುವಂತ ನಲ್ನೆನೂ ಹೇಳ್ದೆ
ಹೆಣ ಹೊರಿಕೆನು ನೆರೆಮನೆವನು ಇದ್ದದೆ
ಸಣಕಲಿನು ಸೀರೆನ ಬಿಚ್ಚಿದು ಕೊಟ್ಟದೆ

ಕಿಸೆಕಾಲ್ಯಾದರೆ ಯಾರೂ ಇಲ್ಲೆ
ನೆಂಟ್ರಿಗೆ ಯಾಗೊಳ್ ಪುರ್ಸೊತ್ತಿಲ್ಲೆ
ಬಿದ್ದರೆ ಎದ್ದರೆ ಮುಲಾಮು ಹಾಕವು
ಜಾಗೆ ಅದು ಏಲಂ ಆದರೂ ಇಲ್ಲೆ

ಪಸೆ ಆರ್ದ ಕೆರೆ ಬಾಮಿನೆಲ್ಲ
ಕಪ್ಪೆಗ ಹಾವುಗ ಬುಟ್ಟೋವಾಂಗೆ
ದುಡ್ಡೇ ದೂರ ಮಾಡುದುಯಾ
ದುಡ್ಡೇ ಏನೆಲ್ಲ ಮಾಡಿದೆಯಾ.



ಸರಿ ಇಲ್ಲದವರ ನಡುಲ್ಲ್ಯೊಂದು ಮರ

ಮೇಗಡೆ ಸಣಪ್ಪಂಗು
ಕಾಗಡೆ ದೊಡಪ್ಪಂಗು
ಬಾರಿ ಹಗೆ ಇತ್ತು
ವಿಷಯದ್ ನೋಡಿರೆ ಬೇರೇನಲ್ಲ
ಹಲ್ಸಿನ ಮರಕ್ಕಿತ್ತ್

ಹಗೆಯದ್ ತೇಳ್ರೆ ಹೊಗೆಯಾಡ್ತಿತ್ತ್
ಉಮಿಯೊಳಗೆನ ಕೆಂಡನ ಹಾಂಗೆ
ಒಳಗೊಳಗೆನೆ ಉರಿತಿತ್ತ್

ಎದ್‌ರೆದುರಾದರು ನೆಗಾಡ್ದ್‌ಬುಡು
ಕ್ರಾ ಕ್ರಾ ಕಾಂಕರ್ಸಿ ಉಗ್ಗ್ದ ಕಣತಿದ್ದ
ಇವರ ಕಡ್ಸ್ ಅವರ ಒಡ್ಚಿಲ್‌ಗೋದರೆ
ಬೀಲ ಇಲ್ಲೆ
ಅವರ ನಾಯಿ ಈಚೆ ಬಂದರೆ ಒಂದು ಕಾಲೇ ಇಲ್ಲ
ಕೋಳಿಗಂತ್ ಕಾಂಬಕೆ ಇಲ್ಲೆ
ಕೊತ್ತಿಗಂತು ಸೊಂಟ ಇಲ್ಲೆ
ಸತ್ತರೆ ಗತಿ ಅದ್ಕೆ ಬಲ್ಲೆ
ನಂಗೆ ಸೇರಕುಂತ ಅವು
ನಂಗೇಂತ ಇವು
ಅವು ಗೆಲ್ಲು ಕಡ್ದ ಇವು ಕುಜ್ಜೆಕಡ್ದ
ಆದರೂ ಪಾಪ ಮರ ಮತ್ತೆ ಮತ್ತೆ ಚಿಗುರುತಿತ್ತು
ತಬ್ಬೇರಿ ಕೂಸಾಗಿ
ಅವರ ದೂರು ಇವು ಇವರ್ದ ಅವು
ಹೋದವರ ಕೆಬಿ ಬಂಧಾವಂಗೆ ಉರ್ಗಿದ
ಕಾಲ ಉರುಳಿತ್ ಎಡ್ರೂಕಡೆಲೂ
ಮಕ್ಕಾ ಮೊರಿಗ ಸಂಸಾರ ಬೆಳ್ತು
ಕಾಗಡೆ ದೊಡಪ್ಪ ಮೇಗಡೆ ಲೋಕ ಸೇರ್ದೊ
ದ್ವೇಷ ಅರ್‍ಗಿ ಮನ್ಸ್ ಕರ್‍ಗಿ ಮೇಗಡೆವು ಕಾಗಡೆ ಬಂದೊ
ಹುಟ್ಟಿ ದೂರಾದವು ಸತ್ತು ಹಕ್ಕಲೆ ಬಂದ
ಹರ್ಕೆ ಹಾಡು ತೀರ್ಸಿದ ಮಂಜಗೆ ತಂದ
ದೆವ್ವಕ್ಕೆ ಕೊಟ್ಟ
ಇತ್ತ ಮರದ ಗೆಲ್ಲು ಚಿಗುರು ಬೆಳ್ದ ವಿಶಾಲವಾಗಿ
ಹಲ್ಸಿನಣ್ಣುಲಿ ಶೋಭಿಸುತ್ತಿತ್ತ್
ನೆರಳಾಗಿತ್ತ್ ಅಡಿಲಿ ಮಲ್ಗಿದ ದನಂಗಳಿಗೆ.

ಇನ್ನೂ ಮದುವೆ ಆತ್ಲೆ


ವೋರೆ ತುಂಬ ಗಡ್ಡ
ಎದೆ ತುಂಬ ಸುರುಳಿ ಸುರುಟಿದ
ಕಪ್ಪು ಕರಿ ರೋಮ
ಬಾಯಿ ತುಂಬ ಎಲೆ ಅಡಿಕೆ ತಿಂಬವ
ಸಣ್ಣ ಬೈರಾಸು ಸುತ್ತುವ ಇಂವ ಸರಳ
ಉಡುಗೆಯಂವ
ಸದಾ ಹಗಲಿರುಳು ದುಡಿವ ಇವಂಗೆ
ತೋಟ ಗದ್ದೆನೇ ದೋಸ್ತಿಗ
ಅಂದು ಅವ ಮೂರು ಕ್ಲಾಸು ಕಲ್ತರೂ
ಸಾಗರದಾಚೆನ ಅನುಭವ
ವರ್ಷ ಮೂವತ್ತು ದಾಟಿರೂ
ಇನ್ನೂ ಮೊದುವೆ ಆತ್ಲೆ ಅಂವ
ಸಣ್ಣ ಪ್ರಾಯಲಿಯೇ ಅಯ್ಯಪ್ಪನೆ
ಸತ್ತೋದ ತಂಗೆ, ತಮ್ಮಗಾಗಿ
ಗಂಟೆ ಐದಕೆ ಎದ್ದು ಎತ್ತು ಕಟ್ಟಿ
ಸಾಲೊಂದು ಮಾಡುವವ
ಬಂದು ಎದ್ರಿಸಿ ವೋರೆ ತೊಳ್ಸಿ
ಹಿಟ್ಟು ಬಾಯಿಗೆ ತಿನ್ಸಿದವ
ದೊಡ್ಡ ಹಳ್ಳದ ನೀರು ಎದೆ ಮಟ್ಟ ಇದ್ದರೂ
ಇಬ್ಬರ ಹೆಗಲುಲಿ ಕುದ್ರಿಸಿ
ಜಾತ್ರಗೆ ಕರ್ಕಂಡೊದವ
ಚಾಳೆ ಒಲಿಲಿ ಪೇಪೆ, ಗಿಳಿ, ಗಿರ್ಗೀಟು
ಮಾಡಿ ಕೊಟ್ಟ ಅಪ್ಪನೇ ಆದವನೇ
ಪರ್ಸಂಗ ಹೇಳಿ ನಿಲ್ಸಿಸುವವ
ಬಟ್ಟೆ ಒಗ್ದುಕೊಟ್ಟು, ಸಾಲೆಗೆ ಕಳ್ಸುವ ಪುಣ್ಯಾತ್ಮ ಅವ
ಅವ್ಕಾಗಿ ಎದೆ ಹೊಡಿ ಮಾಡಿಕಂಡ ಮಹಾತ್ಮ
ದಿನಂಗ ಉರುಳುತಾ ಉಟ್ಟು
ಗಡ್ಡ ಹಣ್ಣಾಗುತ್ತಾ ಉಟ್ಟು ಅಂತೂ ಅಣ್ಣ ಇನ್ನೂ ಮೊದುವೆಲೇ ಆತ್ಲೆ.



ಆಟಿ ಅಮಾಸೆಲಿ ಬಂದು

ಆಟಿ ಅಮಾಸೆಗೆ ಬೇಟೆ ಮಾಡೋಕುತೇಳಿ
ನಾಲ್ಕಾರು ಜನ ಸೇರಿ ಮಾತಾಗಿತ್ತು
ಬೈಲು ತಲೆವ್ಕಾ ಸುದ್ದಿ ಮುಟ್ಟಿತ್ತು

ಮಳೆನೂ ಬುಟ್ಟಿತ್ತು, ಹೂ ಬಿಸ್ಲ್ ಬಂದಿತ್
ತಿರ್ಗ್ಯಾಡಿಕೋದ ಬೊಗ್ಗಿ ಅಂದು ಮನೆಲಿತ್ತ್
ಅಟ್ಟದಾ ಮೂಲೆಲಿ ಗುಟ್ಟಾಗಿ ಅಂಡ್ಗಿಸಿದ
ಕಳ್ಳ ಕೇಪಿನ ಬೆಡಿ ಅಂದು ಕೆಳಗಿಳ್ತ್
ಮೊದ್ಲು ಬುಡುಪಾ ಕೆಲ್ಸ ನಿನ್ನೆಗೇ ಮುಗ್ದಿತ್ತ್
ತೋಟದಾ ಕೆಲ್ಸಕೆ ಅಂದು ರಜೆ ಇತ್ತ್
ಜಾಲ್ಬಣೆನ ಆ ಕಾಡು ಅಷ್ಟು ಭೈಂಕರ ಇತ್ತ್
ಚೆಂಡೆ ಮುಳ್ಳಾಗಿ ಹೋಕೆನೇ ಬೊತ್ತು
ಬೆದ್ರ್ ಹಿಂಡ್ಲ್‌ದ ಕೂಡಿತ್ತ್ ಆ ಕಾಡು
ಕಾಡು ಹಂದಿಗಳ ಮನೆನೇ ಆಗಿತ್ತ್
ಓಟು ಗುಂಡುನಸೂರ ದ್ಯಾಪು ಹೈದ
ಬಟ್ರ ತೋಟದ ಕಡೆ ಬಿಲ್ಲು ನಿತ್ತಿತ್ತ್
ನಾಯಿಗಳ ಕರ್ಕಂಡು ಬೆಡಿ ಹೆಗಲುಲಿಸಿಕಂಡು
ನಾ ಹೋಗಿದ್ದೆ ಗಂಟೆ ಹತ್ತಾಗಿತ್ತ್
ಹೊಡಿ ಪೊಡಿ ಮಕ್ಕೆಲ್ಲಾ ಬಲ್ಗೆಗಳ ಪೊಡಿಮಾಡಿ
ಕಾಡು ಹುಗ್ಗುತ್ತಿದ್ದೊ ಬೊಬ್ಬೆ ಮಾಡಿ
ಕಾಡ್ಕೋಳಿ ಚಕ್ಕಟೆಗ ಬುರ್‍ರಂತ ಹಾರ್‍ತಿದ್ದ
ಕಾಡಿಡೀ ತುಂಬಿದ್ದ ಇವರ ಬೊಬ್ಬೆಂದ
ಆಚೆ ಕಡೆ ಒಳ್ಳೆಂದ ಈಡೆರಡು ಕೇಳಿತ್ತ್
ಹಂದ್ಯೊಂದು ಬಲ್ಯೊಳಗೆ ಅಡ್ಡ ಮೊಗ್ಗಿತ್ತ್
ದ್ಯಾಪುನ ಕಿರಿಮೀಸೆ ಅಂದು ಕುತ್ತಾಗಿತ್ತ್
ದೊಡ್ಡ ಪಾರೆನ ಹಾಂಗಿತ್ತ್ ಆ ಹಂದಿ
ಗೇಣುದ್ದ ಕೋರೆ ಬಾಯಿಂದ ಹೊರ್‍ಬಿದ್ದ
ದೊಡ್ಡ ವರ್ಗಣನೇ ಆಗಿತ್ತು
ಮೂರು ಗಂಟೆನ ಒಳಗೆ ಮಾಸಾಗಿ ಹಂಚ್ಯಾತ್
ಹಿಂಬೊತ್ತ್‌ನಾ ಒಳಗೆ ಎಲ್ಲ ಮನೆ ಸೇರ್‍ತು
ಇಂದು ಬೊಳ್ಪುನ ವರೆಗೆ ಎರ್ಡು ತುಂಡಿತ್ತ್
ಬಾವ ಬಾಕನ ಅಮ್ಮ ಅಳೆಗೆ ತೊಳೆತಿತ್ತ್



ಅಜ್ಜಿ ಸಾಂಕಿದ ಪ್ರೀತಿ

ಯಾಗೋಳು ಮಲ್ಗುವಲ್ಲೆ
ಆ ಹೈದ ಇಂದಿಲ್ಲೆ
ಅವ ಇಲ್ಲದಾ ಮನೆ ಹೀಂಗೆ ತೇಳಿಲ್ಲೆ
ಮೋಸ ವಂಚನೆಯಂತು ಮುಂದೆನೇ ಅವಂಗಿಲ್ಲೆ
ಅಜ್ಜಿ ಸಾಂಕಿದ ಮಂಜ ಬೆಳ್ದಿತ್ತ್ ಅಲ್ಲೇ
ಅವ ಇಲ್ಲದಿದ್ದಲ್ಲಿ ಅಜ್ಜಿನಾ ಬಾಯಿಗೆ
ಬೀಗ ಹಾಕವಂತು ಇಲ್ಲೆನೇ ಇಲ್ಲೆ
ಗೊತ್ತುಟವನಾ ಕತೆ ಊರುಜನಕೆಲ್ಲ
ಅವ್ಕೆಲ್ಲಾ ಆಗಿತ್ತಂವ ಪ್ರೀತಿನಾ ಬೆಲ್ಲ

ಮಲ್ಗಿದಾ ಮೊಂದುರಿ ಹಾಸಿದ್ದು ಹಾಂಗಿರೊಕು
ಬೊಳ್ಪೊಳ್ಪುಗೆ ಅಂವ ಊರು ಬುಟ್ಟಿರೊಕು
ಸೌದೆ ಸೊಪ್ಪುಗೆ ಹೋಕು ಹುಲ್ಲಂತು ಅಂವ ತರೊಕು
ಕೆಂಪಿನಾ ಕರು ಬುಡಿಕೆ ಅಂವ ಬೇಕೇಬೇಕು

ಅಜ್ಯಂದು ಗಡಿಬಿಡಿಲಿ ಗೊಳೋಂತ ಅಳ್ತಿತ್
ಸತ್ತನೆ ನಾ ಬುಡಿಬುಡಿಂತ ಹೊಡ್ದಾಡುತಿತ್
ನೆರೆಕರೆ ಹುಡ್ಗರವು ಕೆರೆಕರೆಲಿ ನಿತ್ಕಂಡ್
ಬೊಗ್ಯಂಡ್ ನೋಡ್ತಿದ್ದ ಕೋಲು ಹಾಕಿ
ತೋಟಂದ ಹಿಡ್ದು ಅವು ಬೀಜಕೊಚ್ಚಿನವರೆಗು
ಹುಡ್ಕ್ಯಾಡಿ ಕರಿತಿದ್ದ ಕೂಗು ಹಾಕಿ

ಕಾಗಡೆ ಬೈಲುನ ಸಾಯಿಬರ ಮಗಳು ಮನೆಲಿ ಅಂದಿಲ್ಲೆ
ಗೂಡೆನು ಬಾರದ ಮನೆಲೆ ಯಾರಿಗೂ ನಿದ್ದಿಲ್ಲೆ
ಹುಲ್ಲು ತಾವಾ ಗೂಡೆ ಹೊತ್ತಾಗಿ ಬಾತಿತ್ತು
ಅದರ ಮೋರೆಲಿ ಏನೋ ಕಳೆ ಇತ್ತು

ಇತ್ತೀಚೆಗಂತು ಬಾರಿ ಖುಷಿಲೇ ಇತ್ತು
ಹಿಂದೆಂದೋ ಅದು ಲವ್‌ಲಿ ಬಿದ್ದಾಗಿತ್
ಎಲ್ಲಿ ಹೋಗಳ ಗೊತ್ಲೆ ಎಲ್ಲಿ ಒಳತೇಳಿ ಗೊತ್ಲೆ
ನರ ಮ್ಯೊಸ ನೊಬ್ಬನಟಿಗೂ ಹೇಳಿ ಅವು ಹೋತ್ಲೆ

ಹಿಂಬೊತ್‌ನಾವರೆಗು ಹೈದನನೇ ಕಾದು
ಬಾಗಿಲುಗೆ ಒರ್‍ಗಿತ್ ಮನ್ಸೆಲ್ಲ ಬೆಂದು
ಅಷ್ಟು ವರ್ಷದವರೆಗೆ ಅಜ್ಜಿ ಸಾಂಕಿತ್
ಇಂದು ಅವ ಅಜ್ಜಿಗೆ ಹಂಜ ಬೆಲೆ ಕೊಡಕಿತ್
ನಡು ಇರ್ಲುನಾ ಹೊತ್ತು ರಿಕ್ಷೊಂದು ಬಾತು
ಅಂಗಳದ ನಡುಲಿನೇ ಅದು ನಿತ್ತಾಗಿತ್ತು
ಅಜ್ಜಿನಾ ಸೊಸೆಯಾಗಿ ಹೈದನಾ ಹೆಣ್ಣಾಗಿ
ಸಾಯಿಬರ ಕಿರಿಮಗಳು ಪಾತು ಅವನೊಟಗಿತ್ತು.

ಜಾತ್ರೆ

ವರ್ಷಕ್ಕೊಂದು ನಡಿಯುವ ಜಾತ್ರೆ
ಸುಳ್ಯದ್ ನಾವ್ಗೆ ಅಂದು
ಅಜ್ಜನ ಹೆಗಲುಲಿ ಕುದ್ದುದ್ ಸವಾರಿ
ತಪ್ಪದೇ ನಂಗಂದ್
ವಾರಕೆ ಮುಂದೆನೆ ಜಾತ್ರೆನ ಸುದ್ದಿ ಎಲ್ಲರ ಬಾಯ್ಲಂದ್
ಕಾಗಡೆ ಮೇಗಡೆ ಬ್ಯೊಲುನವೆಲ್ಲ ತೆಗ್ಯದು ಹೋತಿದ್ದ
ಬಾಗ್‌ಲುಗೆಲ್ಲ ಬೀಗನ ಹಾಕಿದು ನಾಯಿಗ ಹೊರಗಿದ್ದ
        ಹೊಳೆಮಳೆಂತೇಳಿ ದುಡಿವ ದಿನಚರಿಗೆ ಯಾಗೊಳು ರಜೆ ಅಂದು
        ಮೇಪಿಗೆ ಹೋಕಾದ ದನಂಗ ಎಲ್ಲ ಹಟ್ಟಿಲಿನೇ ಅಂದ್
        ಬೊಳ್ಪೊಳ್ಪುಗೆದ್ದು ಹೆಣ್ಮಕ್ಕಳದ್ದು ಅಡ್ಗೆನು ರೆಡಿ ಅಂದ್
        ಸೊಪ್ಪುನು ಹುಲ್ಲುನು ತಂದಳ ನಿನ್ನೇ ಕಟ್ಟನು ಎರ್ಡ್ಂದ್
ಅಂದುನದಿನ ಅದು ಮೀಸಲು ಎಲ್ಲವ್ಕೆ ಜಾತ್ರೆಗೆ ತೇಳ್ಯಂದ್
ಪೆಟ್ಟಿಗೆಲಿದ್ದ ಹೊಸಹೊಸ ಅಂಗಿಗ ಎಲ್ಲರ ಮೈಲಂದ್
ಡಬ್ಬಿಗಟ್ಟಲೆ ಪೌಡರ್ ಮೆತ್ತಿದ ಮೋರೆಗ ಬಿಳಿ ಅಂದ್
ಹಬ್ಬಂತೀಗೆ, ಸೇವಂತೀಗೆ ಎಲ್ಲರ ಮುಡಿಲಂದ್
        ಜಾತ್ರೆಗೆ ಹೊರ್ಡುವ ಗೌಜಿಲಿ ಮಕ್ಕಳ ಮರ್ಡಟನೂ ಬೇರೆ
        ಕಂಡದರೆಲ್ಲ ಬೇಕುಬೇಕೂಂತ ಹೊಡ್ಡಾಟನೂ ಬೇರೆ
        ಅಜ್ಜಿಕ್ಕ ಅಜ್ಜಂಗ ಹೆಣ್ಮಕ್ಕ ಮಕ್ಕ ಜಾತ್ರೆಗೆ ಹೋದವೆಯಾ
        ಹಗಲದು ಏಕೆ ರಾತ್ರೆನ ತೇರು ನೋಡಿದು ಬಾವವುಯಾ
ಕೆಲವರ ಹೆಗಲುಲಿ ಗ್ಯಾಸ್‌ಲೈಟ್‌ನಾಂಗೆ ಮಕ್ಕದು ಕುದ್ದಿದ್ದ
ಜಾತ್ರೆನ ಖರ್ಚಿಗೆ ಅಡ್ಕೆ, ಬೀಜದ ಕಟ್ಟುಗಳೂ ಇದ್ದ
ಕಾಡುನ ದಾರಿಲಿ ಹೋತಿದ್ದ ಎಲ್ಲವು ಜನಂಗದು ಗುಂಪಾಗಿ
ಇಂದುನ ಹಾಂಗೆ ರಣಬಿಸ್ಲೆಲ್ಲಿಟು ನೆರಳುಲಿ ತಂಪಾಗಿ
        ಜಾತ್ರೆನ ಗೌಜಿನ ಹೇಳುದು ಹೆಂಗೆನಾ ಅಂದುನ ದಿನದಂದ್

ಜನ ಮೋರ್ಲೋ ಜಾತ್ರೆನ ಮೋರ್ಲೋ ಗೊತ್ತಿತ್ಲೆ ನಂಗಂದ್
ಸಂತೆನ ಅಡ್ಕಲಿ ಗಿಜಿಗಿಜಿ ತೇಳಿ ಜನಗಳ ಬೊಬ್ಬೆನೆಯಾ
ದಬ್ಬಣ ಚುರೆಕೂ ಸೆರೆನೂ ಸಿಕ್ಕಿಕಿಲೆ ಜನಗಳ ನಡುಲ್ಯಂದ್
ದಿಬ್ಬಣನಾಂಗೆ ಬಂದವೆ ಜನಂಗ ಜಾತ್ರೆನ ದಿನದಂದ್

ಸುತ್ತಲು ತಿರ್ಗಿದೆ ಜನಂಗದು ಕುದ್ದವೆ
ತೊಟ್ಟಿಲುನೂ ಬೇರೆ
ಸದ್ದದು ಮಾಡಿದೆ ಕೆಬಿ ಹರಿವಂಗು ರಾಮಾ ಕಿರೀ ಕಿರೀ
ಮೇಲೆಲಿ ಕುದ್ದವ ಹ್ಯೊದಿತ್ ಉಚ್ಚೆ ತಲೆಗ್ಯದು ಪಿರೀ ಪಿರೀ

ಡೊಂಬರಾಟಲಿ ಹ್ಯೆದೊಬ್ಬ ಸಣ್ಣವ ಸರಿಗೆಲಿ ನಡೆತಿತ್ತ್
ಪುಂಗಿನ ರಾಗಕೆ ತಲೆದೂಗುವ ಕರಿನಾಗರನೂ ಇತ್ತ್
ಹಾವುನ ಬುಡಕನ ಮುಂಗುಸಿ ಮೊರಿಯದು ಗೂಡುನ ಒಳಗಿತ್ತು

ಕಣ್ಣುಬುಟ್ಟು ಮಟಮಟ ನೋಡುವ ಜನಸಾಗರನೂ ಇತ್ತ್
ಕಂಬಕೆ ಕಟ್ಟಿದ ಕುರೆವಮೊರಿಯೊಂದು ಕಸರತ್ತು ಮಾಡ್ತಿತ್ತ್
ಹೊಡಿಪೊಡಿ ಮಕ್ಕಳ ಎಲ್ಲರ ಗಮನ ಅದರ ಮೇಲಿತ್ತು

ಕೈಕಾಲು ಇಲ್ಲದ ಜನಂಗವು ಮರ್ಸ್ಸದು ಬಿಕ್ಸೆನ ಕೇಳ್ತಿದ್ದ
ಸೈಕಲ್ ಬುಡುವ ಸರ್ಕಸ್ ಹ್ಯೆದ ಕೈಕಾಲೆ ಬುಟ್ಟಿತ್ತ್
ತಪ್ಪ್ಯೋಗಿ ಬಿದ್ದರೆ ಮರಣದು ಖಂಡಿತ ಮರಣದ ಗುಂಡ್ಯೊಂದು
ಸುತ್ತಲು ನೋಡಿರೆ ಸಂತೆಗಳೇ ಅಂದುನ ದಿನದಂದು
ಮಿಠಾಯಿ ಅಂಗಡಿ, ಬಚ್ಚಂಗಾಯಿ ಕಮ್ಯದು ಏನಿತ್ತು

ಚಿಗುರು ಮೀಸೆನ ಹುಡ್ಗರಿಗೆಲ್ಲ ಗೌಜಿನೆ ಇತ್ತಂದ್
ಹೊಸಹೊಸ ಗೂಡೆಗಳ ಚಿಗುರಿವ ಮೋರೆನ ನೋಡುವ ಮೋರ್ಲಂದ್
ದೇವರ ಹೊತ್ತು ಜನಂಗದು ಸುತ್ತ ಬಲಿಯದು ಬಾತಿದ್ದ
ಜನಂಗೆಲ್ಲ ಒಟ್ಟಾಗಿ ಒಂದೇ ಸ್ವರಲಿ ಗೋವಿಂದತೇಳ್ತಿದ್ದ

ಹಿರಿಯವ್ಕೆಲ್ಲ ದೇವರ ಬಲಿನ ನೋಡುವ ಹುಚ್ಚದುಯಾ
ಕಿರಿಯವ್ಕೆಲ್ಲ ಸಂತೆನ ಸುತ್ತದೆ ನೆಮ್ಮದಿ ಎಲ್ಲಿಟುಯಾ
ಅಂತು ಇಂತು ಬಾರಿ ಗೌಜಿಲಿ ಜಾತ್ರೆದು ನಡಿತಿತ್ತ್
ನಾನು ಅಜ್ಜನು ಹಿಂಬೊತ್ತಾಕನ ಮನೆನ ಸೇರ್ತಿದ್ದ

ಮಾವನ ಮನೇರಿ

ಎಂದೋ ಹೋದ ಮಾವನ ಮನೆಗೆ ಅಂದದ್ ಹೋಗಿದ್ದ
ನಾನು ಅಪ್ಪನು, ಅಮ್ಮನು, ತಮ್ಮನು ಎಲ್ಲವು ಹೊರ್ಟಿದ್ದ
ಇಂದುನ ಹಾಂಗೆ ಬಸ್ಸುಗ ಕಾರುಗ ಅಂದದು ಎಲ್ಲಿದ್ದ
ಸುಡು ಸುಡು ಬಿಸ್ಲ್ ಲಿ ಬೆಗರದು ಅರ್ಸಿ ನಡ್ಡೇ ಹೋತಿದ್ದ

ಅಪ್ಪನ ಹೆಗಲುಲಿ ತಮ್ಮವ ಕುದ್ದು ಸವಾರಿ ಮಾಡ್ತಿತ್
ಅಮ್ಮನ ಕೈಲಿ ನನ್ನ ತಲೆಲಿ ಮಾರಪು ಗಂಟಿತ್ತು
ನಡ್ಕಂಡು ಹೋಕನ ನಾವ್ಗೆದು ಅಂದು ಬಾರಿ ಬೊಚ್ಚುತ್ತಿತ್ತು
ದಾರಿ ಕರೆನ ಮರದಡಿ ನಾವು ಬೊಚ್ಚೆಲು ತೆಗೆಕಿತ್ತು

ಅಡ್ಕದ ನಡುಲಿ ದನಗಳ ಒಟ್ಟಿಗೆ ಜಿಂಕೆನು ಮೇಯ್ತಿತ್ತು
ಕಾಟಿ, ಸಾರೆಜಗ ಹಿಂಡುಗಳೆಲ್ಲ ನೋಡಿಕೆ ಪೊರ್ಲಿತ್ತು
ನಡ್ಕಂಡೋಕೆ ಕಾಡುನ ನಡುಲಿ ದಾರ್‍ಯದು ಒಂಧಿತ್ತು
ಕಾಡುಕೋಳಿ ಚಕ್ಕಟೆ ಎಲ್ಲ ದರ್ಗ್‌ನ ಕೇರ್‍ತಿತ್ತು
ಹೆಜ್ಜೆ ಹೆಜ್ಜೆಗೆ ದಾರಿ ಕರೆಲಿ ನೆಲ್ಲಿನ ಮರ ಇತ್
ಜೋಂಪುಳು, ಮುಳ್ಕರ ಚೂರಿಕಾಯಿ ಕಮ್ಮಿದು ಏನಿತ್ತು

ನೆರೆಮನೆ ಎದುರಲಿ ಕರೆಕೆರೆ ದಾರಿಲಿ ನಾವದು ಹೋಕಿತ್ತು
ಬೈಲುಗ ತೋಟದ ಪಾಲನ ದಾಟಿಕೆ ಜಾಗ್ರತೆ ಬೇಕಿತ್
ಮಾರುಮಾರುಗೆ ಬೈಲುನ ಕರೆಲಿ ಹುಲ್ಲುನ ಮನೆಗಿದ್ದ
ಮನೆಮನೆಗಳಲಿ ಹುಲಿ ತಿಂಬ ನಾಯಿಗಳು ಇದ್ದ

ಕೆಲವದು ಪಾಪ ಕುಂಯಿ ಕುಂಯಿ ತೇಳಿ ಬೀಲನ ಆಡ್ಸಿದ್ದ
ಹೆಚ್ಚಿನದೆಲ್ಲ ಬೊಗಳಿದು ಬೆರ್ಸಿದು ಕಚ್ಚಿಕೆ ಬಾತಿದ್ದ
ಕೋಳ್ಯದು ಕೂಗುವ ಹೊತ್ತ್‌ಗೆ ನಾವು ಮನೆನದು ಬುಡುತ್ತಿದ್ದ
ದನಂಗಳ ಕೂಡುವ ಹೊತ್ತಿಗೆ ಮಾವನ ಮನೆನದು ಸೇರ್‍ತಿದ್ದ

ಬೇಸಿಗೆ ರಜೆನ ಬಾರಿ ಖುಷಿಲಿ ಅಲ್ಲೇ ಕಳಿತಿದ್ದೆ
ತಿಂದುದು ಉಂಡುದು ಸೊಕ್ಕಿದು ಮತ್ತೆ ಮನೆಗದ್ ಬಾತಿದ್ದೆ
ಮಾವು ಹಲಸುನು ಇತ್ತು ಚಿಕ್ಕು ಪೇರಳೆ ಇತ್ತು ಮಾವಂಗೆ
ಪ್ರೀತಿನಾ ಮಗಳು ಒಂದಿತ್ತು ಅತ್ತೆನಾ ಪ್ರೀತಿಲ್ಯದು ಕಮ್ಮಿ ಏನಿತ್

ಮೂಡೆ ಪತ್ರೊಡೆ ಎಲ್ಲಯಾಗೊಳು ಮಾಡ್ತಿದ್ದ
ಕುಂಡೆ ಬಾಯ್ಲಿನು ತಿನು ಹೈದತೇಳ್ತಿದ್ದ
ಏನಾರು ಮಾಸದ ಗ್ಯೆಪು ಇರದಿಲ್ಲೆ
ಸಿಕಾರಿಲಿ ಬೆರಿಕೈಲಿ ಬಂದ ದಿಸಂಗಿಲ್ಲೆ
ಕೆಂಪ ಹಂದಿನ ಮಾಸ ಬೆಸಗೆಡಿಲಿ ಒಣ್ಗಿತ್ತು
ತಿಂಬಕ್ಕೆ ಹುಳ್ಳಂಗೆ ತುಂಡು ಇರ್ತಿತ್ತು

ಸಣ್ಣ ಬ್ಯೆರಾಸು ಸುತ್ತಿ ಚುಡೊಂಕುಲ್ಯದು ಹರಿಕತ್ತಿ
ಹೋಗಿ ಬಾತಿದ್ದ ಮಾವ ತೋಟಗದ್ದೆನ ಸುತ್ತಿ
ಕಾಳಬೊಳ್ಳನ ಕಟ್ಟಿ ಹೂಡಿ ಹಲಗೆನ ಮೆಟ್ಟಿ
ದುಡಿತಿದ್ದ ಗದ್ದೆಲ್ಯವು ತುಂಡು ಕೋಮಣ ಕಟ್ಟಿ

ಗ್ಯಾರ್ದಣ್ಣ್‌ನ ಹೆರ್ಕಿ ಮಣ್ಣು ಮಡ್ಕೆಲಿ ತುರ್ಕಿ
ಹುಳಿ ಬಾಕೆ ಇಸುತುದ್ದ ಬೆದ್ರ್ ಹಿಂಡ್ಲಡಿಲಿ
ಮಯಮಯದ ಕತ್ತಲೆಲಿ ಯಾರಿರದ ಸಮಯದಲಿ
ಸಾರಾಯಿ ಕಾಸ್ತಿದ್ದೊ ಆ ಚೋಡಿ ಕರೆಲಿ

ಹಿಂಬೊತ್ತು ಹೊತ್ತ್‌ಲಿ ಸಾರಾಯಿ ಮತ್ತ್‌ಲಿ
ಬಿರಿವರೆಗೆ ಪದ್ಯ ಪಾಡ್ತನಗಳೇ ಬಾಯಿಲಿ
ಕೋಣ ಕಂಬಳ ಇತ್ತು ಕೋಳಿಕಟ್ಟನು ಇತ್ತು
ದೆವ್ವ ದೇವ್ರುಗಳಿಗೆ ಕೋಲನು ಇರುತಿತ್ತು

ದುಡ್ಡ ಮನ್ಸ್‌ಗಳಲಿ ಮುಗ್ಧ ಪ್ರೀತಿನು ಇತ್ತು
ಸಂಬಂಧ ನಡುಲ್ಯೊಂದು ಹೊಸಬಂದ ಇತ್ತ್
ನೆನ್ಸಿರೂ ಸಿಗದಂತ ಹೊಸ ಚಂದ ಇತ್ತ್

ವಿಜ್ಞಾನ ಬೆಳ್ದೋತ್ ಸುಜ್ಞಾನ ತಿಳ್ದಾತು
ಸೌಕರ್ಯ ಸೌಲತ್ತು ಮನೆಮನೆಗೆ ಬಾತು
ಕಾಡು ಬೊಳ್ಳಡೆ ಆತು ರೋಡು ಎಲ್ಲಡೆ ಆತು
ಕಾರುಂದ ಊರೆಲ್ಲ ಕಾಲು ಬುಡಲ್ಯಾತು


ಬದುಕು ಓಡಾಟಾತು ಜನಂಗ ಪೇಟೆಲೇ ಅತು
ದಿನದಿನಕೆ ಸಂಬಂಧ ದೂರದೂರಾದೆ
ಮಾವನ ಮನೆಗೋಕೆ ಎಲ್ಲಿಟ್ಟು ಪುರ್ಸೊತ್ತು
ಮಾಡಿ ಮುಗಿಯದ ಕೆಲ್ಸಲೇ ಹೋದೆ ಈ ಹೊತ್ತು

ಕನ್ಸ್-ಮನ್ಸ್

ಎಲ್ಲಾ ಸಾಮಾನ್ಯ ನರ ಮ್ಯೊಸನ
ಆಸೆಗ ಸಾಮಾನ್ಯ
ಆಸೆಗ ಎಲ್ಲ ಆಗದೆ ಮಾನ್ಯ
ಮುದುಡುಬಡ ತಮ್ಮ
ಒಂದೇ ದಾರಿಲಿ ಮುಂದೆಸೆ ಹೋದವು
ಮಾಡ್ಪುಲೆಯ ಮಾನ್ಯ ಆಶಾಢಭೂತಿಗಳೇ ಧನ್ಯ
ಕಾಲದ ಗರ್ಭಲಿ ಗರಿಕೆಗ ಹಸಿರುಲಿ ಚಿಗುರುದು
ಸಾಮಾನ್ಯ
ಕೊದ್ಯೆಕೆ ಮುಂದೆನೆ ಗಂಜ್ಯದು ಹಳ್ಸಿ ತಣಿದುಸು ಸಾಮಾನ್ಯ
ಚಿಗುರುವ ಎದೆಗಳ ಉಬ್ಬಿಸಿ ನಡಿದದು ಸಾಮಾನ್ಯ
ಉಗುರುಗೆ ಸಿಕ್ಕದ ಮೀಸೆನ ಹೈದ ಚಿರುಂಟ್‌ದ್ ಸಾಮಾನ್ಯ
ಪೊಲ್ಟುನ ಮನ್ಸ್‌ನ ಉರುಳುವ ಕನ್ಸ್‌ಗೆ
ನೆಮ್ಮದಿ ಕನ್ಸ್‌ಲೆಯಾ
ಸುತ್ತಲು ನೋಡಿರೆ ಮನ್ಸ್‌ಗೆ ಇರಿವಾ
ಮುಳ್ಳಿನ ಬೇಲಿಗಯಾ
ಹಿರಿಯವು ಹೇಳಿವೆ ಮದ್ಯಾಹ್ನದೂಟನ
ಮದ್ಯಾಹ್ನ ಮಾಡೊಕುತ
ಕಿರಿಯರ ಹೊಟ್ಟೆನ ಬೊಳ್ಪುನ ಹಸಿವು
ಅವ್ಕೆದು ಗೊತ್ತುಟಯಾ
ಜೀವನವೆಂಬ ನಾಟಕ ನೋಡಿಕೆ
ಹೆಣ್ಣದು ಹೊರ್ದುಕನ
ರೋಮದ ಎದೆಗೆ ಆನಿಸಿ
ಒರ್ಗುವ ಕನ್ನದು ಸಾಮಾನ್ಯ
ಉಬ್ಬುವ ಎದೆಗಳ ಪೊಲ್ಟುನ ಸವಿಯುವ
ಚಪಲವು ಹೈದಂಗೆಯ
ಕತ್ರಿಮುಲ್ಲೆ ಬಾತ್ಲರು ಕೋಳಿ ಕೂಂಗಿಕೆ ಮರ್ತದೆನಾ
ನಾಯಿಗೂ ಬೇಕಾದೆ ಸೋಣಲಿ ಏಕೆ ಓಣಲಿನೂ ಮೇಳ

ಬಾವನ ಮೊದುವೆಲಿ

ಬಾವನ ಮೊದುವೆಲಿ ಕಮ್ಮ್ರನ ಭಾಗಲಿ
ಉಂಬಕೆ ಕುದ್ದಿದ್ದೆ ಬಾರಿ ಬಂಗಲಿ ಕುದ್ದಿದ್ದೆ
ಜತ್ತಪ್ಪ ಹೊಲ್ಪ ಟೈಟ್‌ನ ಪ್ಯಾಂಟ್ ಹರ್ದೇ ಹೋತಿತ್ತು
ಸೇರ್ದವರೆಡೆಲಿ ಮೊರ್ಯಾದಿ ಹೊದೆತ ಹೆದ್ರಿಕೆ ಆತಿತ್ತು
        ಬೆನ್ನಿಗೆ ಹಿಂದೆ ಹೆಮ್ಮ್ರಕ್ಕಳದು ಸಾಲುನು ಒಂದಿತ್ತು
        ತಣ್ಣಂಗೆ ಏನೋ ಬೆನ್ನುನ ಯಾರೋ ಮುಟ್ಟಿದ ಹಾಂಗ್ಯಾತು
        ಚಪ್ಪರ ಸೆರೆಲಿ ಸೂರ್ಯನ ಬೊಳ್ಪು ಮೋರೆಗೆ ಹೊಡಿತಿತ್ತು
        ಸೆಖೆಗೆದು ಬೆವರಿ ಬನಿಯನ್ ಎಲ್ಲಾ ಪದನಿದು ಹೋಗಿತ್ತು
        ಬಿಸ್ಲ್‌ನ ಖಾರ ಹೇಂಗೇಲ್ಲಾರು ತಡ್ಕಂಬಕ್ಕಾತಿತ್ತ್
        ನೀರದು ಕುಡಿಯದೆ ಗೈಪುನ ಖಾರ ತಡ್ಕೆಕೆನೆ ಬೊತ್ತಿತ್ತ್
ತಿರ್ಗಿದು ನೋಡಿರೆ ಪೊರ್ಲುನ ಗೂಡೆ ಒರ್ಗಿದು ಕುದ್ದಿತ್ತ್
ಮುಡ್ದಾ ಮಲ್ಲಿಗೆ ಅರ್ಲಿದು ಪೊರ್ಲುಲಿ ಗಮಗಮ ತೇಳ್ತಿತ್ತ್
ಎಂತರ ಹೇಳ್ಪುನಾ ಅಂದುನ ಆ ಕ್ಷಣ ವರ್ಣಿಸಿಕೆ ಬೊತ್ತ್
ತಪ್ಪಿದು ಹೋಗಿ ಕರೆಂಟ್ ವಯರ್‌ನ ಮುಟ್ಟಿದ ಹಾಂಗಿತ್ತ್
        ಮೈಮನ ಎಲ್ಲಾ ಆಕಾಸಲೆಲ್ಲಾ ತೇಲಿದ ಹಾಂಗಾತ್
        ಏನೋ ಸಣ್ಣಕೆ ಮನ್ಸ್‌ನ ಒಳಗೆದು ಧೈರ್ಯನು ಮೂಡಿತ್ತು
        ಬೇಕು ಬೇಕುಂತ ಬೆನ್ನಿಗೆ ಬೆನ್ನುನ ಆನಿಸಿ ಒರ್ಗಿದ್ದೆ
        ಧೈರ್ಯದು ನೋಡುಯ ಗೂಡೆನು ಕೂಡ ಬೆನ್ನಿಗೆ ಒರ್ಗಿದ್ದೇ
ಪದಂಜಿ ಪಾಯಿಸ ಉಂಬದು ನಾ ಎಂದೋ ಬುಟ್ಟಿದ್ದೆ
ಬೆನ್ನಿಗೆ ಒರ್ಗಿ ಇನ್ನೊಂದು ಸೌಂಟು ಇಕ್ಯಣ್ಣತ್ತೇಳಿದ್ದೆ
ಇದ್ದಿದ್ದಾಂಗೆ ಸೊಂಟಕೆ ಪಿಜಿನು ಕಚ್ಚಿದ ಹಾಂಗಾತ್
ಗೂಡ್ಯದು ನೋಡುಯ ಉಗುರ್‌ಲಿ ಮೆಲ್ಲಂಗೆ ಜುಂಟಿಕೆ ಸುರುಮಾಡ್ತು
ತಿರ್ಗಿದು ನೋಡಿರೆ ಬಾಯಿನ ಮುಚ್ಚಿ ಮುಸುಮುಸು ನೆಗಾಡ್ತಿತ್ತ್
ಮನೆಗದು ಬನ್ನಿ ಕಲ್ಸಿನೆ ಬುದ್ಧಿಂತಾ ನಾದಿನಿ ಹೇಳಿತ್ತ್



ಹುಣ್ಣಿಮೆಲೊಮ್ಮೆ

ಅಂದು ಹುಣ್ಣಮೆ ಆಗಿತ್ತು
ಸೂರಡಿನ ಚಾಳೆ ಮಡಲುಗಳೆಡೆಲಿ
ಚಂದ್ರ ಬಟ್ಲುನಾಂಗೆ ಹೊಳೆತಿತ್ತ್
ಬೆರಳುನ ಅಪ್ಪುಗೆಲಿ ಲೇಖನಿ ಪ್ರೇರೇಪಿಸುತಿತ್ತು ಕದ್ದುಮುಚ್ಚಿ
ಮನದ ಕನವರಿಕೆ ಅವಳ ವಾಕರಿಕೆ
ಆಕೆ ಬೊತ್ತು ತೇಲುವ ಹೆಬ್ಬಯಕೆಗ
ಅದೇ ಮನದ ಮಿಡಿತವಾಗಿತ್ತು
ಕಣ್ಗೆ ಕಾಂಬದೆಲ್ಲ ಸಂತಸಮಯವಾಗಿತ್ತು
ಜಗತ್ತೇ ಸಂಗೀತ ಸ್ವರ್ಗಮಯ

ಒಡ ಮೂಡುವ ಕಲ್ಪನೆಗಳೇ ಕವಿತೆಗ
ದಿನ ಕಳೆದ ಸುಮವೊಂದು ಗಿಡದಗಲಿಕೆನ
ವಿರಹಲಿ ಧರೆನ ತೆಕ್ಕೆಗೆ ಮರಳುವಾಂಗೆ
ಘಾಸಿಗೊಳಿಸಿತ್ತು ಕಟುವಾಸ್ತವತೆನ
ಕರಿನೆರಳಿನ ಇರಿತ
ಮಾಗಿನ ಚಳಿಲಿ ಕಂಬಳಿ ಎಡೆಲಿ
ಬೆಗರಿದ್ದೆ, ಮರ್ತಿದ್ದೆ ನಿದ್ರಾದೇವಿನ
ಬೆಚ್ಚನೆ ಅಪ್ಪುಗೆ
ಎಲ್ಲಾ ಸ್ವಗತವಾಗಿತ್ತು

ಗೂಡೆಗ

ಎಲ್ಲೆಲ್ಲಿ ನೋಡಿರೆನು ಗೂಡೆಗಳೇಯಾ
ಗೂಡೆಗಳೇಯ ತಮ್ಮ ಗೂಡೆಗಳೇಯಾ
ಕೆಂಪು ಕಪ್ಪು ಚೂಡಿ ಮಿಡಿ ಹಾಕ್ವೆ ಅವುಯಾ
ತಪ್ಪಿ ಹೋಗಿ ಅವರ ಬಲೆಗೆ ಬೀಳುಬಡಯ
ಬಿದ್ದರಂತು ನಿನ್ನ ತಲೆ ಹಾಳು ಆದ್‌ಯಾ

ಚಿಗುರು ಮೀಸೆಗ ಇವರ ನೋಡಿ ಉಗುರು ಕಚ್ಚುವೆಯಾ
ಇವ್ಕೆ ಬೇರೆ ಸರ್ಕಾರಂದ ಮೀಸಲಾತಿಯಾ
ಬಸ್ಸ್‌ಲ್ಯಂತು ಆರು ಸೀಟು ಇವ್ಕೆ ಕಾಲಿಯಾ
ಹಿಂಗೆ ಆದರೆ ಹೈದಂಗಳ ಗತಿ ಏನುಯಾ
ಬೊಳ್ಪುಗೆದ್ದು ಬೂತಿ ಎತ್ತಿ ಕಿಚ್ಚಿ ಮೊಡಕಾದುಯಾ

ಹೆಗಲುಲ್ಯೊಂದು ನೇಲಿಕಂಡು ಬ್ಯಾಗ್ ವ್ಯಾನಿಟಿ
ಇದಂರ್ದ ಹೆಚ್ಚಾದೆ ಏನೋ ಇವರ ಡಿಗ್ನಿಟಿ
ಸೀರೆ ಗೀರೆ ಲಂಗ ರೌಕೆ ಹೋತು ಕರೆಕರೆ
ನೈಟಿ ಗೈಟಿ ಜೀನ್ಸ್ ಚಡ್ಡಿ ಬಾತು ನೆರೆ ಕರೆ

ಅದರದೊಂದು ಕೂದಲೆಲ್ಲ ಹಿಂದೆ ಬುಟ್ಟ್‌ಯಾ
ಇದರ ಹಣೆಲಿ ಹಾವುನಾಂಗದೆಂತೋ ಬೊಟ್ಟುಯಾ
ಎಲ್ಲದಲ್ಲೂ ಇಲ್ಲದಿಲ್ಲೆ ಬಾಬ್‌ಕಟ್ಟ್‌ಯಾ
ಮಾರು ಉದ್ದ ಜಡೆ ಹಾಕುದು ಮರ್ತೇ ಬುಟ್ಟುಯಾ

ಸೀಗೆ ಹಾಕಿ ಮಿಯಕನಂದು ಏನು ತಂಪುಯಾ
ಅದ್ಕೆ ಬದಲು ಬಂದುಟೀಗ ಎಷ್ಟೋ ಶಾಂಪುಯಾ
ಮದ್ವೆ ಮನೆಗಳಲಿ ಹೋಗಿ ನೋಡ್ರೆ ಏನು ಪೊರ್ಲುಯಾ
ನೆನ್ಸಿರೂ ಸಿಕ್ಕದಂತ ಅಪ್ಸರೆಗಳೆಯಾ

ಹಗಲುಗೆಲ್ಲ ಹಕ್ಕಿನಾಂಗೆ ಹಾರಿ ಹೋದೆಯಾ
ಇರುಳುಗೆಲ್ಲಾ ಇದ್ದಿದ್ದಾಂಗೆ ಜಾರಿ ಹೋದೆಯಾ
ನೆನ್ಸಿ ನೆನ್ಸಿ ಮನ್ಸ್ ಎಲ್ಲ ಹಾಳುಆದೆಯಾ
ತಪ್ಪಿ ತಲೆದಿಂಬುನೆಲ್ಲ ತಬ್ಬಿ ಹೋದುಯಾ

ದಿಬ್ಬಣ

ಮಾವನಾ ಮನೆಗೊಮ್ಮೆ ದಿಬ್ಬಣಲಿ ಹೊರ್ಟಿದ್ದೆ
ಕನ್ಸ್‌ಲ್ಯಣ್ಣಾ ಬಾರಿ ನಿದ್ದ್‌ಲ್ಯಕ್ಕಾ
ಬಿಳಿ ಪಂಚೆ ಉಟ್ಟಿದ್ದೆ ಮುಂಡಾಸು ಬಿಗ್ದಿದ್ದೆ
ಅಜ್ಜನಾ ವಾಸ್ಕೋಟು ಧರಿಸಿದ್ದೆ ಅಂದು

ಬೊಕ್ಕತಲೆ ಅಜ್ಜಂಗ ದಿಬ್ಬಣದ ಮುಂದೆಲ್ಲ
ಮಾರುದ್ದ ಕಾಲಿರಿಸಿ ಬೀಸ ನಡೆತಿದ್ದ
ಅಜ್ಜಿಕ್ಕ ಹೆಣ್ಮಕ್ಕ ಗೂಡೆಗ ಎಲ್ಲವೂ ಸೋಬಾನೆ ಗೀಬಾನೆ ಹರಟುತಿದ್ದ

ಕೋಳಿ ಕೂಂಗಿಕೆ ಮುಂದೆ ದಿಬ್ಬಣ ಹೊರ್ಟಿತ್ತು
ಹಿಂಬೊತ್ತುನಾ ಒಳಗೆ ತಿರ್ಗಿ ಬಾಕಿತ್ತ್
ಇತ್ತೀಚಿನಾ ಹಾಂಗೆ ಕಾರ್ಜೀಪು ಎಲ್ಲಿತ್ತು
ನಟ್ಟರಣ ಬಿಸ್ಲ್‌ಲೇ ನಡ್ದು ಹೋಕಿತ್ತು

ಬೈಲು ತೋಟಗಳ ನಡುವೆ ತಡ್ಮೆಗಳ ದಾಟಿ
ಹೋಕನ ಅಡ್ಕಲಿ ಮೇಯ್ತಿತ್ತು ಕಾಟಿ
ಹಸಿರು ಕಾಡುನ ನಡುಲಿ ಉಸ್ರು ಬಿಗಿ ಹಿಡ್ದು
ಕೆಸ್ರು ಆಗದೆ ಗದ್ದೆ ಪುಣಿಲಿ ಹೋಕಿತ್ತು

ಅಂತಿಂತು ಹ್ಯಾಂಗಾರು ಮೊದುವೆ ಮನೆ ಸೇರ್ದೋ
ಏನು ಗೌಜ್ಯಣ್ಣಾ ಏನು ಗೌಜಿ
ಎಲ್ಲಿ ನೋಡಿರೂ ಗಿಜಿ ಗಿಜಿ
ಪರ್ಲಾಂಗ್ ದೂರಕ್ಕೆ ವಾಲಗ ಕೇಳ್ತಿತ್ತು

ಮೊರ್ಲಾಗಿ ಕಾಲು ಕೊಣಿಕೆ ಎಳೆತಿತ್ತು
ಗರ್ನಾಲು ಶಬ್ಧ ಅರ್ಧಲೇ ನಿತ್ತ್‌ತ್
ಹೊಡ್ಡೋಗಿ ಕೈಲಿ ಅಂವ ಬರ್ನಾಲ್ ಕೇಳ್ತಿತ್


ದೂರಲೇ ಬಾವ ದಿಬ್ಬಣನ ಎಲ್ಲ
ಗೂಡೆ ನೋಡ್ತಿತ್ ಮುಸ್ಕ್ ಮುಚ್ಚಿಕಂಡು
ಮಾವನ ಮನೆ ಎದುರ ಚಪ್ಪರ ಹಾಕಿತ್ತು
ಮಾಯ್ನ ಸೊಪ್ಪುಲೇ ಎಲ್ಲ ಕಂಗೊಳಿಸುತಿತ್

ಉಪ್ಪರಿಗೆ ಮನೆ ಹಿಂದೆ ಕೊಪ್ಪರಿಗೆ ಅಂಡೆಲಿ
ಪಾಯಿಸ ಕೊದಿತಿತ್ತು ಪರಿಮಳ ಮೂಕ್‌ಗೆ ಗಮಗಮಿಸುತಿತ್ತು
ಹೊಡಿಪೊಡಿ ಹುಡ್ಗರವು ಹಾಯುವ ದನನಾಂಗೆ
ಗಡಿಬಿಡಿಲ್ಯತ್ತಿತ್ತ ಓಡ್ಯಾಡುತಿದ್ದ
ಚಿಗುರು ಮೀಸೆವು ಎಲ್ಲ ಉಗುರು ಬಾಯ್ಲಿಸಿಕಂಡು
ಮೂಲೆಲಿ ಅಂದಾಜು ಮಾಡ್ತಿದ್ದ ಎಲ್ಲ

ಮೈಲುದ್ದ ಸೀರೆ ಉಟ್ಟು ಕೈ ತುಂಬ ಬಳೆ ತೊಟ್ಟು
ಮಾರುದ್ದ ಜಡೆನಾ ಹಿಂದೆ ಬುಟ್ಟು
ನೋಡಕಿತ್ತು ಗೂಡೆಗಾ ನಡಿವ ಗುಟ್ಟು
ಹೊತ್ತು ಮೀರಿಕೆ ಆತು ಮೂರ್ತದ ಸಮಯಾತ್
ಸಿಂಗರ್ಸಿದಾ ಗೂಡೆ ಮೇಲ್ಕಟ್ಟಡಿಗೆ ಬಾತು

ಮಾವನಾ ಮಗಳವ್ವು ಬಂಗಾರದ ಗೂಡೆ
ಬಾಗಿ ನಿತ್ತಿತ್ತು ನಾಚಿ ನೀರಾಗಿ
ಅಂತಿಂತು ಮೂರ್ಥಾತು ತಾಳಿಕಟ್ಟಿಕೆ ಆತು
ಒಳಗಿದ್ದ ಗೂಡೆನಯ್ಯೆಗೆ ಕೊಲೆನೂ ಹಿಡ್ದಿತ್ತು

ಚಳಿನೂ ಹಿಡೆತಿತ್ತು ಕೋಳಿನೂ ಕೂಂಗ್ತಿತ್
ಎದ್ರಣ್ಣ ತೇಳಿ ನನ್ನಮ್ಮ ಕರಿತಿತ್ತು
ಎದ್ದು ನೋಡ್ಕನ ಎಲ್ಲ ಬೊಳ್ಪಾಗಿತ್ತು



ಕೊಡ್ಗಿನ ಬೆಡ್ಗಿ


ಅಯ್ಯೋರಾಮ ಗೊತ್ತಿಲೆನ ನಿಂಗೆ ಆ ಹುಡ್ಗಿನ
ಅವ್ಳೇ ಕೊಡ್ಗಿನ ಬೆಡ್ಗಿ
ಡೋಂಗಿ ಮಾಡ್ದೆ ನೋಡು ಅಂಡ್ಗ್ಯಂಡ್ಗಿ
ಮದ್ವೆಗಿದ್ವೆಲಿ ತುಂಡೊಂದು ಬುಡದವ್ಳು
ಮಾತ್‌ಲೇ ಗುಂಡು ಹೊಡೆವವ್ಳು
ನೋಡಿ ನೆಗಾಡ್ದಕಿಂತ ನೆನ್ಸಿ ನೆಗಾಡುವವ್ರ್ಳೆ ಹೆಚ್ಚು
ಯಾರ ಅರ್ಧಾಂಗಿಯಾದೆನೋ
ಯಾರಿಗೆ ಗತಿ ಹರ್ದಂಗಿನೋ
ಎಲ್ಲ ಅವಂಗೆನೇ ಗೊತ್ತು

ಹುತ್ತರಿನಂದು ಮತ್ತೆ ಮನೆಸೇರಿ
ಎಲ್ಲವ್ಕೆ ಸಿಹಿ ನೀಡ್ದು
ಸುತ್ತಲಿನ ಗೆಳತಿಯರಿಗೆ ತುತ್ತೂರಿ ಊದಿ
ಕೆಬಿ ನೆಟ್ಟಂಗೆ ಮಾಡ್ದು
ಇತ್ತ ಇವ ಕಾದು ಕಾದು ಅಡಕತ್ತರಿಲಿ
ಸಿಕ್ಕುವಾಂಗೆ ಮಾಡ್ದು

ಘಟ್ಟ ಇಳ್ದವ್ಳು ತಿರ್ಗಿ ಯಾಗ ಬೆಟ್ಟ ಏರ್ದನೋ
ಮತ್ತೆ ಕೆಳಗಿಳ್ಯಕೆ ಆಣೆಬಾಸೆಗ
ಉಟ್ಟೋ ಏನೋ ?

ಚೋಮುಣಿ ಹೈದನ ಕಥೆ

ಚೋಮುಣಿ ಹೈದ ಹೈಸ್ಕೂಲ್ ಬುಟ್ಟು
ಕಾಲೇಜ್ ಗೋತಿತ್
ಆಟಲಿ ಏಕೆ ಪಾಠಲಿ ಕೂಡ ಅವನೂ ಮುಂದಿತ್ತು
ಜೀವಲಿ ನೋಡಿರೆ ಎಲ್ಲಾಂರ್ದಳೂ ಅವನೇ ಬಲ ಇತ್ತು
ಚರಿತ್ರೆ ಪಾಠಕೆ ಭೂಪಟ ತೂಗಿಕೆ ಅವನೇ ಬೇಕಿತ್ತು
ಓದಿದು ಕಲ್ತುದು ದೊಡ್ಡವ ಆಕುತ ಅಪ್ಪನ ಕನ್ಸಿತ್
ಹಗಲಿಡಿಯಾಗೊಳು ತೋಟಲಿ ದುಡ್ಡವ ಮಜನ ಕಳ್ಸಿತ್
ಮಿಸಿಮಿಡಿ ಚೂಡಿಗ ಎಳೆ ಮಿಡಿ ಹೈದನ ಮನ್ಸ್‌ನ ಕೆಡ್ಸಿತ್
ಪಾಠದ ಸಮಯಲಿ ಗುಮ್ಮನ ಹಾಂಗೆಂವ ಕನ್ಸ್‌ನ ಕಾಣ್ತಿತ್
ಸೇಕೆಲಿ ತೂಗಿದ ಅಪ್ಪನ ಪ್ಯಾಂಟುಂದ ದುಡ್ಡುನ ಕದಿತಿತ್
ಕ್ಲಾಸ್‌ಗೆ ತಪ್ಪುಸಿ ಪಾಯಿಕ್ಕಾನೆಲಿ ಬೀಡಿನು ಎಳೆತಿತ್ತು
ಎಲ್ಲಾರ ನಡುಲಿ ಅಮ್ಮುಣಿ ಗೂಡೆ ಬಾರಿ ಮಿಂಚುತಿತ್
ಕಾಲುನ ಗೆಜ್ಜೆಗೂ ಕೈಬಳೆಗಳಿಗು ಗಿಣಿಗಿಣಿ ಸದ್ದಿತ್ತು
ಗಿಣಿಗಿಣಿ ಸದ್ದುಗೆ ಮೈಮನ ಮರ್ತು ಹೈದನು ಹಾಳಾತು
ಗೂಡೆಸ ಸೆಂಪುಲಿ ಓದುದು ಅಂತು ಎಲ್ಲೋ ಬುಟ್ಹೋತು
ಚಿಮ್ಮುಣಿ ದೀಪದ ಮಿಣಿಮಿಣಿ ಬೊಳ್ಪುಲಿ ಕಾಗದ ಬರಿತಿತ್ತು
ಹಗಲಿಡಿಯಾಗೋಳು ಗೂಡೆನ ನೆನ್ಸಿದು ಕಾಲನು ಕಳಿತಿತ್ತು
ಪರೀಕ್ಷೆ ಎಲ್ಲ ಹಕ್ಕಲೆ ಬಾತು ಓದುವ ಮನ್ಸದು ಎಲ್ಲೋ ಹೋತು
ಹೈದನ ನೆನ್ಸದೆ ಓದಿದು ಗೂಡೆ ಎಲ್ಲಾಂರ್ದ ಮುಂದೆಲಿ ಪಾಸಾತು
ಕಾಲನು ಕಳ್ತು ಕಾಲೇಜು ಮುಕ್ತು ಗೂಡೆನು ಊರುಗೆ ಹೊರ್ಹೋತು
ಮಾರ್ಣ್ಕೆನ ನೋಡಿರೆ ಸರ್ಕಾರಿ ಕೆಲ್ಸ ಗೂಡೆನ ಪಾಲುಗೆ ಸಿಕ್ಕಾತು
ಮನ್ಸ್‌ನ ತಿಳಿಯದೆ ಮೊಸ್ಸನ ನಂಬಿದು ಹೈದನ ಬಾಳು ಹಾಳಾತು
ಓದುನು ಇಲ್ಲದೆ ದುಡ್ಡುನ ಕಳ್ದು ಅವನಾ ಹಣೆಬರ ಹೀಂಗಾತು
ಹಗಲಿರ್ಲೆಲ್ಲಾ ಎದೆ ಹೊಡಿ ಮಾಡ್ದ ಅಪ್ಪನ ಕನ್ಸ್ ಚೂರಾತ್
ಬಂಗನು ಬಂದು ಸಾಲೆಗೆ ಕಳ್ಸಿದ ಮನ್ಸದು ಅಂದು ಬೆಂದೊತು
ಅಪ್ಪನ ಹಾಂಗೆ ಮಂಜನು ಕೂಡ ಗದ್ದೆಗೆ ಗೊಬ್ಬರ ಹೊರುತಿತ್ತು
ಗೂಡೆನ ನೆನ್ಸಿದು ಯಾಗೊಳು ಮನ್ಸ್‌ಲಿ ಬೇಜಾರ್‌ಲಿ ದಿನ ಕಳೆತಿತ್ತು



ಹೀಗೊಬ್ಬ ಬುದ್ಧ

ದಿಂಬು ಹಾಸಿಗೆ ಇತ್ತು
ಚೊಂಬು ಹಾಲುನು ಇತ್ತ್
ಕೈಗೊಂದು ಕಾಲ್ಗೊಂದು ಆಳುಗಳು ಇತ್ತ್
ನಿದ್ದೆಯದು ಅವಂಗಿತ್ಲೆ
ಉದ್ರೇಕ ಮೊದ್ಲು ಇತ್ಲೆ
ಮಡದಿ ಮಕ್ಕಳ ಚಿಂತೆ
ಒಂದಿಷ್ಟು ಇತ್ಲೆ
ಕಂಡಿತ್ತ್ ಹೆಣನ ಅಂವ
ಬೇಡಾಯ್ತು ಹಣ ಅವಂಗೆ

ರೋಗಿಗಳ ನೋಡಿತ್ತ್
ನೋಡಿ ಮನ ಮರಗಿತ್ತ್
ಹೋಗಿ ಮಾತಾಡ್ಸಿತ್ತ್
ಅಜ್ಜ ಅಜ್ಜಿಕ್ಕಳ ನೋಡ್ತ್
ಬೊಜ್ಜದಳ್ಗೆಲ ನೋಡ್ತ್
ಕುಂಟ ಕುರುಡರ ನೋಡ್ತ್
ಸೊಂಟ ಬರದವರ ನೋಡ್ತ್
ಅಖಿಲ ವೈಭವದ ಮದ ಅವಂಗೆ ಬೇಡಾಗಿತ್ತ್
ಅರೆಮಡೆನ ಸವಿತುತ್ತು ಮುದನೀಡಿತ್ತ್
ಗಡ್ಡ ಅದು ಬೆಳ್ದಿತ್ತ್
ಕಾಂತಿಹೀನಮುಖಲಿ ಶಾಂತಿ ಬಯಸುತಿತ್ತ್
ನಟ್ಟಿರುಳರಾತ್ರಿಲಿ ಮನೆ ಬುಟ್ಟು ಹೊರ್ಟಿತ್ತ್
ಶಾಂತಿ ಅವಂಗೆ ಬೇಕಿತ್ತ್
ಬ್ರಾಂತಿ ಅದೋ ಏನ್ಗೊತ್ತ್
ಮನದ ಬೇಗುದಿಲಿ ಅದು ತುಡಿಯುತಿತ್ತ್
ನಡು ಇರ್‍ಲ್ ಎದ್ದಿತ್ತ್
ಕೊತ್ತಿ ಹಾಲ್ಮಡ್ಕೆ ಮಗ್ಚಿ ಓಡ್ತು
ಶುಭ್ರಹುಣ್ಣಿಮೆ ಬೊಳ್ಪಿತ್ತ್ ಹೊರಗೆ
ಕಪ್ಪೆ ವಟಗುಟುತ್ತಿತ್ತ್ ಹುಚ್ಚು ಕಿರಿಗುಡುತಿತ್ತ್
ಪಿರಿಪಿರಿನ ಆಟಿ ಮಳೆ ಸುರಿಯುತಿತ್ತ್
ಬಾಗ್ಲ್ ತೆಗ್ದ್ ಹೊರ್ಟಿತ್ತ್ ಅಂವ
ಗಂಟು ಮೂಟೆನ ಕಟ್ಟಿ
ಬೀದಿ ನಾಯಿಗ ಬೊಗಳುತಿತ್ತ್ ಕಚ್ಚಿಕ್ಕೊವಾಂಗೆ
ಹೋತಿತ್ತ್ ಕಾಡುದಾರಿಲಿ ಬೇತಾಳನಾಂಗೆ
ಬೊಳ್ಪಾಗುತ್ತಿದ್ದಂಗೆ ಮನೆನೊಂದು ಸೇರ್ತು
ಅವ ಬಯಸಿದೇ ಒಂದು
ವಿಧಿ ಬರೆದದೇ ಒಂದು
ಶಾಂತಿ ಮದುವೆ ಆಗಿ ಗಂಡನ ಮನೆಲಿತ್ತ್
ಈ ಬುದ್ಧ ಅಂವ ಅಮಲೇರಿ ಮರದಡಿಲಿ ಮಲಗಿತ್ತ್



ಬಾರ್ಬರ್ ಕೇಪಣ್ಣ

ನಮ್ಮೂರ್ಲೆಲ್ಲ ಚೌರನ ಮಾಡ್ತಿತ್ತ್
ಚೌರಿಂಜ ಕೇಪಣ್ಣ
ಅವ ಬರದಿದ್ದರೆ ಕೆಲವರ ಮುಸುಂಡ್
ನೋಡಿಕೆ ಬೊತ್ತಣ್ಣ
ಕೆಲವರ ಗಡ್ಡ ಮುಳ್ಳಂದಿನಾಂಗೆ
ಮೀಸೆಗ ಕೆಲವು ಇಟ್ಟೆನ ಹಾಂಗೆ
ಹಿಪ್ಪಿನ ಬೆಳ್ಸಿದ ಮಕ್ಕದು ಎಲ್ಲ
ಕಾಡ್‌ಲಿ ಇರುವ ಮುಚ್ಚನ ಹಾಂಗೆ
ಹೆಗ್ಲ್‌ಲಿ ಒಂದು ಜೋಳಿಗೆ ಇರ್ದು
ಒಳಗೆದು ಕತ್ರಿ ಬಾಳುನು ಇರ್ದ್
ಕೈಲ್ಯದ್ ಒಗ್ಯೆನ ಕಾಯಿನು ಇರ್ದು
ಬೊಳ್ಪಾಕನ ಅಂವ ಮನೆ ಮನೆಲಿರ್ದ್
ನೀರಡಿ ಕೋಟೆಗೆಲಿ ನೀರದು ಕಾಯ್ದು
ಮಕ್ಕವು ಚೌರಾಗಿ ಮೀಯಕೆ ಇರ್ದು
ಜಾಲ್‌ನ ಮೂಲೆಲಿ ಕುರ್ಸಿನ ಇಸಿದ್
ಮನೆವರ್ದೆಲ್ಲ ಚೌರನ ಮಾಡ್ದು
ದೊಡ್ಡವರ್ದೆಲ್ಲ ಗಡ್ಡನ ತೆಗಿದು
ಹಂದಿನ ಕೆರಿವಾಂಗೆ ಬರಬರ ಕೆರಿದು
ಬೊಡ್ದ್ ಅದ್ ಆದರೆ ಬಾಳುನ ಹಿಡ್ದ್
ಮೊಗ್ಚಿದ್ ಮೊಗ್ಚಿದ್ ಚರ್ಮಕೆ ಉಜ್ಜುದು

ಮಕ್ಕಳ್ಟೆಲ್ಲ ಕುರೋಪು ಮಾಡ್ದ್
ಉರ್ಡಿರೆ ಕ್ರೋಪದು ಕುರೆರೂಪಾದು
ಚೆಡಿ ಚೆಡಿ ಬಿದ್ದ್ ತಲೆ ಅದು ಎಲ್ಲ
ಅಲ್ಲಲ್ಲಿ ಹೆಗ್ಗಣ ತಿಂದಾಂಗು ಆದು
ಅಗ್ಯೋತ್ ಆಗ್ಯೋತ್‌ಂಗಾಗ ಹೇಳ್ದ
ಉರ್ದುವ ಮಕ್ಕಳ ಹೆಡ್ಡನು ಮಾಡ್ದ್
ಉಪಾಯಲಿ ಅಂವ ಕತ್ರಿನ ಹಾಕುದು
ಊರುಲೇ ಇಲ್ಲದ ಪರ್ಸಂಗ ಹೇಳಿ
ಮಕ್ಕದು ಕುದ್ದವೆ ಕತೆನದು ಓಲ್ಪಿ
ಪೊಂಬೆಲಿ ಕುದ್ರುವ ಗೀಣನಹಾಂಗೆ
ಕರೆ ಮುರೆನೆಲ್ಲ ಬಾಳ್‌ಲಿ ಕೆರ್ಕಿ
ಹೋಸಿದ ಅರುವೆನ ತೆಗ್ದ್ದದ್ ಕೊಡ್ಕಿ
ನೋಡಣ್ಣಾ ನಿನ್ನ ಮೋರೆನಂತೇಳಿ
ತೆಗ್ದೊಂದು ಒಡ್ಕಲ್ ಕನ್ನಡಿ ಹಿಡ್ಯೆದು
ಮದುವೆಗೆ ಬೊಜ್ಜಕ್ಕೆ ಊರವು ಎಲ್ಲಾ
ಚೌರಕೆ ಒಂದುಬಗೆ ಅವನನೆ ಕರಿದು
ಚೌರನ ಮಾಡ್ಕನ ಬಾಯಿಲೀ ತುಂಬ
ಎಲಾಡ್ಕೆ ತುಂಬುಸಿ ಅಕ್ಕಂಡೇ ಇರ್ದು
ಎಡೆ ಎಡೆ ನಿಲ್ಸಿ ಮಡೆನನು ಉಗಿದು
ಹಳ್ಳಿನ ಡಿಲ್ಲಿನ ಸುದ್ದಿನ ತೆಗಿದು
ಎಳ್ಳಷ್ಟುನೂ ಅಂವ ಹಲಾಕ್ ಮಾಡದೆ
ಚಲಾಕ್‌ಲಿ ಅಂವ ಚೌರನ ಮಾಡ್ದು
ಮಧ್ಯಾಹ್ನದೊಂದು ಊಟನ ಉಂಡ್
ತಿಂಗಳ ಕಟ್ಲೆನ ಬತ್ತನ ಹೊತ್ತ್‌ಕಂಡ್
ಮತ್ತೆನ ವಾರಲಿ ಮತ್ತೆ ಅಂವಬಾದು
ಮಕ್ಕದ್ ನಾಂವಂದ್ ಅವನನೆ ಕಾಯ್ದು
ಹೊಸಹೊಸ ಕತೆಗಳ ಮಾಲೆನೇ ತಾದು
ಅಂವ ಚೌರಿಂಜ ಕೇಪಣ್ಣ
ನಮ್ಮೆಲ್ಲರ ಪ್ರೀತೀನ ಬಾರ್ ಬಾರ್ ಕೇಪಣ್ಣ

ಪೇಟೆನ ಗೂಡೆ

ಪೇಟೆಲಿ ಕಲಿವ ಗೌಡ್ರ ಮಗ್ಳ್
ಊರುಗೆ ಬಾತಿತ್
ಪರೀಕ್ಷೆ ಎಲ್ಲ ಕಳ್ದ್‌ದ್ ಮತ್ತೆ
ಶಾಲೆಗೆ ರಜೆ ಇತ್
ಬನಿಯನ್ ನಂತ ಕುಡ್ತನ ಹಾಕಿ
ಎರ್ಡ್ನೂ ಕಾಲುಗೆ ಪೇಂಟುನ ಹಾಕಿ
ಎತ್ತರ ಹಿಮ್ಮಡಿ ಜೋಡುನ ಹಾಕಿ
ಬಾವ ಬರಲಿತ್, ಗೂಡೆ ಹಳ್ಳಿಗೆ ಬಾತಿತ್
ಟಕ ಟಕ ತೇಳಿ ಸದ್ದ್‌ನ ಮಾಡಿ
ಕುದುರೆನ ಹಾಂಗೆ ನಡೆತಿತ್
ಹಳ್ಳಿನ ಬುಟ್ಟುದ್ ಕಲ್ಯಕದು ದೂರನ ಪೇಟೆನ ಸೇರಿತ್
ಲಂಗನು ರವ್‌ಕೆನು ಉದ್ದನ ಜಡೆನು ಎಲ್ಲಾ ಮರ್ತಿತ್
ಹೊಸ ಅವತಾರನ ತಾಳಿದು ಮತ್ತೆ ಮನೆಗದು ಬಾತಿತ್

ಕುದಲದ್ ನೋಡು ಕುದುರೆನ ಬೀಲ
ಬೆನ್ನುಲಿ ನೋಡು ಕಟ್ಟುವ ಚೀಲ
ನಡಿವ ಸದ್ದುಗೆ ಬೊಗುಳುವೆ ಎಲ್ಲ
ನಾಯಿಗ ಪೂರ ಮನೆ ಮನೆದೆಲ್ಲ
ಮೇಗಡೆ ಮನೆನ ಅಜ್ಜಿಕ್ಕ ಎಲ್ಲ ಮಟ ಮಟ ತೇಳಿ ಬೊಗ್ಗಿದ್ ನೋಡಿವೆ
ದಾರಿಲಿ ಬಾವ ಗೂಡೆನ ನೋಡಿ
ಎಂತಪ್ಪ ಇದು ಹೊಸ ಕೋಲಂತ ಹೇಳುವೆ
ಉರ್ಬುಳಿ ಓಡುವ ಸಣ್ಣ ಮಕ್ಕ
ಅದರ ಹಿಂದೆ ಹೋದವೆ ಜೇನ್ನೇಳನಾಂಗೆ

ಬೀಲನ ಎತ್ತಿ ಕುತ್ತನು ಮಾಡಿ
ದನಂಗದ್ ತೆಲ್ಗಿವೆ ದಾರಿಂದ ಓಡಿ
ಕೈಲಿ ಪೆಟಿಗೆನು ಇತ್ತ್
ತುಟಿಗೆ ಕೆಂಪುನ ಬಣ್ಣನ ಹಾಕಿತ್ತ್
ದಾರಿಲಿ ಬಾವ ಅಜ್ಜಂದರೊಟ್ಟಿಗೆ
ಇಂಗ್ಲಿಸೇ ಬುಡುತ್ತಿತ್ತ್
ಬಾಸೆಯದು ಒಂದು ಅರ್ತನೆ ಆಗದೆ
ಅವು ಮೋರೆನೆ ನೋಡ್ತಿದ್ದ.

ಕನ್ನಡ ಮಾತಡ್ದುಲೆ ಅರೆ ಭಾಷೆ ಗೊತ್ಲೆ
ಮಾತಾಡ್ದೇ ಅದು ಇಂಗ್ಲೀಸೇ
ಮಾಮ್ಮಿ ಪಪ್ಪ ಗಡ, ಗುಲಾಬಿ ರೋಸ್ ಗಡ
ಮಾಯ್ಣಣ್ಣು ಮೇಂಗೋ ಗಡ
ನೆರೆ ಕರೆ ಮನೆದುರಾಗಿ ಕೆರೆ ಕರೆನ ದಾರ್‍ಯಾಗಿ
ಹಸುರುನ ಗದ್ದೆನ ಪುಣೆಲ್ಯಾಗಿ
ಹೋತಿತ್ತ್ ಗೂಡೆ, ದಂಡುಲಿ ಹೋವ
ಸಿಪಾಯಿನಾಂಗೆ.

ದ್ಯಾಪುನ ದೆವ್ವದ ಕೋಲ

ಮಂಜಂಗೆ ತಂದಾತು ನೊಜ ಹೆಗಲುಗೆ ಬೀತು
ಅವ್ವಂಗೆ ಗುಣ ಆಗಿ ದೆವ್ವಕ್ಕೆ ಕೊಡಿಕಿತ್ತ್
ದ್ಯಾಪುನ ಮನೆ ಎದುರು ಚಪ್ಪರನು ಹಾಕ್ಯೊಳ
ದಿನ ಮುಂದೆನೆ ಜಾಲುಗೆ ಸೆಗ್‌ಣೆ ಗುಡ್ಸಿಸಿಯೊಳ
ಮೂಲೆ ಮೂಲೆಗೆ ತೋರಣನು ಕಟ್ಯೊಳ

ಮಲಿಯಂವ ಬಂದು ಒಲಿಯೆಲ್ಲ ಸಿಗ್ದ್
ಮೋರೆಗೆ ಬಣ್ಣ ಹಾಕಿದೆಯ
ಚಂಡೆನು ಬೊಡ್ಡವೆ ವಾಲಗ ಉರ್ಗಿವೆ
ಗರ್ನಾಲು ಉದ್ದಕೆ ಹೊಡ್ಡವೆಯಾ
ಕೊಡಿಯಡಿ ಎದುರು ಜನಂಗವು ಸೇರ್‍ಯೊಳ
ಎಲ್ಲರಂದ ಮುಂದೆ ಎಜಮಾರ್‍ರವು ಒಳ
ಬಿಗ್ದಳ ಮುಂಡಾಸು ಮುವತಾರ್‍ಯೊಳ
ನೆಂಟ್ರ್‍ಗ ಮನೆವು ಊರವು ಸೇರ್‍ಯೊಳ
ಅಕ್ಕಿನ ಕೊಟ್ಟದೆ ಊರುನ ಮೊಡ್ಯಳ

ಕೇಪುಳು ಹೂವುನ ತಲೆಗದ್ ಕಟ್ಟಿ
ಬೆನ್ನುಗೆ ಅಣೆನ ಕಾಸಿದ್ ಗಟ್ಟಿ
ದೆವ್ವದ್ ಹೊರ್ಟ್‌ತ್ ಬೇಗ ಅದು ಕೋಣಿಕೆ
ಕಣ್ಣುನ ಹೊರ್‍ಡ್ಸಿಸಿ ಸುರ್ಗೆನ ದರ್ಪಿಸಿ
ಗಿಜಿ ಗಿಜಿ ತೇಳಿ ಗಗ್ಗರ ಆಡ್ಸಿ
ದೆವ್ವದ್ ಕೊಣ್ದದೆಯಾ
ಪೆರೆ ಪೆರೆ ತೇಳಿ ಉರ್ಗುವ ಸಾಂತುನ ಮಾಮುಲು ರಾಗಕೆಯಾ

ಹಣೆಗೆನು ಮೈಗೆನು ಗಂಧನು ಹಾಕ್ಯೊಳ
ಕೆಂಪುನ ಅರುವೆನ ದಟ್ಟಿನ ಕಟ್ಯೊಳ
ಬೆಳ್ಚಪಾಡ್ಯಗ ಪುಡೆಗೆನೆ ನಿತ್ತಳ
ಅರ್ಭಯಿ ಕೊಟ್ಟು ಕಿಚ್ಚಿಗೆ ಹಾರಿದ್
ಸುರ್ಗನ ದರ್ಪಿಸಿ ಎದೆಗದು ಕಡ್ದ್
ಅಜ್ಜಿಕ್ಕ ಅಜ್ಜಂಗ ಹೆಣ್ಮಕ್ಕ ಎಲ್ಲಾ
ಸಾಮೀೀೀಂ ತೇಳಿವೆ ಕೈನೂ ಮುಗ್ದವೆ
ಕುರೆ ಮೊರಿನಾಂಗೆ ಸಣ್ಣ ಮಕ್ಕ ಕೋಸಿ ಹಿಡ್ದವಳಯಾ
ದೆವ್ವನ ನೋಡಿದು ಹೆದ್ರಿದು ಅಯ್ಯೆನ ಅಪ್ಪನ ಸೊಂಟಲಿಯಾ
ದೊಂದಿನ ಬೊಳ್ಪಲಿ ಹೊತ್ತ್‌ದು ತಂದೊ ಹರ್ಕೆನ ಹಂದಿನಯಾ
ಹಂದ್ಯಂದು ಮರ್ಪದೆ ಬುಡಿಬುಡಿಂತ ರಂದಿ ಸಿನ್ನೆಂದಲೇ ಅದು ಗೂಡುಲಿ ಬಂಧಿ
ದೆವ್ವಕೆ ಕೊಣ್ದು ಬಿರೆಕೆನು ಅತು
ತಲೆಯೊಂದು ಕಡೆಕೆ ಬಾಕಿಯೊಂದ್ ಇತ್ತ್
ಹಂದಿನ ಮಾರಿಕಳಕ್ಕೆ ಹೊತ್ತ್‌ಕೊಂಡ್ ಹೋದ
ದೆವ್ವನ ಹಿಂದೆ ಎಲ್ಲವು ಹೋದ
ಗಟ್ಟಿನ ಹುಡ್ಗರು ಕೈಕಾಲು ಹಿಡ್ದ
ಗಂಟ್ಲ್‌ಗೆ ಹೂವುನ ಮಾಲೆನು ಹಾಕಿದ
ದೆವ್ವದ್ ಗಂಟ್ಲ್‌ಗೆ ಗುರ್ತನು ಮಾಡ್ತು
ಬಾಳ್‌ಕತ್ತಿಲೊಬ್ಬ ನಾಳಿನ ಕೊಯ್ತು
ಕಾರಂಜಿನಾಂಗೆ ನೆತ್ತರು ಹಾರ್ತ್
ದೆವ್ವದು ನೋಡ್ ಗಟಗಟ ಕುಡ್ತು
ಹಿಂಬೊತ್ತಾಕನ ದೆವ್ವನು ಬಿರ್ತ್
ಹಂದ್ಯಂದು ಸಜ್ಜಾಗಿ ಗೈಪುನು ಆತು
ಬಂದವ್ಕೆಲ್ಲ ಚಪ್ಪರದಡಿಲಿ ಹಂದಿಗೈಪುನ ಊಟನೂ ಇತ್ತ್
ಚುರ್ಕರಕುದ್ದ್ ಉಂಡ ಅವು ಎಲ್ಲಾ
ತುಂಡುನ ಎಲ್ಲಾ ಕಚ್ಚಿದ್ ಎಳ್ದ
ಮನಾರ ಉಂಡು ಕಿನಾರ ಹೊದ
ದೆವ್ವಕ್ಕೆ ಬಂದ ಊರ್‌ನ ಜನಂಗೆಲ್ಲ

ಬಂಟಮಲೆ ಪ್ರಕಾಶನ ಹೊರತಂದಿರುವ ಕೃತಿಗಳು

1993	:	'ಕಾಮನಬಿಲ್ಲಿನ ಸೈನಿಕರು' - ಸಂಜೀವ ಕುದ್ಪಾಜೆ (93ರ ಅತ್ಯುತ್ತಮ ಯುವ ಕೃತಿ-ಉದಯವಾಣಿ) - ಕನ್ನಡದ ಪ್ರಪ್ರಥಮ ಪರಿಸರ ಕವನ ಸಂಕಲನ
1995	:	'ಹಿರಣ್ಯ ಗರ್ಭ' - ಕೆ.ಆರ್. ತೇಜಕುಮಾರ್ ಬಡ್ಡಡ್ಕ (`ಸ್ಪಂದನ'ಸಾಹಿತ್ಯ ಪ್ರಶಸ್ತಿ ವಿಜೇತ ಕಾದಂಬರಿ)
1995	:	'ಕೆದಂಬಾಡಿ ರಾಮ ಗೌಡ' (ನಾಟಕ) - ಕೆ.ಆರ್. ವಿಧ್ಯಾದರ್‌ಬಡ್ಡಡ್ಕ
2000	:	'ನೇಮ' (ಕಥಾ ಸಂಕಲನ)- ಸುಂದರ ಕೇನಾಜೆ
2002	:	'ಅಂತರಂಗ' (ಕವನ ಸಂಕಲನ) - ತೀರ್ಥರಾಮ ಹೊದ್ದೆಟ್ಟಿ
2002	:	'ಎಸೆದು ನೋಡಿ! ಸುಟ್ಟು ನೋಡಿ' 'ಮನೆಗೆ ಬಂದ ನೀಲಿ ಕುದುರೆ' (ನಾಟಕಗಳು) - ಎ.ಕೆ. ಹಿಮಕರ
2003	:	'ತೊಂಬರ' ಗೌಡ ಕನ್ನಡದ ಮೊತ್ತಮೊದಲ ಕವನ ಸಂಕಲನ -ಯಶವಂತ ಕುಡಕಲ್ಲು
2003	:	'ಸಡಗರ' ಗೌಡ ಕನ್ನಡದ ಪ್ರಪ್ರಥಮ ಕವಿಗೋಷ್ಠಿಯಲ್ಲಿ ವಾಚಿಸಿರುವ ಕವನಗಳ ಸಂಗ್ರಹ ಕೃತಿ - ಸಂಪಾದಕರು ಎ.ಕೆ. ಹಿಮಕರ ಮತ್ತು ಸಂಜೀವ ಕುದ್ಪಾಜೆ
2003	:	'ಇಣುಕು ನೋಟ' - ತೀರ್ಥರಾಮ ಹೊದ್ದೆಟ್ಟಿ ಕವನ ಸಂಕಲನ
2003	:	'ಉಗ್ಗಪ್ಪ ಗೌಡರ ವಿಜಯೋತ್ಸವ' - ಕೆ. ಆರ್. ತೇಜಕುಮಾರ್ ಬಡ್ಡಡ್ಕ (ಕಥಾ ಸಂಕಲನ)
2003	:	'ಮೋಟಿ ಗೂಡೆನ ಮೊದುವೆ' - ಹೊದ್ದೆಟ್ಟಿ ಭವಾನಿಶಂಕರ



ಯಶವಂತ್ ಕುಡಾಲ್

ಯಶವಂತ್ ಕುಡಾಲ್, ಪ್ರಸಿದ್ಧ ಕುಡಾಲ್ನ ಮನೆತನಕ್ಕೆ ಸೇರ್ದವ್. ದಿ| ಕೆ. ಪದ್ಮನಾಭ ನಾಗಪ್ಪರ್ ಮತ್ತೆ ಶ್ರೀಮತಿ ಶೇಷಮ್ಮನವರ ಮಂಗ.

ಯಶವಂತ್ ಗಡ್ರು ಬಾಸೆನ ಬ್ಯಾತಬಾಡಿನೊಳಗೆಂದ ಅಪರೂಪದ ಪದ್ಯಾಗ್ಳು ಕಟ್ಟಿ ತಂದನೆ. ನೋಡ್ರೆ ಇದ್ದಾಂಗೆ ನಾವು ಐವತ್ತ್ ವರ್ಷ ಹಿಂದೆ ಹೋದಾಂಗೆ ಅನ್ಸುದೆ. ನಮ್ಮ ಹಳೆತಲೆಮಾರ್ನವರೊಟ್ಟಿಗೆ ಕುದ್ಕ್ ಮಾತಾಡ್ದಾಂಗೆ ಆತೆ. ನಮ್ಮ ಮೂಲದ ಸಾಂಸ್ಕೃತಿಕ ಸತ್ವಗ ಅವರ್ ಪದ್ಯಾಗೆ ಇಳಿದು ಸ್ಪಷ್ಟ ಗೊತ್ತಾದೆ. ಮತ್ತೆ ಕಾಣ್ ಅನುಭವಿಸಿದಾರ ಸ್ಪಷ್ಟವಾಗಿ, ಸತ್ಯವಾಗಿ, ಪ್ರಬಲವಾಗಿ ಹೇಳುವ ಕಲೆಗಾರ್ ಅವರ್ ಸಿದ್ಧಿಸಿತ್ತು. ಅದೇ ಅವರ ಹೆಗ್ಗಳಿಕೆ. ನನ್ನ ಆಯ್ಕೆ ಕೂಡ ಅಷ್ಟೇ ಮಾನವೀಯತೆ ಎದ್ದ್ ಕಾಣದೆ. ಊರು ಬಗ್ಗೆ, ಜನರ ಬಗ್ಗೆ ಪ್ರೀತಿ ಕೊಂಡಾಟ ಬಿಟ್ಟು.

ತೊಂಬರ ನಿಡಕಾವ್ಯದ ಹಾಡಿನ ಪದ್ಯ ಪುಸ್ತಕ. ಯಶವಂತರಿಗೆ ಹಾಡಿಗೆ ಜನ ಅಭಿಮಾನಿಗ ಬ್ಯಾರೆ. ಇವರ ಪದ್ಯಗ ಯುವಜನ ಮೇಳಲ, ಎನ್.ಎಸ್.ಎಸ್. ಕ್ಯಾಂಪುಗಳು, ಬಾಲ ಸೇವಾದಳ. ಎಷ್ಟೊಂದು ಮಕ್ಕಳ ಬಾಯಲಿ ಇವರ ಪದ್ಯದ ಸಾಲ್ ಯಾಗೊಳ್ಳು ಬರ್ತ ಇದ್ದದೆ.

ಯಶವಂತರ ಪದ್ಯ ಮಾನವೀಯತೆಗೆ ಒತ್ತು ಕೊಟ್ಟು. ಜನಸಾಮಾನ್ಯರಿಗೆ ಜಾಗೆ ಕೊಟ್ಟು. ಪ್ರೀತಿ ಕೊಟ್ಟು. ಆಶೆ ಬಾಶೆ ಕೊಟ್ಟು. ಹೊನ್ನಕ್ಕೆ ಭಾವನಿಕ್ರಂದ ಮತ್ತೆ ಯಶವಂತರಿಗೆ ನಾವ ತೋರ್ಸುವ ಲಕ್ಷ್ಯಾ ಕಾಣದೆ.

— ಎ. ಕೆ. ಕುಮಾರ